ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಗೊರೂರು

ಪ್ರಧಾನ ಸಂಪಾದಕರು

**ಡಾ. ಬಿ. ವಿ. ವಸಂತಕುಮಾರ್**

ಸಂಪಾದಕರು

**ಡಾ. ಎಸ್. ಜಿ. ರಾಮದಾಸ ರೆಡ್ಡಿ**

ಲೇಖಕರು

**ಡಾ. ಯೋಗೇಶ್ ಎನ್. ಇ.**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨
ದೂರವಾಣಿ: ೦೮೦-೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ-ಮೇಲ್: sahithya.academy@gmail.com

**GOROORU:** An Introduction Book on Places in Karnataka that Played a Major Role in the Freedom Struggle, Written by Dr. Yogesh N.E., Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ : ೨೦೨೨
ಪ್ರತಿಗಳು : ೧೦೦೦
ಬೆಲೆ : ರೂ. ೩೦/-
ಪುಟ : ೮೮


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೮೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**


ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಫಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ವಸಾಹತುಶಾಹಿ ಮತ್ತು ರಾಷ್ಟ್ರೀಯತೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಮೊಘಲ್ ಸಾಮ್ರಾಜ್ಯದ ಅವನತಿ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಗೆ ನಾಂದಿಯಾಯಿತು. ವ್ಯಾಪಾರಕ್ಕಾಗಿ ತಕ್ಕಡಿ ಹಿಡಿದು ಭಾರತಕ್ಕೆ ಬಂದಿದ್ದ ಬ್ರಿಟಿಷರು ಇಲ್ಲಿಯ ಅನೈಕ್ಯ ರಾಜಕೀಯ ಪರಿಸ್ಥಿತಿಯ ಲಾಭ ಪಡೆದು ಶಾಶ್ವತ ಸಾಮ್ರಾಜ್ಯದ ಸ್ಥಾಪನೆಯ ಕನಸು ಕಂಡು ಕಾಲಾನಂತರ ಆ ಕನಸನ್ನು ನೆನಸು ಮಾಡಿಕೊಂಡರು. ಐರೋಪ್ಯರಲ್ಲಿಯೇ ಪ್ರಭಾವಶಾಹಿಗಳಾಗಿದ್ದ ಇಂಗ್ಲಿಷರು ಭಾರತದಲ್ಲಿ ತಮ್ಮ ವಸಾಹತು ಸಾಮ್ರಾಜ್ಯ ಸ್ಥಾಪಿಸಿ ಸುಮಾರು ಎರಡು ಶತಮಾನಗಳ ಕಾಲ ಆಳ್ವಿಕೆ ನಡೆಸಿದರು. ಬ್ರಿಟಿಷರ ವಸಾಹತುಶಾಹಿ ಆಳ್ವಿಕೆಯ ಕಾಲದಲ್ಲಿ ಭಾರತೀಯರು ಒಳಿತು ಮತ್ತು ಕೆಡುಕುಗಳೆರಡನ್ನು ಅನುಭವಿಸಿದರು. ಅದರಲ್ಲೂ ಒಳಿತಿಗಿಂತ ಕೆಡುಕುಗಳೇ ಹೆಚ್ಚಾಗಿದ್ದವು. ಭಾರತೀಯರ ರಾಜಕೀಯ ಸ್ವಾತಂತ್ರ್ಯವೇ ಕಳೆದುಹೋಯಿತು. ಸಂಪತ್ತಿನ ಸೋರಿಕೆಯಿಂದ ಕೃಷಿ, ಗೃಹ, ಗುಡಿ ಕೈಗಾರಿಕೆಗಳು ವ್ಯಾಪಾರ ವಾಣಿಜ್ಯ ಮುಂತಾದವುಗಳೆಲ್ಲವೂ ನಾಶವಾಗಿ ಭಾರತವು ಬಡ ರಾಷ್ಟ್ರವಾಗಿ ಪರಿಣಮಿಸಿತು.

ಮತ್ತೊಂದು ಕಡೆ ಪಾಶ್ಚಿಮಾತ್ಯ ಸಂಸ್ಕೃತಿ ಭಾರತೀಯ ನೆಲದಲ್ಲಿ ಪಸರಿಸ ತೊಡಗಿ ಇಂಗ್ಲಿಷ್ ಶಿಕ್ಷಣಪದ್ಧತಿ, ವೈಚಾರಿಕತೆ ಹಾಗೂ ವೈಜ್ಞಾನಿಕ ಮನೋಭಾವನೆಗಳು ಬೆಳೆದು ಪರಂಪಾರಾನುಗತವಾಗಿ ಬೆಳೆದು ಬಂದಿದ್ದ ಭಾರತೀಯ ಸಮಾಜದಲ್ಲಿ ಪರಿವರ್ತನೆಯ ಪರ್ವ ಆರಂಭಗೊಂಡಿತು. ಇದರ ಪ್ರತಿಫಲವೇ ಬ್ರಿಟಿಷರ ವಿರುದ್ಧ ಆರಂಭಗೊಂಡ ರಾಷ್ಟ್ರೀಯ ಚಳವಳಿ ಇದು ಪ್ರತಿಯೊಬ್ಬ ಭಾರತೀಯನ ದೇಶಪ್ರೇಮ ಹಾಗೂ ದೇಶಭಕ್ತಿಯ ಪ್ರತೀಕವಾಗಿತ್ತು. ೧೮೫೭ ರ ಸಿಪಾಯಿದಂಗೆಯಿಂದ ಆರಂಭಗೊಂಡು ೧೯೪೭ ರಲ್ಲಿ ಸ್ವಾತಂತ್ರ್ಯ ಪಡೆಯುವವರೆಗೂ ವಿವಿಧ ಹಂತಗಳಲ್ಲಿ ವಿವಿಧ ರೂಪುರೇಷೆಗಳೊಂದಿಗೆ

ನಡೆಯಿತು. ಈಗ ನಾವು ಸವಿಯುತ್ತಿರುವ ಸ್ವಾತಂತ್ರ್ಯವನ್ನು ಗಳಿಸುವುದಕ್ಕಾಗಿ ಸಾವಿರಾರು ಭಾರತೀಯರು ರಕ್ತ ಚೆಲ್ಲಬೇಕಾಯಿತು. ಲಕ್ಷಾಂತರ ಜನರ ತ್ಯಾಗ ಬಲಿದಾನದ ಪ್ರತೀಕವೇ ಈ ನಮ್ಮ ಸ್ವಾತಂತ್ರ್ಯ.

ಈ ವರ್ಷಕ್ಕೆ ನಮ್ಮ ದೇಶದ ಸ್ವಾತಂತ್ರ್ಯಕ್ಕೆ ೭೫ ವಸಂತಗಳು ತುಂಬಿದೆ. ಈಗ ನಾವು ಅನುಭವಿಸುತ್ತಿರುವ, ಸವಿಯುತ್ತಿರುವ ಸ್ವಾತಂತ್ರ್ಯವನ್ನು ಗಳಿಸುವುದಕ್ಕಾಗಿ ಭಾರತೀಯರು ನಡೆಸಿದ ಹೋರಾಟ ತ್ಯಾಗ ಬಲಿದಾನದ ಇತಿಹಾಸವನ್ನು ಸ್ಮರಿಸುತ್ತಾ ಪರಿಶೀಲಿಸುವುದಕ್ಕೆ ಹಾಗೂ ನಾವು ತಿಳಿದುಕೊಂಡು ಯುವ ಪೀಳಿಗೆಗೆ ತಿಳಿಸುತ್ತಾ ಮುಂದಿನ ಜನಾಂಗಗಳಿಗೆ ಹೋರಾಟದ ನೆನಪುಗಳನ್ನು ಸ್ಫೂರ್ತಿಯಾಗಿ, ಬಳುವಳಿಯಾಗಿ ನೀಡಲು ಸೂಕ್ತ ಸಮಯ. ಇಂತಹ ಮಹಾತ್ ಕಾರ್ಯಕ್ಕೆ ಮುಂದಾಗಿರುವ ಸರ್ಕಾರ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯವರ ಶ್ರಮ ಹಾಗೂ ಕಾರ್ಯ ಪ್ರಶಂಸಾರ್ಹವಾಗಿದೆ. "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಪುಸ್ತಕ ಮಾಲೆಯಲ್ಲಿ ನನ್ನನ್ನು ಗುರುತಿಸಿ ಹಾಸನ ಜಿಲ್ಲೆಯ ಗೊರೂರು ಭಾಗದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಲೇಖನ ಬರೆಯುವಂತೆ ಪ್ರೇರೇಪಿಸಿದಕ್ಕಾಗಿ ಘನ ಸರ್ಕಾರಕ್ಕೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಹಾಗೂ ಈ ಸಂಪುಟದ ಸಂಪಾದಕರಾದ ಡಾ. ಎಸ್. ಜಿ. ರಾಮ್‌ದಾಸ ರೆಡ್ಡಿಯವರಿಗೆ ನಾನು ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಪ್ರಾದೇಶಿಕವಾರು ಕರ್ನಾಟಕ ಸ್ವಾತಂತ್ರ್ಯ ಹೋರಾಟದ ರಚನೆ ಹಾಗೂ ಪುನ್ರಚನೆ ಅಷ್ಟು ಸುಲಭದ ಕೆಲಸವಲ್ಲ. ಪ್ರಸ್ತುತ ಇತಿಹಾಸ ಸಂಶೋಧನೆಯಲ್ಲಿ ಸಮಗ್ರ ಅಧ್ಯಯನಕ್ಕಿಂತ ಸೂಕ್ಷ್ಮ ಅಧ್ಯಯನ ಹೆಚ್ಚು ಸೂಕ್ತವಾಗಿದೆ. ಏಕೆಂದರೆ ಸೂಕ್ಷ್ಮ ಅಧ್ಯಯನದಲ್ಲಿ ಇಡೀ ಹೋರಾಟವನ್ನು ವಲಯವಾರು ವಿಂಗಡಿಸಿ ಇತಿಹಾಸದ ಪುಟಗಳಲ್ಲಿ ದಾಖಲಾಗಿರದೆ ಮರೆಯಾಗಿ ಇರುವ ಅಸಂಖ್ಯಾತ ಘಟನೆಗಳನ್ನು, ವ್ಯಕ್ತಿಗಳನ್ನು ಸಮಾಜಕ್ಕೆ ಪರಿಚಯಿಸಲು ಇದು ಅತ್ಯುತ್ತಮವಾದ ಅವಕಾಶ. ನನ್ನ ಲೇಖನದ ವ್ಯಾಪ್ತಿ ಹಾಸನ ಜಿಲ್ಲೆಯ ಗೊರೂರು ಭಾಗದ ಸ್ವಾತಂತ್ರ್ಯ ಹೋರಾಟವಾಗಿದ್ದು ಈ ಭಾಗದ ಸ್ವಾತಂತ್ರ್ಯ ಚಳವಳಿ ಅತ್ಯಂತ ವಿಶಿಷ್ಟವಾದ ಹಾಗೂ ಭಿನ್ನವಾದ ಹೋರಾಟವನ್ನು ಹೊಂದಿದ್ದು ಕರ್ನಾಟಕದ ಮಲೆನಾಡು ಭಾಗದ ಸೆರಗಿನಂತಿರುವ ಬಡವರ ಊಟಿ ಎಂದು ಕರೆಯಲ್ಪಡುವ



ಹಾಸನ ಜಿಲ್ಲೆಯ ಗೊರೂರು ಭಾಗವು ಪಶ್ಚಿಮ ಘಟ್ಟಗಳಿಗೆ ಹೊಂದಿಕೊಂಡಿದ್ದು ಅತ್ಯಂತ ಸೌಂದರ್ಯಯುತವಾಗಿ ಕಾಣುತ್ತದೆ. ಕಾಫಿ ತೋಟಗಳು ಹಾಗೂ ಉಪಬೆಳೆಗಳಾದ ಸಂಬಾರು ಪದಾರ್ಥಗಳ ಉತ್ಪನ್ನದಿಂದ ಈ ಪ್ರದೇಶ ಪಾಶ್ಚಿಮಾತ್ಯರನ್ನು ಆಕರ್ಷಿಸದೇ ಇರಲಿಲ್ಲ. ಮೈಸೂರು ಸಂಸ್ಥಾನದ ಭಾಗವಾಗಿದ್ದ ಈ ಪ್ರದೇಶದಲ್ಲಿ ಬ್ರಿಟಿಷರ ಪರೋಕ್ಷ ವಸಾಹತುಶಾಹಿ ಆಳ್ವಿಕೆಯ ಕರಿನೆರಳಿತ್ತು. ಮಹಾತ್ಮ ಗಾಂಧಿಜಿಯವರು ೧೯೨೭ ರಲ್ಲಿ ಹಾಸನಕ್ಕೆ ಭೇಟಿ ನೀಡಿದಾಗ ಅವರ ದರ್ಶನ ಹಾಗೂ ಭಾಷಣಗಳಿಂದ ಪ್ರಭಾವಿತರಾದ ಈ ಭಾಗದ ವಿದ್ಯಾವಂತ ಸಮುದಾಯ ಮೈಸೂರು ಕಾಂಗ್ರೆಸ್‌ನ ಸದಸ್ಯರಾಗಿ ಅನೇಕ ಚಳವಳಿಗಳನ್ನು ಸಂಘಟಿಸಿ ಗಾಂಧೀಜಿ ಹಾಗೂ ಈ ಭಾಗದ ಜನರ ನಡುವೆ ಕೊಂಡಿಯಂತಿದ್ದರು. ರಾಷ್ಟ್ರ ನಾಯಕರ ಸಂದೇಶವನ್ನು ಹೊತ್ತು ತಂದು ಯಶಸ್ವಿಯಾಗಿ ಈ ಭಾಗದ ಜನರಿಗೆ ತಲುಪಿಸಿ ಹೋರಾಟಗಳನ್ನು ಸಂಘಟಿಸಿ ರಾಷ್ಟ್ರ ಹಾಗೂ ರಾಜ್ಯ ನಾಯಕರುಗಳ ಮೆಚ್ಚುಗೆಗೆ ಪಾತ್ರರಾಗಿರುವುದು ಹೆಮ್ಮೆಯ ವಿಚಾರ. ಈ ಕೃತಿ ಮಾಲಿಕೆಯಲ್ಲಿ ಇಂತಹ ಅನೇಕ ಘಟನೆ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಪರಿಚಯ ಇಡೀ ನಾಡಿನ ಜನರಿಗೆ ತಲುಪಲು ಸಹಕಾರಿಯಾಗಿದೆ. ಹಾಗೂ ಈ ಕೃತಿಗಳು ಇತಿಹಾಸ ಆಸಕ್ತರಿಗೆ ಸಾಹಿತ್ಯ ಆಸಕ್ತರಿಗೆ ತಲುಪುವುದರ ಜೊತೆಗೆ ಜನಸಾಮಾನ್ಯರಿಗೂ ತಲುಪಿ ನಮ್ಮ ಸ್ವಾತಂತ್ರ್ಯ ಹೋರಾಟದ ಕಥೆ, ವ್ಯಥೆ, ನೋವು ನಲಿವುಗಳು ನಾಡಿನ ಪ್ರತಿ ಮನೆ ಮತ್ತು ಮನಸ್ಸುಗಳಿಗೆ ತಲುಪಿ ಯುವ ಮಿತ್ರರು ಹಾಗೂ ಮುಂದಿನ ಪೀಳಿಗೆಯ ಜನಾಂಗಕ್ಕೆ ಇದು ದಾರಿ ದೀಪವಾಗಲಿ ಎಂಬುದು ನನ್ನ ಆಶಯ.

ಸ್ಥಳ: ನಿಟ್ಟೂರು **ಡಾ. ಯೋಗೇಶ್ ಎನ್ ಇ,**

ದಿನಾಂಕ: ೨೨/೧೨/೨೦೨೧ ಇತಿಹಾಸ ಉಪನ್ಯಾಸಕರು

ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜು,

## ಪರಿವಿಡಿ


| | |
|---|---|
| ಶುಭ ನುಡಿ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ ಗೊರೂರು | ೧೭ |
| ಆಕರ ಗ್ರಂಥಗಳು | ೭೬ |
| ಗೊರೂರು ಭೂಪಟ | ೭೯ |
| ಗೊರೂರು ಭಾಗದ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು | ೮೦ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೮೨ |

# ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ
## ಗೊರೂರು

ಚರಿತ್ರೆ ಎನ್ನುವುದು ಎಲ್ಲಾ ನೆನ್ನೆಗಳು ಇಂದಿನ ವರ್ತಮಾನದಲ್ಲಿ ಬದುಕುತ್ತಿರುವುದು ಎಂದರ್ಥ. ಮನುಷ್ಯ ವರ್ತಮಾನ ಮತ್ತು ಭವಿಷ್ಯ ಮುಖಿಯಾದರೂ ಅವನು ಚರಿತ್ರೆಯ ಶಿಶುವಾಗಿಯೇ ಉಳಿಯುತ್ತಾನೆ. ಹೇಗೆ ಇಂದು ಈ ಕ್ಷಣವೆನ್ನುವುದು ಎಲ್ಲಾ ನೆನ್ನೆಗಳ ಮತ್ತು ಗತಿಸಿದ ಕ್ಷಣಗಳ ಮೊತ್ತವೋ ಹಾಗೆಯೇ ಇವತ್ತಿನ ಮನುಷ್ಯ ಹಿಂದಿನ ತಲೆಮಾರುಗಳ ಪ್ರತಿನಿಧಿ. ಎಲ್ಲಾ ಹಿಂದಿನ ತಲೆಮಾರುಗಳ ಅನುಭವದ ಮೇಲೆ ಇಂದಿನ ಮನುಷ್ಯ ಕಳಿತಿದ್ದಾನೆ.

ಗತಕಾಲದ ದೃಶ್ಯಗಳನ್ನು ಸಮಗ್ರವಾಗಿ ಪುನಃ ಅನುಭವಿಸುವುದಕ್ಕಾಗಿ ಗತಕಾಲದ ಘಟನೆಗಳು ಹೇಗೆ ಸಂಭವಿಸಿದ್ದವೋ ಹಾಗೆಯೇ ಅವುಗಳನ್ನು ಸಾಧ್ಯವಾಗುವಷ್ಟರ ಮಟ್ಟಿಗೆ ಪುನರ್ ರಚಿಸುವುದಕ್ಕಾಗಿ ಅಲ್ಲಿಯವರೆಗೆ ಪ್ರಚಲಿತದಲ್ಲಿದ್ದ ತಪ್ಪು ಅಭಿಪ್ರಾಯಗಳನ್ನು ಸರಿಪಡಿಸುವುದಕ್ಕಾಗಿ ಜ್ಞಾನದ ಬೆಳಕಿನಲ್ಲಿ ಭಾವನೆಗಳನ್ನು ವಿಶದೀಕರಿಸಿ, ವಿಶ್ಲೇಷಿಸಿ, ಸಂಯೋಜಿಸಿ ಗತಕಾಲದ ಒಳಹೊಕ್ಕು ವಿಷಯಗಳನ್ನು ಕೆದಕಿ ಮಾಡುವ ಅನ್ವೇಷಣೆಯೂ ಐತಿಹಾಸಿಕ ಸಂಶೋಧನೆ. ಈ ನನ್ನ ಲೇಖನದಲ್ಲಿ ಭಾರತದ ರಾಷ್ಟ್ರೀಯ ಚಳವಳಿಯ ಗ್ರಂಥ ಭಂಡಾರಗಳ ಪುಟಗಳಲ್ಲಿ ದಾಖಲಾಗದೇ ಇರುವ ಹಾಗೂ ಕರ್ನಾಟಕ ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿ ಅಜ್ಞಾತವಾಗಿರುವ ಸ್ವಾತಂತ್ರ್ಯ ಹೋರಾಟದ ಮೇರು ವ್ಯಕ್ತಿಗಳು, ವ್ಯಕ್ತಿತ್ವ ಮತ್ತು ಹೋರಾಟವನ್ನು ತೆರೆಯಮರೆಯಿಂದ ಜನತೆಗೆ ಪರಿಚಯಿಸುವ ಪ್ರಯತ್ನ ಇದಾಗಿದೆ.

ಭಾರತ ಸ್ವಾತಂತ್ರ್ಯದ ಎಪ್ಪತ್ತೈದನೆಯ ವರ್ಷಾಚರಣೆಯ ಈ ಶುಭ ಸಮಯದಲ್ಲಿ ಈಗ ನಾವು ಸವಿಯುತ್ತಿರುವ ಸ್ವಾತಂತ್ರ್ಯವನ್ನು ಗಳಿಸುವುದಕ್ಕಾಗಿ

ಭಾರತೀಯರು ನಡೆಸಿದ ಹೋರಾಟ, ತ್ಯಾಗ, ಬಲಿದಾನ, ನೋವು ನಲಿವುಗಳ ಇತಿಹಾಸವನ್ನು ಸ್ಮರಿಸುವುದಕ್ಕೆ ಇದು ಸೂಕ್ತ ಸಂದರ್ಭ. ಸ್ವತಂತ್ರ್ಯ ಭಾರತದಲ್ಲಿ ಬದುಕುತ್ತಿರುವ ನಾವು ಅದರ ರಚನೆಗೆ ವ್ಯಯವಾದ ಅಗಾಧ ಶ್ರಮ ಮತ್ತು ಬಲಿದಾನಗಳನ್ನು ತಿಳಿದುಕೊಳ್ಳಬೇಕು. ಕರ್ನಾಟಕ ಸ್ವಾತಂತ್ರ್ಯ ಚಳವಳಿಯ ಇತಿಹಾಸ ಅತ್ಯಂತ ರೋಚಕ ಹಾಗೂ ಆಸಕ್ತಿದಾಯಕವಾಗಿದ್ದು, ಅದೆಷ್ಟು ಐತಿಹಾಸಿಕ ಹೋರಾಟದ ಘಟನೆಗಳು ವ್ಯಕ್ತಿಗಳು ಇತಿಹಾಸ ಪುಟಗಳಿಂದ ಮರೆಯಾಗಿದೆ. ಈ ವಿಚಾರವಾಗಿ ಸಂಶೋಧಕರು, ಇತಿಹಾಸಕಾರರು, ವಿದ್ವಾಂಸರುಗಳು ಗಮನ ಹರಿಸಿ ಇತಿಹಾಸದ ಪುಟಗಳಲ್ಲಿ ಮರೆಯಾಗಿರುವ ಹಾಗೂ ಇತಿಹಾಸದ ಸಾಲುಗಳಲ್ಲಿ ಮೌನವಾಗಿರುವ ಅನೇಕನೇಕ ಐತಿಹಾಸಿಕ ವಿಚಾರಗಳನ್ನು ಸ್ವಾತಂತ್ರ್ಯ ಚಳವಳಿಯ ಘಟನಾವಳಿಗಳನ್ನು ಐತಿಹಾಸಿಕ ಮೌಲ್ಯಕ್ಕನುಗುಣವಾಗಿ ಹೊರತರುವ ಅವಶ್ಯಕತೆಯಿದ್ದು ಪ್ರಸ್ತುತ ಈ ಕಾರ್ಯ ಅತ್ಯಂತ ಶ್ಲಾಘನೀಯವಾಗಿದೆ. ಕರ್ನಾಟಕ ಸ್ವಾತಂತ್ರ್ಯ ಚಳವಳಿಯಲ್ಲಿ ರಾಜ್ಯದ ಎಲ್ಲಾ ಭಾಗಗಳಲ್ಲಿ ಅತ್ಯಂತ ಪರಿಣಾಮಕಾರಿಯಾದ ಹೋರಾಟಗಳು ನಡೆದಿದ್ದು, ಗೊರೂರು ಸೀಮೆಯ ಭಾಗದ ಹೋರಾಟವೂ ಕೂಡಾ ಅತ್ಯಂತ ರೋಚಕತೆಯಿಂದ ಕೂಡಿದ್ದು ಈ ಲೇಖನದಲ್ಲಿ ಗೊರೂರು ಭಾಗದ ಸ್ವಾತಂತ್ರ್ಯ ಚಳವಳಿಯ ಬಗ್ಗೆ ವಿವರಿಸುವ ಪ್ರಯತ್ನವಾಗಿದೆ.

ಹಾಸನದಿಂದ ದಕ್ಷಿಣಕ್ಕೆ ೨೩ ಕಿ.ಮೀ ದೂರದಲ್ಲಿರುವ ಹಾಸನ ಅರಕಲಗೂಡು ರಸ್ತೆಯಲ್ಲಿರುವ ಗೊರೂರು ಶ್ರೀ ಯೋಗಾನರಸಿಂಹಸ್ವಾಮಿ ಸನ್ನಿಧಿಯಲ್ಲಿದೆ.

**ಅಂದಕ್ಕೆ ಅರಕಲಗೂಡು ಚೆಂದಕ್ಕೆ ನರಸೀಪುರ**
**ಚಿತ್ತರದ ಗೊಂಬೆ ಗೊರವೂರು । ಬೀದಿಯ**
**ಹದಿನಾರು ತೇರು ಹರಿದಾವೆ**?

ಎಂದು ಜಾನಪದರು ಹೇಳುತ್ತಾರೆ. ಶಿಲ್ಪಕಲೆಯ ತವರು, ಶಾಸನಗಳ ಬೀಡು, ಸಾಂಸ್ಕೃತಿಕ ನಗರಿ, ವನಸಿರಿಯ ನಾಡು, ಜೈನರ ಕಾಶಿ ಎಂದು ಹೆಸರು ಪಡೆದಿರುವ ಹಾಸನ ಜಿಲ್ಲೆಯಲ್ಲಿ ಹೇಮಾವತಿ ಜಲಾಶಯ ಯೋಜನೆಯಿಂದಾಗಿ ಪ್ರವಾಸಿ ಕೇಂದ್ರ ಬಿಂದುವಾಗಿ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿರುವ ಗೊರೂರು ಐತಿಹ್ಯ ಸ್ಥಳವಾಗಿದೆ.



ಕ್ರಿ.ಶ.೧೫೬೮ರಲ್ಲಿ ಅರಕಲಗೂಡಿನ ಐಗೂರು ಪಾಳೆಗಾರನಾದ ಕೃಷ್ಣಪ್ಪನಾಯಕನು ಹೇಮಾವತಿ ನದಿಯಲ್ಲಿ ಸ್ನಾನ ಮಾಡಲು ಆಗಮಿಸಿದಾಗ, ಈ ಸ್ಥಳದಲ್ಲಿ ಇಬ್ಬರು ಅಣ್ಣತಮ್ಮಂದಿರು ಉದ್ಭವಗೊಂಡ ನರಸಿಂಹಮೂರ್ತಿಯನ್ನು ಪೂಜಿಸುತ್ತಿರುವುದು ಕೃಷ್ಣಪ್ಪನಾಯಕನಿಗೆ ತಿಳಿಸುತ್ತಾರೆ. ಆ ಅಣ್ಣ ತಮ್ಮಂದಿರ ಇಚ್ಛೆಯಂತೆ ನರಸಿಂಹ ದೀಕ್ಷೆಯನ್ನು ತೆಗೆದುಕೊಂಡು ನರಸಿಂಹಸ್ವಾಮಿಗೆ ಗರ್ಭಗುಡಿಯನ್ನು ನಿರ್ಮಿಸಿದ. ಈ ಒಂದು ಸ್ಥಳದಲ್ಲಿ ಗೋಕರ್ಣ ಋಷಿಗಳು ತಪಸ್ಸು ಮಾಡಿದ್ದರಿಂದ ಕೃಷ್ಣಪ್ಪನಾಯಕನ ಇಚ್ಛೆಯಂತೆ ಇಲ್ಲಿಗೆ ಗೋಕರ್ಣ ನಗರವೆಂದು ಹೆಸರನ್ನು ನಾಮಕರಣ ಮಾಡಿದರೆಂದು ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರವರ ಶ್ರೀಯೋಗನರಸಿಂಹಸ್ವಾಮಿ ದೇವಾಲಯ ಮಹಿಷ ಮತ್ತು ಚರಿತ್ರೆ ಎಂಬ ಕೃತಿಯಿಂದ ತಿಳಿದುಬರುತ್ತದೆ. ಕ್ರಿ.ಶ.೧೧೬೬ರ ಮಾವಿನಕೆರೆದಾನ ಶಾಸನದಲ್ಲಿ ವಿಜಯಾದಿತ್ಯ ಹೆಗ್ಗಡೆಯ ಸ್ಮರಣಾರ್ಥವಾಗಿ ವಿಜಯಾದಿತ್ಯಪುರವೆಂದು ಹಾಸನ ಶಾಸನ ಸಂಖ್ಯೆ ೧೮೨ರಲ್ಲಿ ಚನ್ನಕೇಶವಪುರ ಎಂದು ಕರೆಯಲಾಗಿತ್ತು. ಹೊಯ್ಸಳರ ಕಾಲದಲ್ಲಿ ಅಗ್ರಹಾರವಾಗಿತ್ತೆಂದು ಮೈಸೂರು ಗ್ಯಾಸೆಟಿಯರ್‌ನಲ್ಲಿ ತಿಳಿಸುತ್ತದೆ.

ಸಾವಿರಾರು ವರ್ಷಗಳ ಇತಿಹಾಸವುಳ್ಳ ಗೊರೂರು ಹೊಯ್ಸಳರ ಕಾಲದಲ್ಲಿ **'ಶತರುದ್ರೀಯಪುರ'** ಎಂದು ಪ್ರಸಿದ್ಧವಾಗಿತ್ತು. ನಂತರ ೧೫ನೇ ಶತಮಾನದಲ್ಲಿ ಕೃಷ್ಣಪ್ಪನಾಯಕ ಈ ಪ್ರದೇಶವನ್ನು **ಗೋಕರ್ಣನಗರ**ವೆಂದು ಕರೆದಿದ್ದಾರೆ. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ೮ ರಲ್ಲಿ ಹಾಸನ ತಾಲ್ಲೂಕಿನ ೧೭೬, ೧೮೧ ನೇ ಶಾಸನದಲ್ಲಿ ಉಕ್ತವಾಗಿದ್ದರಿಂದ **'ಗೊರವರ ಊರ'** ಪದವನ್ನು ಬಿಡಿಸಬೇಕಾಗುತ್ತದೆ. ಗೊರವ ಊರು ಎಂದಾಕ್ಷಣ ಊರಿಂದೂರಿಗೆ ಹಾಡುತ್ತ ಹೋಗುವ ಗೊಂದಲಿಗರು ವಾಸಿಸುವ ಊರು ಎಂದು ಮೇಲಿನ ನೋಟದಲ್ಲಿ ಅರ್ಥವಾದರೂ ಕನ್ನಡ ವಿಶ್ವಕೋಶದ ಪ್ರಕಾರ ಗೊರವರು ಎಂದರೆ ಗುರುಗಳು ಎಂದಿದೆ. ಅಂದರೆ ಗುರುಗಳ ಊರು ಗೊರೂರಾಗಿ ತದ್ಭವ ಗೊಂಡಿರುವಲ್ಲಿ ಸತ್ಯವಿದೆ ಯಾಕೆಂದರೆ ಇಲ್ಲಿ ಗೋಕರ್ಣ ಋಷಿಗಳು ಗುರುಗಳಾಗಿದ್ದು ಕೊಂಡು ಧಾರ್ಮಿಕ ಆಚರಣೆ ನಡೆಸಿದರೆಂದು ಹಾಸನ ಜಿಲ್ಲಾ ಗ್ಯಾಸೆಟಿಯರ್ ತಿಳಿಸುತ್ತದೆ. ಹೀಗಾಗಿ ಗುರುಗಳ ಊರಾಗಿದ್ದ ಗೊರವೂರು ಗೊರೂರಾಗಿದೆ ಎಂದು ಹೇಳಬಹುದಾಗಿದೆ. ಗೊರೂರು ಗ್ರಾಮ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ. ೧೯೮೩ರಲ್ಲಿ ನಿರ್ಮಾಣವಾದ ಹೇಮಾವತಿ ಜಲಾಶಯ ಹಾಸನ,

ಮಂಡ್ಯ, ಮೈಸೂರು ಹಾಗೂ ತುಮಕೂರು ಜಿಲ್ಲೆಗಳ ಜೀವನಾಡಿಯಾಗಿದೆ. ಹೇಮಾವತಿ ನದಿಯು ಪಶ್ಚಿಮಘಟ್ಟಗಳಲ್ಲಿ ಒಂದಾದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಜಾವಳಿ ಎಂಬಲ್ಲಿ ಸಮುದ್ರದ ಮಟ್ಟದಿಂದ ೧೨೧೯ ಮೀ ಎತ್ತರದಲ್ಲಿ ಉಗಮಿಸಿ ಆಗ್ನೇಯದ ಕಡೇ ಹರಿದು ಸಕಲೇಶಪುರ ತಾಲ್ಲೂಕಿನ ಅಚ್ಚನಹಳ್ಳಿ ಎಂಬ ಹಳ್ಳಿಯ ಬಳಿ ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಪಶ್ಚಿಮ ಕಡೆಯಿಂದ ಹರಿದು ಬರುವ ಕೆಲವು ಹೊಳೆಗಳನ್ನು ಸೇರಿಸಿಕೊಂಡು ಬೇಲೂರಿನಲ್ಲಿ ಹರಿದು ಹಾಸನ ತಾಲ್ಲೂಕನ್ನು ಪ್ರವೇಶಿಸಿ ಉತ್ತರ ಕಡೆಯಿಂದ ಯಗಚಿ ನದಿಯನ್ನು ಸೇರಿಸಿಕೊಂಡು ಹೊಳೇನರಸೀಪುರವನ್ನು ಸುತ್ತಿ ದಕ್ಷಿಣಕ್ಕೆ ಪ್ರವಹಿಸಿ ಕೃಷ್ಣರಾಜಸಾಗರದ ಬಳಿ ಕಾವೇರಿಯನ್ನು ಸೇರಿ ಕೊಳ್ಳುತ್ತದೆ. ಇದರ ಜಲಾನಯನದ ವಿಸ್ತೀರ್ಣ ಸುಮಾರು ೫೪೧೦ ಚದರ ಕಿಲೋಮೀಟರ್ ಆಗಿದೆ. ಈ ನದಿಯ ಅಂದಾಜು ಉದ್ದ ೨೪೫ ಕಿ.ಮೀಗಳು. ಹೇಮಾವತಿ ನದಿಯ ಉದ್ದಕ್ಕೂ ಮಳೆಯ ಪ್ರಮಾಣ ಸಾಮನ್ಯವಾಗಿ ೨೦೦ ಸೆಂ.ಮೀನಿಂದ ೭೦ ಸೆಂ.ಮೀವರೆಗೂ ವ್ಯತ್ಯಾಸವಾಗುತ್ತದೆ. ಒಟ್ಟಿನಲ್ಲಿ ಹೇಮಾವತಿ ನದಿ ಸುಮಾರು ೧೧೩ ಮೈಲಿಗಳಷ್ಟು ಹಾಸನ ಜಿಲ್ಲೆಯೊಳಗೆ ತನ್ನ ಪಾತ್ರವನ್ನು ಹೊಂದಿದೆ. ಹೇಮ ಎಂದರೆ ಚಿನ್ನ. ಹೇಮಾವತಿ ಎಂದರೆ ಚಿನ್ನದ ಹೊಳೆ ಅಥವಾ ಹೊನ್ನಿನ ಹೊಳೆ ಎಂದು ಅರ್ಥ ಜೊತೆಗೆ ಎಣ್ಣೆಹೊಳೆ ಎಂದು ಸಹ ಅರ್ಥವಿದೆ. ಒಟ್ಟಾರೆ ಹೇಮಾವತಿ ನದಿ ಹಾಗೂ ಗೊರೂರು ಜಲಾಶಯಗಳು ಇಲ್ಲಿಯ ರೈತಾಪಿ ವರ್ಗದ ಜೀವನಾಡಿಯಾಗಿದ್ದು ಅನೇಕ ನಗರಗಳಿಗೆ ಹಾಗೂ ಗ್ರಾಮೀಣ ಭಾಗಕ್ಕೆ ಕುಡಿಯುವ ನೀರನ್ನು ಪೂರೈಕೆ ಮಾಡುತ್ತಿದ್ದು ಹೇಮಾವತಿ ನದಿ ಗೊರೂರು ಸೀಮೆಯ ಆರ್ಥಿಕ ಪ್ರಗತಿಯ ಅಡಿಪಾಯವಾಗಿದೆ.

ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿಯ ಇತಿಹಾಸದಲ್ಲಿ ಸಂಸ್ಥಾನದ ಜಿಲ್ಲೆಗಳಲ್ಲಿ ಒಂದಾದ ಹಾಸನ ಜಿಲ್ಲೆಯ ಗೊರೂರು ಭಾಗದ ಸ್ವಾತಂತ್ರ್ಯ ಚಳವಳಿಯ ಇತಿಹಾಸ ರಂಜನೀಯವಾಗಿದ್ದು ಇಡೀ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯಲ್ಲಿ ಗೊರೂರು ತನ್ನದೇ ಆದ ಪ್ರಭಾವವನ್ನು ಬೀರಿದೆ. ಗೊರೂರಿನ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರ ಮಾರ್ಗದರ್ಶನದಲ್ಲಿ ಹಾಸನ ಜಿಲ್ಲೆಯಾದ್ಯಂತ ಅತ್ಯಂತ ಸಂಘಟಿತವಾಗಿ ತೀವ್ರ ಸ್ವರೂಪದ ಚಳವಳಿಯನ್ನು ನಡೆಸಲಾಯಿತು. ಮೈಸೂರು ಸಂಸ್ಥಾನದಲ್ಲಿ ಮೊಟ್ಟಮೊದಲ ಬಾರಿಗೆ ಖಾದಿ ಗ್ರಾಮೋದ್ಯೋಗ, ಗೃಹ ಗುಡಿ ಕೈಗಾರಿಕೆಗಳ ಆರಂಭ, ಎಣ್ಣೆಗಾಣಗಳ ಮೂಲಕ



ಎಣ್ಣೆ ತಯಾರಿಕೆ ಮುಂತಾದ ಸ್ವದೇಶಿಮಯವಾದ ಸಂಘಟನೆಗಳು ಗೊರೂರಿನಲ್ಲಿ ಆರಂಭವಾದವು. ಗೊರೂರು ವೈದಿಕ ಸಂಪ್ರದಾಯದ ಶುದ್ಧ ಮಡಿವಂತಿಕೆಯ ಬ್ರಾಹ್ಮಣರ ಅಗ್ರಹಾರವಾಗಿದ್ದು ಗಾಂಧೀಜಿಯವರ ಪ್ರೇರಣೆಯಿಂದ ಅಸ್ಪೃಶ್ಯತೆಯನ್ನು ಮೆಟ್ಟಿ ನಿಂತು ವೈದಿಕರು ಹರಿಜನೋದ್ಧಾರ, ಹರಿಜನರಿಗೆ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಾನತೆಯನ್ನು ತಂದು ಕೊಡುವುದರ ಮೂಲಕ ಮಡಿವಂತಿಕೆಯನ್ನು ಮೀರಿ ಇಡೀ ಮೈಸೂರು ಸಂಸ್ಥಾನಕ್ಕೆ ಮಾದರಿಯಾಯಿತು.

ಈ ವೇಳೆಯಲ್ಲಿ ಹಾಸನ ಜಿಲ್ಲೆಯಲ್ಲಿ ಗೊರೂರು ಗ್ರಾಮ ರಾಷ್ಟ್ರೀಯ ಚಳವಳಿಯ ಕೇಂದ್ರವಾಗಿತ್ತು. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಂಪತ್ತಯ್ಯಂಗಾರ್, ಸೆಲ್ವಪಿಳ್ಳೆ ಅಯ್ಯಂಗಾರ್ ಮತ್ತು ಗರುಡ ಅಯ್ಯಂಗಾರ್‌ರವರ ಹೋರಾಟದ ಪ್ರತಿಫಲವಾಗಿ ಗೊರೂರು ರಾಷ್ಟ್ರೀಯತೆಯ ಕೇಂದ್ರವಾಗಿತ್ತು. ಈ ನಾಯಕರು ಈ ಭಾಗದ ಧಾರ್ಮಿಕ ಹಾಗೂ ಸಾರ್ವಜನಿಕ ಚಟುವಟಿಕೆಗಳನ್ನು ಮುನ್ನಡೆಸುತ್ತಿದ್ದರು. ಮಹಾತ್ಮಗಾಂಧಿಯವರು ದಕ್ಷಿಣ ಭಾರತದ ಪ್ರವಾಸ ಕೈಗೊಂಡಾಗ ಗೊರೂರು ರಾಮಸ್ವಾಮಿಯವರು ಗಾಂಧೀಜಿಯವರ ಜೊತೆ ಪ್ರಯಾಣಿಸಿದರು. ಇದಾದ ನಂತರ ಗೊರೂರು ರಾಮಸ್ವಾಮಿಯವರು ಜಿಲ್ಲೆಯ ಪ್ರಸಿದ್ಧ ನಾಯಕರಾದರು.

ವ್ಯಾಪಾರದ ಉದ್ದೇಶದಿಂದ ತಕ್ಕಡಿ ಹಿಡಿದು ಬಂದ ಬ್ರಿಟಿಷರು ಕಾಲಾನಂತರದಲ್ಲಿ ಇಡೀ ಭರತಖಂಡವನ್ನೇ ತಮ್ಮ ವಸಾಹತುವನ್ನಾಗಿ ಮಾಡಿಕೊಂಡು ಜಿಗಣೆ ರಕ್ತವನ್ನು ಹೀರುವಂತೆ ವ್ಯವಸ್ಥಿತವಾಗಿ ಭಾರತದ ಸಂಪತ್ತನ್ನು ದೋಚ ತೊಡಗಿದರು. ಕಾಲಾನಂತರದಲ್ಲಿ ಎಚ್ಚೆತ್ತ ಜನತೆ ಅವರನ್ನು ಪ್ರಶ್ನಿಸ ತೊಡಗಿದರು ಮತ್ತು ಹೋರಾಟಕ್ಕಿಳಿದರು. ಆದರೆ ಬ್ರಿಟಿಷರು ಬಲ ಪ್ರಯೋಗದಿಂದ ಶಮನ ಮಾಡುತ್ತಿದ್ದರು. ಅದೇ ರೀತಿಯ ಹೋರಾಟ ಮುಂದೆ ರಾಷ್ಟ್ರವ್ಯಾಪಿಯಾಗಿ ಜನಸಾಮಾನ್ಯರ ಹೋರಾಟವಾಗಿ ರೂಪುಗೊಂಡಿತು. ಬ್ರಿಟಿಷರು ಎಷ್ಟೇ ಕಠಿಣ ಕ್ರಮ ಕೈಗೊಂಡರೂ ಚಳವಳಿಯನ್ನು ತನ್ನ ಹತೋಟಿಯಲ್ಲಿಟ್ಟು ಕೊಳ್ಳಲಾಗಲಿಲ್ಲ. ಅದರ ಪ್ರತಿಫಲವೇ ಭಾರತದ ಸ್ವಾತಂತ್ರ್ಯ ಚಳವಳಿ.

೧೭೯೯ ರಲ್ಲಿ ೪ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಮರಣ

ಹೊಂದಿದ ನಂತರ ಮೈಸೂರು ರಾಜ್ಯವನ್ನು ಬ್ರಿಟಿಷರು ಆರ್ಥಿಕ ಸಂಪನ್ಮೂಲಕ್ಕಾಗಿ ಆಯಕಟ್ಟಿನ ಪ್ರದೇಶಗಳನ್ನು ತಮ್ಮಲ್ಲೇ ಉಳಿಸಿಕೊಂಡು ತಮ್ಮ ಆಪ್ತರಾದ ನಿಜಾಮರಿಗೆ, ಮರಾಠರಿಗೆ ಕೆಲವು ಪ್ರದೇಶಗಳನ್ನು ಹಂಚಿದರು. ಉಳಿದ ಭಾಗವನ್ನು ಮೈಸೂರಿನ ಒಡೆಯರಿಗೆ ನೀಡಿದರು. ಒಡೆಯರ ಮೇಲೆ ಬ್ರಿಟಿಷರು ಎಂದಿಗೂ ತಮ್ಮ ಹಿಡಿತವನ್ನು ಬಿಟ್ಟು ಕೊಡಲಿಲ್ಲ.

ವ್ಯಾಪಾರದ ದೃಷ್ಟಿಯಿಂದ ಭಾರತಕ್ಕೆ ಬಂದ ಬ್ರಿಟಿಷರು ರಾಜ್ಯವನ್ನು ಪ್ರವೇಶಿಸಿದಾಗ ಮಲೆನಾಡಿನ ಮೈಸಿರಿ (ಸಂಪತ್ತು) ಅವರನ್ನು ಆಕರ್ಷಿಸದೇ ಇರಲಿಲ್ಲ. ಇಲ್ಲಿನ ಭೌಗೋಳಿಕ ಪರಿಸರದ ಕೊಡುಗೆಗಳಾದ ಅರಣ್ಯಗಳು, ಅವುಗಳ ಉತ್ಪನ್ನಗಳು, ಹಾಸನ ಜಿಲ್ಲೆಯ ಭೂಫಲವತ್ತತೆ, ಜಿಲ್ಲೆಯ ನೈಸರ್ಗಿಕ ಸಂಪನ್ಮೂಲಗಳು ಇವುಗಳೆಲ್ಲವುದರ ಜೊತೆಗೆ ಕಾಫಿ ಪ್ಲಾಂಟೇಷನ್ ಮತ್ತು ಏಲಕ್ಕಿ, ಮೆಣಸು, ಇವು ಬ್ರಿಟಿಷ್ ವ್ಯಾಪಾರಿಗಳನ್ನು ಕೈಬೀಸಿ ಕರೆಯುತ್ತಿತ್ತು. ಇವುಗಳೆಲ್ಲವುದರಿಂದ ಆಕರ್ಷಿತರಾದ ಬ್ರಿಟಿಷರು ಹಾಸನ ಜಿಲ್ಲೆಗೆ ಪಾದಾರ್ಪಣೆ ಮಾಡಿ ಸ್ಥಳೀಯ ಪ್ಲಾಂಟರ್ ರೈತ ಸಮುದಾಯದಿಂದ ಸ್ವಲ್ಪ ಭೂಮಿ ಪಡೆಯುತ್ತಾ ಈಗಿನ ಸಕಲೇಶಪುರ ಆಗಿನ 'ಮಂಜ್ರಬಾದ್' ಪ್ರದೇಶದ ಹೆಚ್ಚು ಕಡಿಮೆ ಎಲ್ಲಾ ಪ್ಲಾಂಟೇಷನ್‌ಗಳನ್ನು ಬ್ರಿಟಿಷರು ತಮ್ಮ ಹತೋಟಿಗೆ ಪಡೆದು ಸ್ಥಳೀಯರಿಂದ ಬಲವಂತವಾಗಿ ಸೇವೆ ಪಡೆಯುತ್ತಿದ್ದರು.

ಜಿಲ್ಲೆಯ ಫಲವತ್ತಾದ ಇತರೆ ಭೂಪ್ರದೇಶಗಳಿಗೆ ಪ್ರಸ್ತುತ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ ಆಲೂಗೆಡ್ಡೆಯನ್ನು ಪರಿಚಯಿಸಿದವರು ಬ್ರಿಟಿಷರು. ವನ್ಯ ಮೃಗಗಳ ಬೇಟೆ – ಅವುಗಳ ಚರ್ಮ, ದಂತ ಇತ್ಯಾದಿಗಳ ಆದಾಯ ಅವರದ್ದಾಗಿತ್ತು. ಬ್ರಿಟಿಷರು ಈ ರೀತಿಯ ಆರ್ಥಿಕ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸಿದ ನಂತರ ಮೈಸೂರು ಮಹಾರಾಜರ ಸಹಕಾರದೊಂದಿಗೆ ೧೮೮೨ ರಲ್ಲಿ ಬೆಂಗಳೂರಿನಿಂದ ಹಾಸನಕ್ಕೆ ೧೯೧೩ ರಲ್ಲಿ ಅರಸೀಕೆರೆಯಿಂದ ಮೈಸೂರಿನವರೆಗೆ ರೈಲ್ವೆ ಸಂಚಾರವನ್ನು ಆರಂಭಿಸಿದರು. ಬಹುಶಃ ಇದೂ ಕೂಡ ಅವರ ಆರ್ಥಿಕ ಶೋಷಣೆಗಾಗಿ, ಸಂಪತ್ತಿನ ಸಾಗಾಣಿಕೆಗಾಗಿಯೂ ಇರಬಹುದು.೧೯ ನೇ ಶತಮಾನದ ಪ್ರಾರಂಭದಿಂದ ಬ್ರಿಟಿಷರ ವಸಹಾತುಶಾಹಿ ನೀತಿಯ ವಿರುದ್ಧ ಅಲೆ ಮೈಸೂರು ಸಂಸ್ಥಾನದಲ್ಲಿ ಬೆಳೆಯುತ್ತಾ ಬಂದಿತ್ತು. ಅದರಲ್ಲೂ ಮುಖ್ಯವಾಗಿ ೧೮ ನೇ ಶತಮಾನದ ಅಂತ್ಯದಿಂದ ಬಂದಿತ್ತು. ೧೮೫೭ ರವರೆಗೆ ನಿರಂತರವಾಗಿ ನಿರ್ಣಾಯಕವಾದಂತಹ ದಂಗೆಗಳನ್ನು



ಬ್ರಿಟಿಷರು ಸ್ಥಳೀಯ ಪಾಳೇಯಗಾರರಿಂದ ರೈತ ಸಮುದಾಯದಿಂದ ಎದುರಿಸಬೇಕಾಯಿತು. ೧೮೫೭ ರ ಕ್ರಾಂತಿಯನ್ನು ಅನೇಕ ವಿದ್ವಾಂಸರು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದೇ ಕರೆದಿದ್ದಾರೆ. ಆದರೆ ಸ್ವಾತಂತ್ರ್ಯ ಸಂಗ್ರಾಮ ಎಂದರೆ ಹೋರಾಟ ಜನ ಸಮುದಾಯವೆಲ್ಲಾ ಚಳವಳಿಯಲ್ಲಿ ಭಾಗವಹಿಸುವುದು ಎಂದರ್ಥ.

ಆದರೆ ೧೮೫೭ ರ ಕ್ರಾಂತಿಯಲ್ಲಿ ಕೆಲವು ಪ್ರಾಂತ್ಯಗಳ ರಾಜರುಗಳು, ಪಾಳೆಗಾರರು, ರೈತ ಪಂಗಡಗಳು, ಸೈನಿಕರು, ಸ್ವಹಿತ ರಕ್ಷಣೆಗಾಗಿ ಹೋರಾಟಕ್ಕೆ ಧುಮುಕಿದರು. ಆದ್ದರಿಂದ '೧೮೫೭ ರ ಕ್ರಾಂತಿಯನ್ನು ವಸಾಹತುಶಾಹಿ ವಿರುದ್ಧದ ಹೋರಾಟ' ಎಂದು ಕರೆಯುವುದು ಇಲ್ಲಿ ಸೂಕ್ತ ಎನಿಸುವುದು. ಆದರೆ ೧೮೮೫ ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದಾಗಿನಿಂದ ಬ್ರಿಟಿಷರ ವಿರುದ್ಧದ ಹೋರಾಟ ಶಾಂತಿಯುತವಾದ ಸಂವಿಧಾನಾತ್ಮಕ ಬದಲಾವಣೆಗಳಿಗಾಗಿ ನಡೆಯುತ್ತಾ ಬಂದಿತು.

## ಐಗೂರು ನಾಯಕರೇ ಮೊದಲು

ಗೊರೂರು ಭಾಗದಲ್ಲಿ ಬ್ರಿಟಿಷರ ವಿರುದ್ಧವಾಗಿ ಪ್ರಪ್ರಥಮವಾಗಿ ದಂಗೆ ಎದ್ದ ಕೀರ್ತಿ ಆಗಿನ ಮಂಜ್ರಬಾದ್ (ಬಾಳಂ) ಪ್ರಾಂತ್ಯದ ಆಡಳಿತ ನಿರ್ವಹಿಸುತ್ತಿದ್ದ ಐಗೂರು ವೆಂಕಟಾದ್ರಿ ನಾಯಕನಿಗೆ ಸಲ್ಲುತ್ತದೆ. ಟಿಪ್ಪು ಮರಣ ಹೊಂದಿದ ನಂತರ ವೆಂಕಟಾದ್ರಿನಾಯಕ ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿದ್ದು ಬ್ರಿಟಿಷರಿಗೆ ಸಹಿಸಲಾಗಲಿಲ್ಲ. ಪರಿಣಾಮ ೧೮೦೧ ರಿಂದ ೧೮೦೨ ರವರೆಗೆ ಈಸ್ಟ್ ಇಂಡಿಯಾ ಕಂಪೆನಿಯ ಸೈನ್ಯ ವೆಂಕಟಾದ್ರಿಯನ್ನು ಎದುರಿಸಲು ಬಂದಿತು. ವೀರಾವೇಶದಿಂದ ಹೋರಾಡಿದ ವೆಂಕಟಾದ್ರಿ ನಾಯಕ ೧೮೦೨ ರಲ್ಲಿ ಹುಗ್ಗಿಹಳ್ಳಿಯ ಬಳಿ ಬ್ರಟಿಷರಿಗೆ ಸೆರೆಸಿಕ್ಕ. ಆತನನ್ನು ಅದೇ ವರ್ಷ ಗಲ್ಲಿಗೇರಿಸಲಾಯಿತು.

## ಮೈಸೂರು ರೆಪ್ರೆಸೆಂಟೀವ್ ಅಸೆಂಬ್ಲಿ

ಮೈಸೂರು ಸಂಸ್ಥಾನದಲ್ಲಿ ೧೮೮೧ ರಲ್ಲಿ ಮೈಸೂರು ರೆಪ್ರೆಸೆಂಟೀವ್ ಅಸೆಂಬ್ಲಿ ಆರಂಭಗೊಂಡಾಗ ಜಿಲ್ಲೆಯಿಂದ ಅನೇಕ ಕ್ಷೇತ್ರಗಳಿಂದ ಪ್ರಭಾವಿ ವ್ಯಕ್ತಿಗಳು ಈ ಸಭೆಗೆ ಆಯ್ಕೆ ಆಗಿ ಅವರು ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳಿಗಾಗಿ ಹೋರಾಡಿದರು.

೧೯೦೫ ರಲ್ಲಿ ಲಾರ್ಡ್ ಕರ್ಜನ್ ಬಂಗಾಳದ ವಿಭಜನೆಯನ್ನು ಮಾಡಿದಾಗ ಭಾರತದಲ್ಲಿ ಮೂಲೆ ಮೂಲೆಯಲ್ಲಿಯೂ ರಾಷ್ಟ್ರೀಯ ಭಾವನೆ ಉಕ್ಕಿ ಹರಿಯಿತು. ಜಿಲ್ಲೆಯ ಕೆಲವು ಮಂದಗಾಮಿ ಧೋರಣೆ ಹೊಂದಿದ್ದ ಮುಂದಾಳುಗಳು 'ಸ್ವದೇಶಿ ಮತ್ತು ಬಹಿಷ್ಕಾರ' ಚಳವಳಿಯನ್ನು ಸಂಘಟಿಸಿದರು. ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲಿ ವಿದೇಶಿ ವಸ್ತುಗಳನ್ನು ಸುಟ್ಟುಹಾಕಿದರು.

ಜಿಲ್ಲೆಗೆ ಗಾಂಧಿ ಟೋಪಿ ಪರಿಚಯಿಸಿದ್ದೇ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು. ೧೯೨೦ ರಲ್ಲಿ ಬಾಲಗಂಗಾಧರ ತಿಲಕರು ಮರಣ ಹೊಂದಿದರು. ಆಗ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಹಾಸನದಲ್ಲಿ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದರು. ತಿಲಕರ ಮರಣದ ಸುದ್ದಿ ತಿಳಿದ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ತಮ್ಮ ಸಹಪಾಠಿಗಳೊಂದಿಗೆ ಶಾಲೆಯನ್ನು ಬಹಿಷ್ಕರಿಸಿ ಹೊರ ಬಂದು ತಿಲಕರ ಮತ್ತು ಗಾಂಧೀಜಿಯವರ ಫೋಟೋಗಳನ್ನು ಹಿಡಿದು ಜೈಕಾರಗಳನ್ನು ಕೂಗುತ್ತಾ ಹಾಸನ ನಗರದ ಬೀದಿ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಅಪಾರ ಪ್ರಮಾಣದ ವಿದೇಶಿ ವಸ್ತುಗಳನ್ನು ಸಂಗ್ರಹಿಸಿ ಜೂಬ್ಲಿ ಮೈದಾನದಲ್ಲಿ ಆ ವಸ್ತ್ರಗಳಿಗೆ ಬೆಂಕಿ ಹಾಕಿದರು. ಈ ಮೆರವಣಿಗೆಯ ಸಮಯದಲ್ಲಿ ತಿಲಕರ ಸ್ವರಾಜ್ಯ ನಿಧಿಗೆ ಸುಮಾರು ನೂರು ರೂ. ಹಣ ಸಂಗ್ರಹಿಸಿ ಆ ಹಣದಿಂದ ಎಲ್ಲರಿಗೂ ಗಾಂಧಿಟೋಪಿಗಳನ್ನು ಹೊಲಿಸಿ ಹಂಚಿದರು.

## ಜಿಲ್ಲೆಯ ದಿನಪತ್ರಿಕೆಗಳು

ಬುಧಜನ, ಮನೋರಂಜನೆ, ಸತ್‌ಸಂಪ್ರದಾಯ, ದೀಪಿಕಾ, ಚನ್ನರಾಯಪಟ್ಟಣ ತಾಲ್ಲೂಕು, ವರ್ತಮಾನ, ವಿಕಮಾವ, ಆಧ್ಯಾತ್ಮ ಪ್ರಕಾಶ, ಹೊಯ್ಸಳ ಇವುಗಳು ಸ್ಥಳೀಯ ಪತ್ರಿಕೆಗಳಾಗಿದ್ದು ಇವುಗಳ ಜೊತೆಗೆ ತಾಯಿನಾಡು, ವೀರಕೇಸರಿ ಇತ್ಯಾದಿ ದಿನಪತ್ರಿಕೆಗಳು ಕ್ರಾಂತಿಕಾರಿ ಲೇಖನಗಳನ್ನು ಬರೆಯುವುದರ ಮೂಲಕ ಜಿಲ್ಲೆಯ ಜನತೆಯಲ್ಲಿ ರಾಷ್ಟ್ರೀಯತೆಯ ಬೆಳವಣಿಗೆಯ ಬೀಜ ಬಿತ್ತಿದವು.

## ಗಾಂಧಿ ಜಿಲ್ಲೆಗೆ ಮೊದಲ ಭೇಟಿ :

೧೯೨೭ ಫೆಬ್ರವರಿ ೧೬–೧೭ ರಂದು ಮಹಾತ್ಮ ಗಾಂಧೀಜಿಯವರು ಸಿ.ಗೋಪಾಲಚಾರಿ ಮತ್ತು ಗಂಗಾಧರರಾವ್ ದೇಶಪಾಂಡೆಯರೊಂದಿಗೆ ಹಾಸನ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದರು. ಹಾಸನ, ಬೇಲೂರು, ಅರಸೀಕೆರೆ, ಹೊಳೆನರಸೀಪುರ, ಬಾಣಾವರಗಳಲ್ಲಿ ಸಾರ್ವಜನಿಕ ಸಭೆ ನಡೆಸಿ ಅಲ್ಲಿ ಅವರು ಅಸ್ಪೃಶ್ಯತೆ ನಿವಾರಣೆ, ಖಾದಿ ವಸ್ತುಗಳ ಉತ್ಪಾದನೆ ಮತ್ತು ಬಳಕೆ, ಗ್ರಾಮೀಣಾಭಿವೃದ್ಧಿ ಮತ್ತು ಬ್ರಿಟಿಷರ ನೀತಿಗಳ ಬಗ್ಗೆ ನೀಡಿದ ಭಾಷಣಗಳು ಜನರ ಮೇಲೆ ತೀವ್ರವಾದ ಪರಿಣಾಮ ಬೀರಿದವು. ಈ ಸಮಯದಲ್ಲಿ ಸಾವಿರಾರು ರೂಪಾಯಿ ಹಣವನ್ನು ಕಾಂಗ್ರೆಸ್ ನಿಧಿಗೆ ಜಿಲ್ಲೆಯ ಜನತೆ ನೀಡಿದರು. ಗಾಂಧೀಜಿಯವರ ಭೇಟಿಯ ನಂತರ ಜಿಲ್ಲೆಯಲ್ಲಿ ಅನೇಕ ನಾಯಕರು ಬೆಳೆದು ಕೊಂಡರು. ಅವರುಗಳೆಂದರೆ ಎ.ಜಿ. ರಾಮಚಂದ್ರರಾವ್, ಎಚ್.ಬಿ. ಗುಂಡಪ್ಪಗೌಡ, ಬಿ.ಎನ್. ಬೋರಣ್ಣಗೌಡ, ಸಂಪತ್ ಅಯ್ಯಂಗಾರ್, ಡಿ.ರಾಮಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಿ.ಆರ್. ಕರೀಗೌಡ, ಕುಳ್ಳೇಗೌಡ, ವೆಂಕಟಸುಬ್ಬು, ಅಲಿಯಾಸ್ ಕಸ್ತೂರಿ, ಹಾರನಹಳ್ಳಿರಾಮಸ್ವಾಮಿ, ಎಲ್.ಟಿ.ಕಾರ್ಲೆ, ಇನ್ನೂ ಮುಂತಾದವರು ಹಾಸನ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರೀಯತೆಯನ್ನು ಹರಡುವುದರಲ್ಲಿ ಗಣನೀಯ ಪಾತ್ರವಹಿಸಿದ್ದಾರೆ.

ಕಾಲನಂತರ ಇವರುಗಳೇ ಹಾಸನ ಜಿಲ್ಲಾ ಕಾಂಗ್ರೆಸ್ ಕಮಿಟಿ ಮತ್ತು ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕರುಗಳಾಗಿದ್ದಾರೆ. ಎ.ಜೆ. ರಾಮಚಂದ್ರರಾವ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಂಪತ್ ಅಯ್ಯಂಗಾರ್ ಇವರು ಗಾಂಧೀಜಿಯವರ ಆದೇಶದಂತೆ ಹರಿಜನೋದ್ಧಾರದಂತಹ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ಕೊಂಡಿದ್ದರೆ, ಬಿ.ಎನ್. ಬೋರಣ್ಣಗೌಡರು ಸಮಾಜವಾದದ ಪ್ರವೃತ್ತಿಯಲ್ಲಿ ಕೆಲಸ ಮಾಡುತ್ತಿದ್ದರು.

## ದಲಿತರಿಗೆ ದೇವಾಲಯಕ್ಕೆ ಪ್ರವೇಶ

೧೯೧೭ ರಿಂದ ೧೯೩೫ ರವರೆಗಿನ ಕಾಲ ಮೈಸೂರಿನ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದುದಾಗಿತ್ತು. ಬ್ರಾಹ್ಮಣೇತರ ಚಳವಳಿಯ ಮೂಲಕ ಸಾಮಾಜಿಕ ಸುಧಾರಣೆಗಳಿಗೆ ಪ್ರಜಾಮಿತ್ರ ಮಂಡಳಿ ಮತ್ತು ಪ್ರಜಾಪಕ್ಷಗಳು ಪಣತೊಟ್ಟಿದ್ದವು. ಈ ಸಮಯದಲ್ಲಿ ಹಾಸನ ಜಿಲ್ಲೆಯಲ್ಲಿ ಹರಿಜನರಿಗೆ ದೇವಾಲಯಗಳಿಗೆ ಪ್ರವೇಶ, ಅಂತರ್‌ಜಾತಿವಿವಾಹ ಮತ್ತು ಸಹಪಂಕ್ತಿ ಭೋಜನಗಳನ್ನು ಜಿಲ್ಲೆಯ ನಾಯಕರು ಯಶಸ್ವಿಯಾಗಿ ಕಾರ್ಯಗತಗೊಳಿಸಿದರು.

೧೯೩೭ ರ ಅಕ್ಟೋಬರ್‌ನಲ್ಲಿ ಪ್ರಜಾಮಿತ್ರ ಮಂಡಳಿ, ಪ್ರಜಾ ಸಂಯುಕ್ತ ಪಕ್ಷಗಳು ಮೈಸೂರು ಕಾಂಗ್ರೆಸ್‌ನೊಂದಿಗೆ ಮೈಸೂರು ಕಾಂಗ್ರೆಸ್ ಅತ್ಯಂತ ಪ್ರಭಾವಶಾಲಿಯಾಯಿತು. ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ ೩ ದಿನಗಳ ಕಾಲ ಶಿವಪುರದಲ್ಲಿ ನಡೆಯಿತು. ಈ ಅಧಿವೇಶನವನ್ನು ಸರ್ಕಾರ ನಿರ್ಬಂಧಿಸಿದ್ದರಿಂದ ಟಿ.ಸಿದ್ದಲಿಂಗಯ್ಯ ಮತ್ತು ಬಳ್ಳಾರಿ ಸಿದ್ದಮ್ಮನವರನ್ನು ಪೋಲಿಸರು ಬಂಧಿಸಿದರು. ಇದರ ಪರಿಣಾಮ ಕೊನೆಯ ದಿನದ ಅಧಿವೇಶನದ ಅಧ್ಯಕ್ಷತೆಯ ಹೊರೆ ಹಾಸನದ ಎಚ್.ಬಿ. ಗುಂಡಪ್ಪಗೌಡರ ಹೆಗಲಿಗೆ ಬಿದ್ದಿತು. ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಧ್ವಜಸತ್ಯಾಗ್ರಹವನ್ನು ಮೈಸೂರು ಸಂಸ್ಥಾನದಾದ್ಯಂತ ಆಚರಿಸಲು ಕರೆ ನೀಡಿದರು.

೧೯೩೮ ರಲ್ಲಿ ಏಪ್ರಿಲ್‌ನಲ್ಲಿ ವಿದುರಾಶ್ವತ್ಥದಲ್ಲಿ ಮೈಸೂರು ಕಾಂಗ್ರೆಸ್ ತನ್ನ ೨ನೇ ಅಧಿವೇಶನವನ್ನು ಆಯೋಜಿಸಿದ ಸಂದರ್ಭದಲ್ಲಿ ಒಂದು ದುರಂತವೇ ನಡೆದುಹೋಯಿತು. ಈ ದುರಂತವನ್ನು ವಿರೋಧಿಸಲು ೧೯೩೯ ಜುಲೈ ೩ ಮತ್ತು ೪ ರಂದು ಮೈಸೂರು ಕಾಂಗ್ರೆಸ್ ಕಮಿಟಿಯ ಮೀಟಿಂಗ್‌ನ್ನು ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ಕರೆದರು. ಈ ಸಭೆಗೆ ಭಾಗವಹಿಸಲು ಮೈಸೂರು ಕಾಂಗ್ರೆಸ್ಸಿನ ಅತಿರಥ ಮಹಾರಥರೆಲ್ಲರೂ ಅರಸೀಕೆರೆ ಅಧಿವೇಶನಕ್ಕೆ ಬಂದರು. ಈ ಸಭೆಯಲ್ಲಿ ವಿದುರಾಶ್ವತ್ಥ ದುರಂತವನ್ನು ವಿರೋಧಿಸಿ ಆ ಸರ್ಕಾರದ ಕಾಯಿದೆಗಳ ವಿರುದ್ಧ ತನ್ನ ಆಕ್ರೋಶ ವ್ಯಕ್ತಪಡಿಸಿದರು.

**ಜವಾಬ್ದಾರಿ ದಿನ :**

ಈ ಮೀಟಿಂಗ್‌ನ ನಂತರ ಹಾಸನ ಜಿಲ್ಲಾ ಕಾಂಗ್ರೆಸ್ ಅತ್ಯಂತ ಬಿರುಸಿನಿಂದ ಕಾರ್ಯ ಮಗ್ನವಾಯಿತು. ಜುಲೈ ೩೦, ೧೯೩೯ ರಂದು ಜಿಲ್ಲೆಯ ತಾಲ್ಲೂಕು ಕಾಂಗ್ರೆಸ್ ಕಮಿಟಿಗಳು ಜವಾಬ್ದಾರಿ ಸರ್ಕಾರ ದಿನವನ್ನಾಗಿ ಆಚರಿಸಿದರು. ಇದಕ್ಕೆ ಸರ್ಕಾರದ ವಿರೋಧವೂ ಇತ್ತು. ಆದರೆ ಜಿಲ್ಲೆಯ ರಾಷ್ಟ್ರಾಭಿಮಾನಿಗಳು ಸರ್ಕಾರದ ವಿರೋಧವನ್ನು ಲೆಕ್ಕಿಸಲಿಲ್ಲ. ಅನೇಕರ ಬಂಧನವೂ ಆಯಿತು. ಜಿಲ್ಲೆಯ ಪ್ರತೀ ತಾಲ್ಲೂಕು ಕಾಂಗ್ರೆಸ್ ಕಮಿಟಿಗಳು ಸ್ವಯಂ ಸೇವಕ ಸತ್ಯಾಗ್ರಹ ತರಬೇತಿ ಕೇಂದ್ರಗಳನ್ನು ಆರಂಭಿಸಿದರು.

ಮೈಸೂರು ಕಾಂಗ್ರೆಸ್ ಕಮಿಟಿಯು ರಾಜ್ಯಾದ್ಯಂತ ಚಳವಳಿಯನ್ನು ಬಿರುಸುಗೊಳಿಸುವ ಉದ್ದೇಶದಿಂದ ಪ್ರಭಾವಶಾಲಿಗಳಾದ ನಾಯಕರುಗಳನ್ನು



'ಡಿಕ್ಟೇಟರ್'ಗಳನ್ನಾಗಿ ನೇಮಿಸುತ್ತಿತ್ತು. ಈ ಸಮಯದಲ್ಲಿ ಅರಸೀಕೆರೆ ರಾಮಸ್ವಾಮಿಯವರನ್ನು ಮೈಸೂರು ಕಾಂಗ್ರೆಸ್ ಡಿಕ್ಟೇಟರ್ ಆಗಿ ನೇಮಿಸಿತು. ೧೯೩೯ ರ ವೇಳೆಯಲ್ಲಿ ಜಿಲ್ಲೆಯಲ್ಲಿ ೩ ರೀತಿಯ ಪ್ರಮುಖ ಸತ್ಯಾಗ್ರಹಗಳು ನಡೆದವು. ಅವುಗಳೆಂದರೆ ಹೆಂಡದಂಗಡಿಗಳ ಮುಂದೆ ಪಿಕೇಟಿಂಗ್, ಸ್ವಯಂ ಸೇವಕರಿಂದ ಉಪವಾಸ ಸತ್ಯಾಗ್ರಹ ಮತ್ತು ಅರಣ್ಯ ಸತ್ಯಾಗ್ರಹ ಹೆಂಡದಂಗಡಿಗಳ ಧ್ವಂಸ, ಪೀಪಾಯಿಗಳನ್ನು ಒಡೆದು ಹಾಕುವುದು, ಈಚಲ ಮರಗಳನ್ನು ಕಡಿಯುವುದು, ಜಿಲ್ಲೆಯಾದ್ಯಂತ ಸರ್ವೇಸಾಮಾನ್ಯವಾಗಿತ್ತು. ಪ್ರತಿಯಾಗಿ ಪೋಲಿಸರು ಚಳವಳಿಗಾರರ ಮೇಲೆ ಗುಂಡು ಹಾರಿಸಿದ್ದು ಉಂಟು. ಅದರಿಂದ ಸಾವನ್ನಪ್ಪಿದ್ದುಂಟು.

ಜಿಲ್ಲಾ ಕಾಂಗ್ರೆಸ್‌ನಿಂದ ತರಬೇತಿ ಪಡೆದ ನೂರಾರು ಸತ್ಯಾಗ್ರಹ ಸ್ವಯಂ ಸೇವಕರು ಒಬ್ಬೊಬ್ಬರಾಗಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು. ಟಿ.ಸಿ. ಬಾಳಪ್ಪ ಮತ್ತು ಅರಳಪ್ಪ ಎಂಬುವವರು ಉಪವಾಸ ಸತ್ಯಾಗ್ರಹದಿಂದ ಅನಾರೋಗ್ಯ ಪೀಡಿತರಾಗಿ ಅವರ ಸ್ಥಿತಿ ಚಿಂತಾಜನಕವಾಗಿತ್ತು. ಅರಣ್ಯ ಸತ್ಯಾಗ್ರಹ ಜಿಲ್ಲೆಯಾದ್ಯಂತ ನಿರಂತರವಾಗಿ ನಡೆಯಿತು.

ಅರಸೀಕೆರೆ ಈ ಸತ್ಯಾಗ್ರಹ ಕೇಂದ್ರವಾಗಿತ್ತು. ಅರಣ್ಯ ಉತ್ಪನ್ನಗಳನ್ನು ಕದ್ದು ಮಾರುವುದು, ಬೆಲೆ ಬಾಳುವ ಮರಗಳನ್ನು ಸರ್ಕಾರದ ಗಮನಕ್ಕೆ ಬಾರದಂತೆ ಕದ್ದು ಕತ್ತರಿಸುವುದು ಇತ್ಯಾದಿಗಳು ಈ ಚಳವಳಿಯಲ್ಲಿ ನಿರಂತರವಾಗಿ ನಡೆಯುತ್ತಿತ್ತು. ೧೯೩೯ ರ ಅವಧಿಯಲ್ಲಿ ಮಹಾತ್ಮಗಾಂಧೀಜಿಯವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿ, ಹೆಚ್.ಕೆ. ವೀರಣ್ಣಗೌಡ, ಕೆ.ಸಿ. ರೆಡ್ಡಿ, ಹೆಚ್.ಸಿ. ದಾಸಪ್ಪ ಮುಂತಾದ ನಾಯಕರು ಜಿಲ್ಲೆಯಾದ್ಯಂತ ಪ್ರಯಾಣ ಬೆಳೆಸಿ ನಗರಗಳ ಜೈಲುಗಳು, ಹಳ್ಳಿಗಳಿಗೆ ತೆರಳಿ ಜನರಲ್ಲಿ ರಾಷ್ಟ್ರೀಯತೆ ಬೆಳೆಯುವಂತೆ ಮಾಡಿದರು. ಹಾಸನದಿಂದ ಹೆಚ್. ವೆಂಕಟೇಶಯ್ಯನವರು ಮೈಸೂರು ಸಂವಿಧಾನ ಸುಧಾರಣಾ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು.

ಗೊರೂರು ಭಾಗದ **"ಚಲೇ ಜಾವ್ ಚಳವಳಿ"** ಅಥವಾ **"ಭಾರತ ಬಿಟ್ಟು ತೊಲಗಿ"** ಚಳವಳಿ.

೧೯೪೨ ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಒಂದು ವಿಶಿಷ್ಟ ರೀತಿಯ ಬೆಳವಣಿಗೆ ಕಂಡುಬಂದಿತು. ಕರ ನಿರಾಕರಣೆ,

ಸಂತೆಗಳಲ್ಲಿ ಸಂತೆ ಸುಂಕ ನಿರಾಕರಣೆಯ ಮೂಲಕ ಗ್ರಾಮೀಣ ಪ್ರದೇಶದ ಜನತೆ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದರು. ಈ ರೀತಿಯ ಚಳವಳಿಗಳಲ್ಲಿ ಹಾಸನ ಜಿಲ್ಲೆ ಪ್ರಥಮ ಸ್ಥಾನವನ್ನು ಪಡೆದು ಕೊಂಡಿದೆ.

೧೯೪೦ ರಲ್ಲಿ ಜಿಲ್ಲಾ ಕಾಂಗ್ರೆಸ್ ಬೋರ್ಡಿಗೆ ನಡೆದ ಚುನಾವಣೆಯಲ್ಲಿ ೧೭ ಸೀಟುಗಳಲ್ಲಿ ೧೫ನ್ನು ಕಾಂಗ್ರೆಸ್ ಗೆದ್ದುಕೊಂಡು ಜಿಲ್ಲೆಯಲ್ಲಿ ಪ್ರಬಲವಾಗಿತ್ತು. ಈ ಚಳುವಳಿಯಲ್ಲಿ ಮದ್ಯ ನಿಷೇಧ, ಸಂತೆಗಳಲ್ಲಿ ಸಂತೆ ಸುಂಕ ನಿರಾಕರಣೆ, ಕರ ನಿರಾಕರಣೆ, ರೈಲ್ವೆ ಹಳಿಗಳ ಧ್ವಂಸ ಇತ್ಯಾದಿಗಳ ಮೂಲಕ ಚಳವಳಿ ಜಿಲ್ಲಾ ವ್ಯಾಪಿಯಾಗಿ ಪ್ರತಿನಿತ್ಯ ನಡೆಯುತ್ತಿತ್ತು. ಪ್ರತಿದಿನ ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನಾ ಮೆರವಣಿಗೆಗಳು ನಡೆಯುತ್ತಿದ್ದವು. ಮೈಸೂರು ಸಂಸ್ಥಾನದ ಈ ಚಳವಳಿಯಲ್ಲಿ ಎಲ್ಲಾ ನಾಯಕರು ಸೆರೆಮನೆ ಸೇರಿದರು. ಇದರಿಂದ ಗ್ರಾಮೀಣ ಪ್ರದೇಶದ ರೈತಾಪಿ ವರ್ಗ ಈ ಚಳವಳಿಯಲ್ಲಿ ನಾಯಕತ್ವದ ಕೊರತೆಯನ್ನು ದೂರ ಮಾಡಿದರು. ವಿದ್ಯಾರ್ಥಿಗಳು, ಕಾರ್ಮಿಕರು, ಶಾಲಾ ಕಾಲೇಜು, ಕಚೇರಿಗಳನ್ನು ಬಹಿಷ್ಕರಿಸಿದರು. ಆಗಿನ ಕಾಲದ ಎಲ್ಲಾ ವಕೀಲರುಗಳು ಈ ಚಳವಳಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ಬಳಸಿಕೊಂಡರು.

ಅಂತಿಮವಾಗಿ ಗಾಂಧೀಜಿಯವರು ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನೇತೃತ್ವದಲ್ಲಿ ೧೯೪೨ ಜುಲೈ ೧೪ ರಂದು ವಾರ್ಧಾದಲ್ಲಿ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂಬ ನಿಲುವಳಿಯನ್ನು ಕೈಗೊಳ್ಳಲಾಯಿತು. ಆಗಸ್ಟ್ ೭ ಮತ್ತು ೮ ರಂದು ಬೊಂಬಾಯಿಯಲ್ಲಿ 'ಕ್ವಿಟ್ ಇಂಡಿಯಾ' ನಿರ್ಣಯವನ್ನು ಅಂಗೀಕರಿಸಲಾಯಿತು. ಈ ಚಳವಳಿಯ ಯಾವುದೇ ರೂಪುರೇಷೆಗಳು ಇನ್ನೂ ನಿರ್ಧಾರಗೊಂಡಿರಲಿಲ್ಲ. ಆಗಸ್ಟ್ ೮ ರ ಮಧ್ಯರಾತ್ರಿಯೇ ಗಾಂಧೀಜಿ, ನೆಹರು ಮುಂತಾದ ಹಿರಿಯ ನಾಯಕರನ್ನು ಬಂಧಿಸಿದರು. ಆಗಸ್ಟ್ ೯ ಬೆಳಗಾಗುವುದರೊಳಗಾಗಿ ನಾಯಕರುಗಳ ಬಂಧನದ ವಿಷಯ ಕಾಡ್ಗಿಚ್ಚಿನಂತೆ ರಾಷ್ಟ್ರವ್ಯಾಪಿಯಾಗಿ ಹಬ್ಬಿತು. ಯಾವುದೇ ರೀತಿ ನೀತಿ ಮಾರ್ಗದರ್ಶನವಿಲ್ಲದೆ ಕ್ವಿಟ್ ಇಂಡಿಯಾ ಚಳವಳಿ ಭಾರತದಾದ್ಯಂತ ಪ್ರಾರಂಭವಾಯಿತು. ಅದೇ ರೀತಿ ದಕ್ಷಿಣ ಭಾರತದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದ ಮೈಸೂರು ಸಂಸ್ಥಾನದಲ್ಲೂ 'ಕ್ವಿಟ್ ಇಂಡಿಯಾ' ಚಳವಳಿಗೆ ಉತ್ತಮ ಪ್ರತಿಕ್ರಿಯೆ ದೊರಕಿತು. ಸಂಸ್ಥಾನದ ಒಂದು ಭಾಗವಾಗಿದ್ದ ಹಾಸನ ಜಿಲ್ಲೆ ಇದರಿಂದ ಹೊರಗುಳಿಯಲಿಲ್ಲ. ಜಿಲ್ಲೆಯ ಎಲ್ಲಾ



ವರ್ಗದ ಜನರು ವಿಶಿಷ್ಟ ರೀತಿಯ ಚಟುವಟಿಕೆಗಳನ್ನು ನಡೆಸುವುದರ ಮುಖೇನ ಜಿಲ್ಲೆಯ, ಸಂಸ್ಥಾನದ ಆಡಳಿತ ವರ್ಗವನ್ನು ನಿದ್ದೆಗೆಡಿಸಿ, ಬೆಚ್ಚಿಬೀಳುವಂತೆ ಮಾಡಿದರು.

ಗೊರೂರು ಭಾಗದ ಜನತೆ 'ಚಲೇ ಜಾವ್' ಚಳವಳಿಯಲ್ಲಿ ಕರ ನಿರಾಕರಣೆ, ಸಂತೆಗಳಲ್ಲಿ ಪಿಕೆಟಿಂಗ್ ನಡೆಸಿ ಸುಂಕ ಕೊಡದಿರುವುದು, ಅಧಿಕಾರ ಬಹಿಷ್ಕಾರ, ಈಚಲ ಮರಗಳನ್ನು ಕಡಿಯುವುದು, ಹೆಂಡದಂಗಡಿಗಳ ಮುಂದೆ ಧರಣಿ, ವಿದೇಶಿ ವಸ್ತುಗಳ ಬಹಿಷ್ಕಾರ, ರೈಲುಗಳಲ್ಲಿ ಟಿಕೆಟ್ ರಹಿತ ಪ್ರಯಾಣ, ರೈಲ್ವೆ ಕಂಬಿಗಳನ್ನು ಕತ್ತರಿಸುವುದು, ರೈಲ್ವೆ ನಿಲ್ದಾಣಗಳಿಗೆ ಬೆಂಕಿ ಹಚ್ಚುವುದು, 'ಪ್ರಜಾರಾಜ್ಯ'ಗಳ ಸ್ಥಾಪನೆ ಹೀಗೆ ವಿವಿಧ ರೀತಿಯ ಮಾರ್ಗಗಳ ಮುಖೇನ ಈ ಚಳವಳಿಯನ್ನು ಪ್ರಾರಂಭಿಸಿ ನೂರಾರು ಜನರು ತಮ್ಮ ಪ್ರಾಣವನ್ನು ಬಲಿಕೊಟ್ಟು ಆಧುನಿಕ ಕರ್ನಾಟಕದ ಸ್ವತಂತ್ರ ಚಳವಳಿಯಲ್ಲಿ ಒಂದು ಹೊಸ ಅಧ್ಯಾಯವನ್ನು ಸೃಷ್ಟಿಸಿದರು.

'ಕ್ವಿಟ್ ಇಂಡಿಯಾ ಚಳವಳಿ' ಪ್ರಾರಂಭವಾದಾಗ ಗೊರೂರು ಭಾಗದಲ್ಲಂತೂ ಚಳವಳಿ ಅತ್ಯಂತ ವ್ಯಾಪಕವಾದ ರೀತಿಯಲ್ಲಿ ಹಬ್ಬಿತು. ಹಾಸನದ ಜ್ಯೂಬ್ಲಿ ಮೈದಾನದಲ್ಲಿ ಪ್ರತಿ ಸಂಜೆಯೂ ಬಹಿರಂಗ ಸಭೆಗಳು ನಡೆಯುತ್ತಿದ್ದವು. ಪಾನನಿರೋಧ ಮತ್ತು ಸಂತೆಸುಂಕ ಪ್ರತಿಭಟನೆ ಇವು ಈ ಜಿಲ್ಲೆಯ ಅತಿಮುಖ್ಯವಾದ ಮತ್ತು ವ್ಯಾಪಕವಾದ ಚಟುವಟಿಕೆಗಳಾಗಿದ್ದವು. ಜಿಲ್ಲೆಯಲ್ಲಿ ನಡೆಯುತ್ತಿದ್ದ ವಾರದ ಸಂತೆಗಳಲ್ಲಿ ಜನರು ಸುಂಕವನ್ನು ಕೊಡಲು ನಿರಾಕರಿಸಿದರು. ಎರಡೇ ವಾರದೊಳಗೆ ಪ್ರತಿಯೊಂದು ಹಳ್ಳಿ ಹಳ್ಳಿಗೂ ಸಂತೆ ಪಿಕೆಟಿಂಗ್ ವಿಷಯ ಹರಡಿ ಮೂರನೇ ವಾರ ಇಡೀ ಜಿಲ್ಲೆಯ ಯಾವ ಸಂತೆಯಲ್ಲೂ ಜನ ಸುಂಕವನ್ನು ಕೊಡುತ್ತಿರಲಿಲ್ಲ. ಸಹನೆ ಕಳೆದುಕೊಂಡು ಅಧಿಕಾರಿಗಳು ಪ್ರತೀ, ಸಂತೆಯಲ್ಲೂ ಲಾಠಿ ಚಾರ್ಜ್ ಮಾಡಿ ತಾಲ್ಲೂಕು ಲಾಕಪ್ ಹಿಡಿಸುವಷ್ಟು ಜನರನ್ನು ತಂದು ಕೂಡಿ ಹಾಕಿ ಒಂದೆರೆಡು ದಿನ ಬಡಿದು ಬಿಡುತ್ತಿದ್ದರು. ಈ ಚಳವಳಿಯ ಸಮಯದಲ್ಲಿ ತಾಯಿನಾಡು, ಜನವಾಣಿ, ವಿಶ್ವಕರ್ನಾಟಕ, ಸಾಧ್ವಿ ಮುಂತಾದ ಪತ್ರಿಕೆಗಳು ಚಳವಳಿಯನ್ನು ಹರಡಲು ಮತ್ತು ಚಳವಳಿಯನ್ನು ಹೊಸ ಸ್ಫೂರ್ತಿಯಿಂದ ಮುಂದುವರೆಸುವಂತೆ ಮಾಡಲು ಮೈಸೂರು ಸಂಸ್ಥಾನದಲ್ಲಿ ಪ್ರಮುಖ ಪಾತ್ರವಹಿಸಿದವು. ಇದರ ಜೊತೆಗೆ

'ಮೈಸೂರು ರಾಜ್ಯ ಕಾಂಗ್ರೆಸ್‌ನ ಅಧ್ಯಕ್ಷರಾದ ಸುಬ್ರಹ್ಮಣ್ಯ, ಕೆ.ಟಿ. ಭಾಷ್ಯಂ, ಕೆ.ಸಿ. ರೆಡ್ಡಿ, ಸಿದ್ದಯ್ಯ, ಮರಿಯಪ್ಪ ಇನ್ನೂ ಮುಂತಾದವರನ್ನು ವಿವಿಧ ಕಡೆಗಳಿಂದ ಬಂಧಿಸಿ ಆಗಸ್ಟ್ ೨ ನೇ ವಾರದಲ್ಲಿ ಹಾಸನದ ಜೈಲಿಗೆ ಕಳುಹಿಸಲ್ಪಟ್ಟರು". ರಾಜ್ಯದ ಪ್ರಮುಖ ರಾಜಕಾರಣಿಗಳು ಹಾಸನಕ್ಕೆ ಬಂದು ಸೇರಿದ್ದು, ಜನತೆಗೆ ಸ್ಫೂರ್ತಿ ಚಿಲುವೆಯಾಯಿತು. 'ಆಗಸ್ಟ್ ತಿಂಗಳ ಅಂತ್ಯದ ವೇಳೆಗೆ ಗೊರೂರು ಭಾಗದಲ್ಲಿ ಚಳವಳಿ ಪ್ರಬಲವಾಗಿತ್ತು".

"ಆಗಸ್ಟ್ ೧೫, ೧೯೪೨ ರಂದು ಹಾಸನದಲ್ಲಿ ಒಂದು ಸಾರ್ವಜನಿಕ ಸಭೆ ಏರ್ಪಾಡಾಗಿತ್ತು. ವಿಷಯ ತಿಳಿದ ಪೊಲೀಸರು ಸ್ಥಳಕ್ಕೆ ಬಂದು ಗೋಲಿಬಾರ್ ಮಾಡಿದರು. ಜನ ಚೆಲ್ಲಾಪಿಲ್ಲಿಯಾಗಿ ಓಡಿದರು. ಕೈಗೆ ಸಿಕ್ಕ ಮೂರು ಜನರನ್ನು ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾದರು". ಪ್ರಥಮವಾಗಿ ವಾರದ ಸಂತೆಯಲ್ಲಿ ಸುಂಕ ನಿರಾಕರಣ ಧರಣಿ ಆಗಸ್ಟ್ ೧೪ ರಂದು ಅರಸೀಕೆರೆಯಲ್ಲಿ ಪ್ರಾರಂಭವಾಯಿತು. ಇದರಲ್ಲಿ ಎಚ್.ಸಿ. ಬೋರಣ್ಣಗೌಡರನ್ನು ಬಂಧಿಸಲಾಯಿತು. ಮುಂದೆ ಇದೇ ರೀತಿಯ ಧರಣಿಗಳು ಜಿಲ್ಲೆಯಾದ್ಯಂತ ನಡೆಯಲಾರಂಭಿಸಿದವು. ಅದೇ ದಿನ ಹಾಸನದಲ್ಲಿ ಅನೇಕ ವಿದ್ಯಾರ್ಥಿಗಳು ಒಂದು ಸಭೆ ನಡೆಸಿದರು. ಮೈಸೂರಿನಲ್ಲಿ ವಿದ್ಯಾರ್ಥಿಗಳೆಲ್ಲ ಒಟ್ಟಿಗೆ ಸೇರಿ ಅನೇಕ ಗುಂಪುಗಳನ್ನು ಮಾಡಿಕೊಂಡು ಟಿಕೆಟ್ ರಹಿತವಾಗಿ ರೈಲುಗಳ ಪ್ರಯಾಣ ಪ್ರಾರಂಭಿಸಿದರು. ಅದರಲ್ಲಿ ಒಂದು ಗುಂಪು ಮೈಸೂರಿನಿಂದ ಅರಸೀಕೆರೆವರೆಗೆ ಪ್ರಯಾಣ ಬೆಳೆಸಿದರು. ಇದೇ ಸಮಯಕ್ಕೆ ಸರಿಯಾಗಿ ಆಗಸ್ಟ್ ೧೮ ರಂದು ಮತ್ತೊಂದು ಮೈನವಿರೇಳಿಸುವ ಪ್ರಮುಖ ಘಟನೆಯೊಂದು ನಡೆಯಿತು. 'ಅರಸೀಕೆರೆ ತಾಲ್ಲೂಕಿನ ಬಾಣಾವರದಲ್ಲಿ ವಿದ್ಯಾರ್ಥಿಗಳು ಮತ್ತು ಕಾಂಗ್ರೆಸ್ ಕಾರ್ಯಕರ್ತರು ರೈಲ್ವೆ ಹಳಿಗಳನ್ನು ಕತ್ತರಿಸಿ ಬಾಣಾವರ ರೈಲ್ವೆ ನಿಲ್ದಾಣಕ್ಕೆ ಬೆಂಕಿ ಹಚ್ಚಿದರು. ಹಾಸನದ ಮುಖ್ಯ ಇಂಜಿನಿಯರ್ ಮತ್ತು ಉಪ ಆಯುಕ್ತರು ಮೈಸೂರಿನ ದಿವಾನರಿಗೆ ರೈಲ್ವೆ ನಿಲ್ದಾಣದ ಜೊತೆಗೆ ಎಣ್ಣೆ ಟ್ಯಾಂಕರಿಗೂ ಬೆಂಕಿ ಹಚ್ಚಿ ನಾಶಗೊಳಿಸಿದ್ದಾರೆ. ಐನೂರರಿಂದ ಆರುನೂರು ವಿದ್ಯಾರ್ಥಿಗಳು ಈ ದುಷ್ಕೃತ್ಯಕ್ಕೆ ಕಾರಣರಾಗಿದ್ದಾರೆ ಎಂದು ವರದಿ ಮಾಡಿದರು.

ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದರು. ಮೈಸೂರಿನಲ್ಲಿ ಸಭೆ ಸೇರಿ ವಿದ್ಯಾರ್ಥಿಗಳು ಮುಷ್ಕರ ಹೂಡಲು ನಿರ್ಧರಿಸಿದರು. ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ವಿದ್ಯಾರ್ಥಿಗಳು



ಅನೇಕ ಗುಂಪುಗಳನ್ನು ಮಾಡಿಕೊಂಡು ಟಿಕೆಟ್ ರಹಿತವಾಗಿ ರೈಲುಗಳಲ್ಲಿ ಪ್ರಯಾಣ ಮಾಡಿದರು. ಎಂ.ವಿ. ಕೃಷ್ಣಪ್ಪನವರ ನಾಯಕತ್ವದಲ್ಲಿ ೬೦೦ ಜನರ ಗುಂಪು ಆಗಸ್ಟ್ ೧೮ ರಿಂದ ೨೦ ರ ನಡುವೆ ಹೊಳೆನರಸೀಪುರ, ಹಾಸನ, ಅರಸೀಕೆರೆಗಳಿಗೆ ಪ್ರಯಾಣ ಬೆಳೆಸಿ ಘೋಷಣೆಗಳನ್ನು ಕೂಗುತ್ತಾ, ರೈಲು ಯಂತ್ರಚಾಲಕ, ಗಾರ್ಡ್, ಸ್ಟೇಷನ್ ಮಾಸ್ಟರ್ ಸೇರಿದಂತೆ ಎಲ್ಲರಿಗೂ ಖಾದಿ ಟೋಪಿಗಳನ್ನು ಬಲವಂತವಾಗಿ ಧರಿಸಿದರು. ಹಾಸನದಲ್ಲಿ ಒಂದು ಸಾರ್ವಜನಿಕ ಸಭೆಯನ್ನು ನಡೆಸಿದರು. ಈ ಸಭೆಗೆ ಜಿಲ್ಲೆಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ವಿದ್ಯಾರ್ಥಿಗಳು ಜಿಲ್ಲೆಯ ಪ್ರಮುಖ ನಗರಗಳಲ್ಲಿ ಸಂಚರಿಸಿ ಚಳುವಳಿಯನ್ನು ಇಮ್ಮಡಿಗೊಳಿಸುವಲ್ಲಿ ಯಶಸ್ವಿಯಾದರು.

ಈ ಚಳವಳಿಯಲ್ಲಿ ಮದ್ಯ ನಿಷೇಧ, ಸಂತೆಗಳಲ್ಲಿ ಸಂತೆ ಸುಂಕ ನಿರಾಕರಣೆ, ಕರ ನಿರಾಕರಣೆ, ರೈಲ್ವೆ ಹಳಿಗಳ ಧ್ವಂಸ ಇತ್ಯಾದಿಗಳ ಮೂಲಕ ಚಳವಳಿ ಜಿಲ್ಲಾ ವ್ಯಾಪಿಯಾಗಿ ಪ್ರತಿನಿತ್ಯ ನಡೆಯುತ್ತಿತ್ತು. ಪ್ರತಿದಿನ ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನಾ ಮೆರವಣಿಗೆಗಳು ನಡೆಯುತ್ತಿದ್ದವು. ಮೈಸೂರು ಸಂಸ್ಥಾನದ ಈ ಚಳವಳಿಯಲ್ಲಿ ಎಲ್ಲಾ ನಾಯಕರು ಸೆರೆಮನೆ ಸೇರಿದರು. ಇದರಿಂದ ಗ್ರಾಮೀಣ ಪ್ರದೇಶದ ರೈತಾಪಿ ವರ್ಗ ಈ ಚಳವಳಿಯಲ್ಲಿ ನಾಯಕತ್ವದ ಕೊರತೆಯನ್ನು ದೂರಮಾಡಿದರು. ವಿದ್ಯಾರ್ಥಿಗಳು, ಕಾರ್ಮಿಕರು, ಶಾಲಾ ಕಾಲೇಜು, ಕಚೇರಿಗಳನ್ನು ಬಹಿಷ್ಕರಿಸಿದರು. ಆಗಿನ ಕಾಲದ ಎಲ್ಲಾ ವಕೀಲರುಗಳು ಈ ಚಳವಳಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ಬಳಸಿಕೊಂಡರು.

ಅರಸೀಕೆರೆ, ಬಾಣಾವರ, ಗಂಡಸಿ, ಜಾವಗಲ್, ಹಳೇಬಿಡು, ನಿಟ್ಟೂರು, ಗಂಗೂರು, ಗೊರೂರು, ಹಾರನಹಳ್ಳಿ, ಬೇಲೂರು, ಶ್ರವಣಬೆಳಗೊಳ, ಚನ್ನರಾಯಪಟ್ಟಣ, ಶ್ರೀನಿವಾಸಪುರ ಇನ್ನೂ ಅನೇಕ ಹಳ್ಳಿಗಳಲ್ಲಿ ಜನರು ಸಂತೆ ಸುಂಕ ನಿರಾಕರಣೆಯಲ್ಲಿ ಭಾಗವಹಿಸಿದರು. ೧೯೪೨ ಸೆಪ್ಟೆಂಬರ್ ೨೪ ರಂದು ಹಾಸನದ ದಾಸರಕೊಪ್ಪಲಿನಲ್ಲಿ ಹೆಂಡದಂಗಡಿಯ ಧ್ವಂಸ ಪ್ರಕರಣದಲ್ಲಿ ಬ್ರಿಟಿಷರು ಗೋಲಿಬಾರ್ ಮಾಡಿದರು. ಇದರಿಂದ ಒಬ್ಬ ಮರಣ ಹೊಂದಿ ಅನೇಕರು ಗಾಯಗೊಂಡರು.

೧೯೪೨ ರ ಪ್ರಾರಂಭದಲ್ಲಿ ಚನ್ನರಾಯಪಟ್ಟಣ ತಾಲ್ಲೂಕು ಕಾಂಗ್ರೆಸ್ ಒಂದು ರಾಜಕೀಯ ಅಧಿವೇಶನವನ್ನು ಸಂಘಟಿಸಿದ್ದರು. ಇದರ ಅಧ್ಯಕ್ಷತೆಯನ್ನು

ಯಚೇನಹಳ್ಳಿ ಮಲ್ಲಯ್ಯ ವಹಿಸಿಕೊಂಡಿದ್ದರು. ಹೆಚ್.ಸಿ. ದಾಸಪ್ಪ ಉದ್ಘಾಟಿಸಿದರು. ಚನ್ನರಾಯಪಟ್ಟಣ ತಾಲ್ಲೂಕಿನ ಕಾಂತರಾಜಪುರ ಜಿಲ್ಲೆಯಲ್ಲಿಯೇ ಚಳವಳಿ ಸಂಘಟನೆಯಲ್ಲಿ ಪ್ರಥಮದ್ದಾಗಿತ್ತು. ಈ ಊರಿನ ಚಳವಳಿಗಾರರನ್ನು ನಿಯಂತ್ರಿಸಲು ಸರ್ಕಾರ ಅಲ್ಲಿಗೆ ಒಬ್ಬ ಪಿ.ಎಸ್.ಐ. ಮತ್ತು ೪ ಜನ ಪೊಲೀಸ್ ಪೇದೆಗಳನ್ನು ಖಾಯಂ ಆಗಿ ನೇಮಿಸಿತ್ತು. ಅಕ್ಟೋಬರ್ ೧೯೪೨ ರಂದು ಶ್ರವಣಣಬೆಳಗೊಳ ಸಂತೆ ಗಲಭೆಯಲ್ಲಿ ೬೦೦ಕ್ಕೂ ಹೆಚ್ಚು ಜನರ ಬಂಧನವಾಯಿತು. ಈ ಬಂಧನವನ್ನು ವಿರೊಧಿಸಿ ಜಿಲ್ಲೆಯಾದ್ಯಂತ ೧೫ ಸಾವಿರಕ್ಕೂ ಹೆಚ್ಚು ಜನರು ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿದರು. ಅವರನ್ನು ನಿಯಂತ್ರಿಸಲು ಗೋಲಿಬಾರ್, ಲಾಟಿಚಾರ್ಜ್‌ಗಳು, ನಡೆದು ಸಾವಿರಾರು ಜನರು ಗಾಯಗೊಂಡರು. ಪುನಃ ಸೆಪ್ಟೆಂಬರ್ ೬ ರಂದು ಶ್ರವಣಬೆಳಗೊಳದಲ್ಲಿ ಸಂತೆ ನಡೆಸಿ ಸಂತೆ ಸುಂಕ ಕೊಡಲು ನಿರಾಕರಿಸಿದರು. ಇದರ ವಿರುದ್ಧ ಪೋಲಿಸರು, ಲಾಟಿ ಚಾರ್ಜ್ ಮಾಡುತ್ತಿದ್ದಾಗ ಜನರು ಒಬ್ಬ ಪೋಲೀಸನನ್ನು ಚಳವಳಿಗಾರರು ಕಲ್ಲಿನಿಂದ ಹೊಡೆದು ಕೊಂದು ಹಾಕಿದರು. ಇದರಿಂದ ಕೋಪಗೊಂಡ ಸರ್ಕಾರ ಚಳವಳಿಗಾರರನ್ನು ದಮನಗೊಳಿಸಲು ಒಂದು ದೊಡ್ಡ ತುಕಡಿಯನ್ನು ಕಳುಹಿಸಿದರು.

‘ಬಾಣಾವರ ರೈಲ್ವೆ ನಿಲ್ದಾಣದ ಬೆಂಕಿ ದುರಂತದಿಂದ ಸ್ಫೂರ್ತಿಗೊಂಡ ಜನರು ಜಿಲ್ಲೆಯ ಪ್ರಮುಖ ರೈಲ್ವೆ ನಿಲ್ದಾಣದಲ್ಲಿ ದೊಡ್ಡ ಪೆಟ್ರೋಲ್ ಬಂಕ್ ಹೊಂದಿದ್ದು ಇದೂ ಕೂಡ ಅಗ್ನಿಗಾಹುತಿಯಾದರೆ ದೊಡ್ಡ ನಷ್ಟವುಂಟಾಗುತ್ತದೆ, ಮುಂದೆ ಆಗುವ ಅನಾಹುತವನ್ನು ತಪ್ಪಿಸಲು ಮತ್ತು ಜಿಲ್ಲೆಯಲ್ಲಿ ಶಾಂತಿ ಕಾಪಾಡಲು ಸೈನಿಕ ಸಹಾಯಕಬೇಕೆಂದು ಉಪ ಆಯುಕ್ತರು ರಾಜ್ಯದ ಮುಖ್ಯಕಾರ್ಯದರ್ಶಿಗೆ ಪತ್ರ ಬರೆದರು. ಅಂದಿನ ವಿದ್ಯಾರ್ಥಿಗಳ ಪ್ರತಿಭಟನೆ ಮತ್ತು ಅದರಿಂದುಂಟಾಗಿದ್ದ ನಷ್ಟ ಬ್ರಿಟಿಷರಿಗೆ ಭಯವನ್ನುಂಟು ಮಾಡಿತ್ತು. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಹಾರ್‍ನಳ್ಳಿ ರಾಮಸ್ವಾಮಿ, ಮಾವಿನಕೆರೆ ತಿಮ್ಮೇಗೌಡ ಇನ್ನಿತರರನ್ನು ಆಗಸ್ಟ್ ೨೬ ರಂದು ವಿದ್ಯಾರ್ಥಿಗಳನ್ನು ಸಂಘಟಿಸಿದ್ದಕ್ಕಾಗಿ ಅವರನ್ನು ಕ್ರಾಂತಿಕಾರಿಗಳ ಸೃಷ್ಟಿಕರ್ತರು ಎಂದು ಅವರುಗಳನ್ನು ಸೆರೆಮನೆಗೆ ತಳ್ಳಿದರು.

ಸೆಪ್ಟೆಂಬರ್ ೨ ರಂದು ಕೆಲವು ಕಾಂಗ್ರೆಸ್ ಕಾರ್ಯಕರ್ತರು ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಗೊರೂರು ಮತ್ತು ಬೇಲೂರು ತಾಲ್ಲೂಕುಗಳ



ಸಂತೆಗಳಲ್ಲಿ ಪ್ರತಿಭಟನೆ ನಡೆಸುವುದಾಗಿ ಪತ್ರ ಬರೆದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಕಾರ್ಯದರ್ಶಿ ಇದು ಒಂದು ಕೆಟ್ಟ ಬೆಳವಣಿಗೆ, ಇದನ್ನು ಬಲವಂತವಾಗಿ ಅರ್ಧದಷ್ಟಾದರೂ ತಡೆಯಬೇಕು, ವಿಶೇಷವಾಗಿ ಹಾಸನ ಜಿಲ್ಲೆಯಲ್ಲಿ ಇದು ಮುಂದೆ ಪ್ರಬಲವಾಗಿ ಬೆಳೆದು ಸಾವಿರಾರು ಹಳ್ಳಿಗರು ಭಾಗವಹಿಸಿ ಸರ್ಕಾರವನ್ನು ಕಡೆಗಣಿಸಿ ಸರ್ಕಾರಕ್ಕೆ ಅವಮಾನ ಮಾಡುತ್ತಾರೆ. ಅದಕ್ಕಾಗಿ ಶಾಲಾ ಕಾಲೇಜುಗಳಲ್ಲಿ ಮತ್ತು ಸಂತೆಗಳಲ್ಲಿ ಪಿಕೇಟಿಂಗ್ ನಡೆಸುವುದನ್ನು ನಿಲ್ಲಿಸಲು ಕ್ರಮಕೈಗೊಳ್ಳುವಂತೆ ಮ್ಯಾಜಿಸ್ಟ್ರೇಟರಿಗೆ ತಿಳಿಸಿದರು. ಸೆಪ್ಟೆಂಬರ್ ೨ ರ ವೇಳೆಗೆ ಶಾಲೆಗಳಲ್ಲಿ ಪಿಕೇಟಿಂಗ್ ನಡೆಸುವುದು ಮುಂದುವರೆದು ಹಾಜರಾತಿಯ ಪ್ರಮಾಣ ಕನಿಷ್ಠ ಮಟ್ಟ ತಲುಪಿತ್ತು. ಜಿಲ್ಲೆಯಾದ್ಯಂತ ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳನ್ನು ಬಹಿಷ್ಕರಿಸಿದರು. ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣ ತಾಲ್ಲೂಕಿನ ಅನೇಕ ಕಡೆ ವಿದ್ಯಾರ್ಥಿಗಳು ಟೆಲಿಗ್ರಾಫ್ ತಂತಿಗಳನ್ನು, ರೈಲ್ವೆ ಕಂಬಿಗಳನ್ನು ಕತ್ತರಿಸಿದರು. ಚನ್ನರಾಯಪಟ್ಟಣದ ಹತ್ತಿರದ ಕಾಂತರಾಜಪುರ ಈ ಎಲ್ಲಾ ಚಟುವಟಿಕೆಗಳ ಕೇಂದ್ರವಾಗಿತ್ತು. ಹಾಸನ, ಅರಸೀಕೆರೆ, ಹೊಳೆನರಸೀಪುರ, ಬೇಲೂರು, ಚನ್ನರಾಯಪಟ್ಟಣ, ಸಕಲೇಶಪುರ ಇನ್ನೂ ಮುಂತಾದ ಸ್ಥಳಗಳಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು ಮತ್ತು ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವಂತೆ ಕರೆ ನೀಡಿದರು. ಹಾಸನದ ಉಪ ಆಯುಕ್ತರು ಮುಖ್ಯ ಕಾರ್ಯದರ್ಶಿಗಳು ವಿದ್ಯಾರ್ಥಿಗಳಿಗೆ ಚಳವಳಿಯನ್ನು ನಿಲ್ಲಿಸುವಂತೆ ಮನವಿ ಮಾಡಿದರು. ಪಿಕೇಟಿಂಗ್ ನಡೆಸಿದ್ದಕ್ಕಾಗಿ ಅರಸೀಕೆರೆಯಿಂದ ಏಳು ಜನ ವಿದ್ಯಾರ್ಥಿಗಳನ್ನು ಹಾಸನದಿಂದ ಏಳು ಜನ ವಿದ್ಯಾರ್ಥಿಗಳನ್ನು ಬಂಧಿಸಿದರು. ನಿಟ್ಟೂರು ಶ್ರೀನಿವಾಸರಾಯರು ಹೈದರಾಬಾದಿನಲ್ಲಿದ್ದ ಹಾಸನದ ವಕೀಲ ಎ.ಜಿ. ರಾಮಚಂದ್ರರಾವ್ ಅವರನ್ನು ಭೇಟಿ ಮಾಡಿ ಅವರ ಮನವೊಲಿಸಿ ಕರ್ನಾಟಕಕ್ಕೆ ಕರೆತಂದರು. ಇವರು ಸಂಸ್ಥಾನದಾದ್ಯಂತ ಸಂಚರಿಸಿ ಜನರಲ್ಲಿ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಕೇಳಿಕೊಂಡರು.

**ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಗ್ರಾಮೀಣ ಜನತೆ :**

ಗೊರೂರು ಸುತ್ತ ಮುತ್ತ ಚಿಕ್ಕ ಪುಟ್ಟ ಪಟ್ಟಣಗಳಲ್ಲಿ ಕ್ವಿಟ್ ಇಂಡಿಯಾ ಕರೆಗೆ ಎಲ್ಲಾ ವರ್ಗದ ಜನರು ಭಾಗವಹಿಸುತ್ತಿರುವ ಕಾಲದಲ್ಲಿಯೇ ಜಿಲ್ಲೆಯ ಹಳ್ಳಿಗಳಲ್ಲಿ ವಾಸಿಸುತ್ತಿರುವ ರೈತ ಸಮುದಾಯ ಚಳವಳಿಗೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು.ರೈತರು ತಮ್ಮ ಮನೆ–ಮಠಗಳಿಗೆ,

ಜಮೀನುಗಳಿಗೆ ಕಂದಾಯ ಕೊಡಲು ನಿರಾಕರಿಸಿದರು. ಅರಸೀಕೆರೆಯಲ್ಲಿ ನಡೆದ ಪ್ರಥಮ ಸಂತೆ ಪಿಕೇಟಿಂಗ್‌ನಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಬಂದಿದ್ದು ಲಾಠಿ ಏಟಿನಿಂದ ಗಾಯಗೊಂಡರು, ಮತ್ತೆ ಕೆಲವರು ಜೈಲು ಸೇರಿದರು. ಆದರೆ, ರೈತರು ಇದರಿಂದ ಧೃತಿಗೆಡಲಿಲ್ಲ. ಸೆಪ್ಟೆಂಬರ್ ೨ ರಂದು ಗೊರೂರಿನ ಸಂತೆಯಲ್ಲಿ ಪಿಕೇಟಿಂಗ್ ನಡೆಸಿದರು. ಚನ್ನರಾಯಪಟ್ಟಣ ತಾಲ್ಲೂಕು ಜಿಲ್ಲೆಯೇ ಜನರಿಗೆ ರಾಜಕೀಯ ಶಿಕ್ಷಣ ನೀಡುವ, ಕ್ರಾಂತಿಕಾರಿಗಳನ್ನು ಸೃಷ್ಟಿಸುವ ಕೇಂದ್ರವಾಗಿತ್ತು. ೧೯೪೨ ರ ಪ್ರಾರಂಭದಲ್ಲಿಯೇ ಚನ್ನರಾಯಪಟ್ಟಣ ತಾಲ್ಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದ ಅಂಕಂ ಸಂಜೀವಶೆಟ್ಟಿ ತಾಲ್ಲೂಕು ಮಟ್ಟದ ಒಂದು ಸಮಾವೇಶ ಏರ್ಪಡಿಸಿದ್ದರು. ಎಚ್. ಸಿ. ದಾಸಪ್ಪ ಅವರು ಈ ಸಮಾವೇಶವನ್ನು ಉದ್ಘಾಟಿಸಿದರು. ಯಾಚೇನಳ್ಳಿ ಮಲ್ಲಯ್ಯ ಇದರ ಅಧ್ಯಕ್ಷರಾಗಿದ್ದರು. ಈ ಸಮಾವೇಶದಲ್ಲಿ ಸಾವಿರಾರು ರೈತರು ಭಾಗವಹಿಸಿದ್ದರು. ಈ ಸಮಾವೇಶದಲ್ಲಿ ಭಾಗವಹಿಸಿದ್ದ ಜನರಿಗೆ ಸರ್ಕಾರಕ್ಕೆ ಅಸಹಕಾರ ತೋರುವಂತೆ ಕರೆ ನೀಡಲಾಯಿತು. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದರು. ಅಂಕಂ ಸಂಜೀವಶೆಟ್ಟಿ, ಯಾಚೇನಳ್ಳಿ ಮಲ್ಲಯ್ಯ, ತಾಲ್ಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಸಿ. ಎನ್. ಕೃಷ್ಣಪ್ಪ ಮುಂತಾದವರನ್ನು ಬಂಧಿಸಲಾಯಿತು. ಸಿ.ಟಿ. ರಾಮಕೃಷ್ಣ, ಆನೆಕೆರೆ ಕೃಷ್ಣಮೂರ್ತಿ ಚಳವಳಿಗಳನ್ನು ಮುಂದುವರಿಸಿದರು. ಶಿವನಳ್ಳಿಯಲ್ಲಿ ಹೆಂಡದಂಗಡಿಗಳನ್ನು ಧ್ವಂಸಗೊಳಿಸಿ ಟೆಲಿಫೋನ್ ತಂತಿಗಳನ್ನು ಕತ್ತರಿಸಿದರು. ಕಾಂತರಾಜಪುರ ತಾಲ್ಲೂಕಿನ ಎಲ್ಲಾ ಕ್ರಾಂತಿಕಾರಿ ಚಟುವಟಿಕೆಗಳ ಕೇಂದ್ರವಾಗಿತ್ತು. ಈ ಊರಿನ ಚಳವಳಿಗಾರರನ್ನು ನಿಯಂತ್ರಿಸಲು ಸರ್ಕಾರ ಅಲ್ಲಿಗೆ ಒಬ್ಬ ಪಿ.ಎಸ್.ಐ. ಮತ್ತು ೪ ಜನ ಪೋಲೀಸ್ ಪೇದೆಗಳನ್ನು ಖಾಯಂ ಆಗಿ ನೇಮಿಸಿತ್ತು. ಅಕ್ಟೋಬರ್ ೧೯೪೨ ರಂದು ಶ್ರವಣಣಬೆಳಗೊಳ ಸಂತೆ ಗಲಭೆಯಲ್ಲಿ ೬೦೦ ಕ್ಕೂ ಹೆಚ್ಚು ಜನರ ಬಂಧನವಾಯಿತು. ಈ ಬಂಧನವನ್ನು ವಿರೋಧಿಸಿ ಜಿಲ್ಲೆಯಾದ್ಯಂತ ೧೫ ಸಾವಿರಕ್ಕೂ ಹೆಚ್ಚು ಜನರು ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿದರು. ಅವರನ್ನು ನಿಯಂತ್ರಿಸಲು ಗೋಲಿಬಾರ್, ಲಾಟಿ ಚಾರ್ಜ್‌ಗಳು, ನಡೆದು ಸಾವಿರಾರು ಜನರು ಗಾಯಗೊಂಡರು. ಪುನಃ ಸೆಪ್ಟೆಂಬರ್ ೬ ರಂದು ಶ್ರವಣಬೆಳಗೊಳದಲ್ಲಿ ಸಂತೆ ನಡೆಸಿ ಸಂತೆ ಸುಂಕ ಕೊಡಲು ನಿರಾಕರಿಸಿದರು. ಇದರ ವಿರುದ್ಧ ಪೋಲಿಸರು, ಲಾಟಿ ಚಾರ್ಜ್ ಮಾಡುತ್ತಿದ್ದಾಗ



ಜನರು ಒಬ್ಬ ಪೋಲೀಸನನ್ನು ಚಳವಳಿಗಾರರು ಕಲ್ಲಿನಿಂದ ಹೊಡೆದು ಕೊಂದು ಹಾಕಿದರು. ಇದರಿಂದ ಕೋಪಗೊಂಡ ಸರ್ಕಾರ ಚಳವಳಿಗಾರರನ್ನು ದಮನಗೊಳಿಸಲು ಒಂದು ದೊಡ್ಡ ತುಕಡಿಯನ್ನು ಕಳುಹಿಸಿದರು.

ಎಸ್.ಪಿ. ಬಂದೂಕಿನಿಂದ ೧೧೮ ಸುತ್ತು ಮತ್ತು ಪಿ.ಎಸ್.ಐ. ಬಂದೂಕಿನಿಂದ ೮ ಸುತ್ತು ಗುಂಡು ಹಾರಿಸಿದರು. ಚಳವಳಿಗಾರರು ದಿಕ್ಕಾಪಾಲಾಗಿ ಚದುರಿದರು. ೬ ಜನರು ಸ್ಥಳದಲ್ಲೇ ಮೃತಪಟ್ಟರು. ಒಬ್ಬರು ಹಾಸನದ ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಈ ಘಟನೆಯನ್ನು ಮೈಸೂರು ರಾಜ್ಯಾದ್ಯಾಂತ ವಿರೋಧ ವ್ಯಕ್ತಪಡಿಸಿದರು. ಈ ಘಟನೆ ಕರ್ನಾಟಕದ ಸ್ವಾತಂತ್ರ್ಯ ಹೋರಾಟದಲ್ಲಿ ಶ್ರವಣಬೆಳಗೊಳದ ಅಡಚಣೆ ಎಂದು ಪ್ರತಿಪಾದಿಸಿದ್ದಾರೆ ಚನ್ನರಾಯಪಟ್ಟಣದ ಸಂತೆಯಲ್ಲಿ ಧರಣಿ ನಡೆಸಲು ಮೂರು ಸಾವಿರ ರೈತರು ವಿವಿಧ ಭಾಗಗಳಿಂದ ಬಂದು ಸೇರಿದರು. ಸ್ಥಳಕ್ಕೆ ಬಂದ ಪೊಲೀಸರು ಜನರನ್ನು ಚದುರಿಸಲು ಲಾಠಿಚಾರ್ಜ್ ಮಾಡಿದರು. ರೈತರು ಧೃತಿಗೆಡದೆ ಚಳವಳಿಯನ್ನು ಮುನ್ನಡೆಸಿದರು. ಕೊನೆಗೆ ಪೊಲೀಸರು ವಿಧಿ ಇಲ್ಲದೆ ಗುಂಡು ಹಾರಿಸಿದರು. ಐದು ಜನ ಸ್ಥಳದಲ್ಲೇ ಸಾವನ್ನಪ್ಪಿದರು. ಸುಮಾರು ೬೦೦ ಜನರ ಬಂಧನವಾಯಿತು. ಇದರಿಂದ ರೊಚ್ಚಿಗೆದ್ದ ಜಿಲ್ಲೆಯ ಜನತೆ ಮಧ್ಯಾಹ್ನದ ವೇಳೆಗೆ ಐದೈದು ಸಾವಿರದಷ್ಟು ಸಂಖ್ಯೆಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಯನ್ನು ಮುತ್ತಿದರು. ಇದರಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು. ಆನೆಕೆರೆ ಕೃಷ್ಣಮೂರ್ತಿಯವರು ಜನರನ್ನು ಶಾಂತ ರೀತಿಯಲ್ಲಿ ತಮ್ಮ ಹಳ್ಳಿಗಳಿಗೆ ಹಿಂತಿರುಗಿಸುವಂತೆ ಮ್ಯಾಜಿಸ್ಟ್ರೇಟರಿಗೆ ಮನವಿ ಮಾಡಿದರು. ಆದರೆ ಮ್ಯಾಜಿಸ್ಟ್ರೇಟರು ಹೆಚ್ಚು ಪೊಲೀಸ್ ನೆರವನ್ನು ಪಡೆದು ಪರಿಸ್ಥಿತಿಯನ್ನು ಬಲವಂತವಾಗಿ ಹತೋಟಿಗೆ ತಂದರು. ಇದಾದ ೪–೫ ದಿನಗಳಲ್ಲಿ ಶ್ರವಣಬೆಳಗೊಳ ಸಂತೆಯಲ್ಲಿ ಪಿಕೇಟಿಂಗ್ ಮಾಡುತ್ತಿದ್ದವರ ಮೇಲೆ ಪೊಲೀಸರು ಲಾಠಿ ಪ್ರಯೋಗ ಮಾಡಿದರು. ಜನ ಪ್ರಚೋದಿತರಾಗಿ ಪೊಲೀಸರ ಮೇಲೆ ಕಲ್ಲಿನ ಮಳೆಗರೆದರು. ಒಬ್ಬ ಸ್ಥಳದಲ್ಲೇ ಮರಣ ಹೊಂದಿದನು. ಆಗ ಪೊಲೀಸರು ಗೋಲಿಬಾರ್ ಮಾಡಿದರು. ಜನ ಪ್ರಚೋದಿತರಾಗಿ ಪೊಲೀಸರ ಮೇಲೆ ಕಲ್ಲಿನ ಮಳೆಗರೆದರು. ಅನೇಕ ಜನ ರೈತರು ಗಾಯಗೊಂಡರು. ಸಬ್ ಡಿವಿಜನ್ ಅಧಿಕಾರಿ ತಹಶೀಲ್ದಾರ್, ಪೊಲೀಸ್ ಸೂಪರಿಂಟೆಂಡೆಂಟ್ ಕಲ್ಲೇಟಿನಿಂದ ಗಾಯಗೊಂಡರು.

ಇದೇ ಸಮಯದಲ್ಲಿ ಹಾಸನ ತಾಲ್ಲೂಕಿನ ಕುದುರಗುಂಡಿ, ಮುತ್ತತ್ತಿ, ನಿಟ್ಟೂರು, ಸಾಲಗಾಮೆಗಳಲ್ಲಿ ಬೇಲೂರು ತಾಲ್ಲೂಕಿನ ಅನಿಕೆ, ಜಾವಗಲ್, ಅರಸೀಕೆರೆ ಕೆಲವು ಕಡೆಗಳಲ್ಲಿ ಜನರು ಸರ್ಕಾರವನ್ನು ಬಹಳವಾಗಿ ಕಾಡಿಸಿದರು. ಆಲೂರಿನಲ್ಲಿ ಅಕ್ಟೋಬರ್ ೧೩ ರಂದು ಸಂತೆ ಧರಣಿ ನಡೆಸಿದ್ದಕ್ಕಾಗಿ ಆರು ಜನರನ್ನು ಬಂಧಿಸಿದರು. ಅರಸೀಕೆರೆಯಲ್ಲಿ ಒಂದು ಸಮಾವೇಶವನ್ನು ತಾಲ್ಲೂಕು ಕಾಂಗ್ರೆಸ್ ಕಾರ್ಯಕರ್ತರು ಏರ್ಪಡಿಸಿದ್ದರು. ಪ್ರತಿದಿನ ಅರಸೀಕೆರೆಯಲ್ಲಿ ನೂರಾರು ಜನ ಟಿಕೇಟ್ ರಹಿತವಾಗಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಅಕ್ಟೋಬರ್ ೧೭ ರಿಂದ ೧೯ ರವರೆಗೆ ಕೈಗೆ ಸಿಕ್ಕವರನ್ನು ಬಂಧಿಸಲಾಯಿತು. ಅಕ್ಟೋಬರ್‌ನಲ್ಲಿ ಜಾವಗಲ್ ಸಂತೆಯಲ್ಲಿ ಧರಣಿ ನಡೆಸಿದರು. ಸುತ್ತಮುತ್ತ ಹಳ್ಳಿಗಳಿಂದ ಜನ ಭಾಗವಹಿಸಿದರು. ಸ್ಥಳಕ್ಕೆ ಧಾವಿಸಿದ ಪೊಲೀಸರು ಲಾಠಿಚಾರ್ಜ್ ಮಾಡಿದರು. ಜನ ಚಲ್ಲಾಪಿಲ್ಲಿಯಾಗಿ ರಾತ್ರೋರಾತ್ರಿ ಕಾಡುಗಳಲ್ಲಿ ನಡೆದು ತಮ್ಮ ಹಳ್ಳಿಗಳಿಗೆ ಸೇರಿಕೊಂಡರು. ಈ ಚಳುವಳಿಗೆ ನಿಟ್ಟೂರು, ಮುತ್ತತ್ತಿ, ಕುದುರಗುಂಡಿ, ಹಳೇಬೀಡು, ಸಾಲಗಾಮೆ, ಹಲಸಿಳ್ಳಿ, ಯಲಗುಂದ, ಗಂಗೂರು, ಸಾಣೇನಳ್ಳಿ ಇನ್ನೂ ಮುಂತಾದ ಕಡೆಗಳಿಂದ ರೈತರು ಭಾಗವಹಿಸಿದ್ದರು.ಈ ಚಳುವಳಿಯಲ್ಲಿ ಭಾಗವಹಿಸಿದ್ದ ಜನರನ್ನು ಬಂಧಿಸುವ ಸಲುವಾಗಿ ಬ್ರಿಟಿಷ್ ಸೇನೆ ಹಾಸನ ತಾಲ್ಲೂಕಿನ ರಾಮದೇವರಪುರ ಅರಣ್ಯದ ಗೆಸ್ಟ್‌ಹೌಸಿನಲ್ಲಿ ಬೀಡು ಬಿಟ್ಟಿದ್ದರು. ಅಕ್ಟೋಬರ್ ೨೪ ರಂದು ಗಂಗೂರು ಮತ್ತು ಸಾಣೇನಹಳ್ಳಿ ರೈತರನ್ನು ಬಂಧಿಸಿದರು. ೩೦೦ ಪೊಲೀಸರೊಂದಿಗೆ ನಿಟ್ಟೂರಿಗೆ ಆಗಮಿಸಿ ಬಸವೇಗೌಡ, ಕಾಳಾಚಾರಿ, ದೊಡ್ಡಯ್ಯಶೆಟ್ಟಿ ಮುಂತಾದ ಹತ್ತು ಜನರನ್ನು ಬಂಧಿಸಿದರು.

## ಪ್ರಜಾರಾಜ್ಯ ಸ್ಥಾಪನೆ

'ಪ್ರಜೆಗಳೇ ತಮ್ಮ ಆಡಳಿತವನ್ನು ತಾವೇ ನಡೆಸಿಕೊಳ್ಳುವುದು ಪ್ರಜಾರಾಜ್ಯ. ಬ್ರಿಟಿಷ್ ಅಧಿಕಾರಿಗಳ ಕೈಕೆಳಗೆ ಆಳಿಸಿಕೊಳ್ಳುವುದನ್ನು ತಿರಸ್ಕರಿಸಿದ ಹಾಸನ ತಾಲ್ಲೋಕಿನ ಸೊಪ್ಪಿನಹಳ್ಳಿ, ನಿಟ್ಟೂರು ಇನ್ನೂ ಮುಂತಾದ ೩೦–೪೦ ಹಳ್ಳಿಗಳು ಒಟ್ಟಿಗೆ ಸೇರಿ ಒಂದು ಪ್ರಜಾರಾಜ್ಯವನ್ನು ಸ್ಥಾಪಿಸಿಕೊಂಡಿದ್ದರು. ಈ ಹಳ್ಳಿಗಳಿಗೆ ಪೊಲೀಸರು ಪ್ರವೇಶಿಸುವಂತಿರಲಿಲ್ಲ. ಇಲ್ಲಿಯ ಜನ ತಮ್ಮದೇ ಆದ ರೀತಿಯಲ್ಲಿ ಆಡಳಿತವನ್ನು ನಡೆಸಿಕೊಳ್ಳುತ್ತಿದ್ದರು. ಇದಕ್ಕೆ ಸ್ಫೂರ್ತಿ ಎಂದರೆ ನಿಟ್ಟೂರಿನ ಶ್ರೀ ಭೂದೇಶ್ವರ ಸ್ವಾಮಿ ಮಠದಲ್ಲಿ ಒಂದು ಸಭೆಯನ್ನು ಕೆಲವು ಪ್ರಮುಖರು ಏರ್ಪಾಡು ಮಾಡಿದ್ದರು. ಯಶೋಧರಮ್ಮ ದಾಸಪ್ಪನವರು ಈ ಸಭೆಯಲ್ಲಿ ಭಾಗವಹಿಸಿ ಅಲ್ಲಿಯ ಜನತೆಗೆ ರಾಷ್ಟ್ರೀಯತೆಯ ಬೀಜ ಬಿತ್ತಿದ್ದರು. ಸೊಪ್ಪಿನಹಳ್ಳಿ ಕುಳ್ಳೇಗೌಡರು ಈ ಎಲ್ಲಾ ಹಳ್ಳಿಗಳ ಮುಖಂಡರಾಗಿದ್ದರು. ಈ ಪ್ರಜಾರಾಜ್ಯಕ್ಕೆ ಸೇರಿದ್ದ ಹಳ್ಳಿಯ ಜನತೆ ಬ್ರಿಟಿಷರನ್ನು ನಿದ್ದೆಗೆಡಿಸಿದ್ದರು. ಜಿಲ್ಲೆಯಲ್ಲಿ ಯಾವುದೇ ಚಳುವಳಿಗಳಿದ್ದರೂ ಅದರಲ್ಲಿ ಭಾಗವಹಿಸುತ್ತಿದ್ದರು. ಈಚಲು ಮರ ಕಡಿಯುವುದು, ಸಂತೆಗಳಲ್ಲಿ ಕರ ಕೊಡುವುದನ್ನು ನಿಲ್ಲಿಸುವುದು, ಹೆಂಡದಂಗಡಿಗಳ ಧ್ವಂಸ, ಟೆಲಿಫೋನ್ ತಂತಿ ಕತ್ತರಿಸುವುದು, ರೈಲ್ವೆ ಹಳಿಗಳನ್ನು ಕತ್ತರಿಸುವುದು, ತಮ್ಮ ಮನೆ ಮಠ ಜಮೀನುಗಳಿಗೆ ಕಂದಾಯ ಕೊಡದಿರುವುದು ಇನ್ನೂ ಮುಂತಾದ ರೀತಿಗಳಲ್ಲಿ ಚಳವಳಿಗಳನ್ನು ನಡೆಸುತ್ತಿದ್ದರು.

ಹೀಗೆ ಆರಂಭಗೊಂಡ ಕ್ವಿಟ್ ಇಂಡಿಯಾ ಚಳವಳಿ ಹಾಸನ ಜಿಲ್ಲೆಯಾದ್ಯಂತ ಹೆಚ್ಚು ಪ್ರಚಾರವಾಗಿ ಚಳವಳಿಗಳು ನಡೆದು ಬ್ರಿಟಿಷರ ಗಮವನ್ನು ಸೆಳೆದಿದ್ದು, ಮುಂದೆ ಬ್ರಿಟಿಷರು ಈ ಚಳವಳಿಯನ್ನು ದಮನ ಮಾಡಲು ಕ್ರಾಂತಿಕಾರಿ ಹಳ್ಳಿಗಳೆಂದು ಗುರುತಿಸಿಕೊಂಡಿದ್ದ ಹಳ್ಳಿಗಳಿಗೆ ಪೊಲೀಸರ ಗಸ್ತು ಕಳುಹಿಸುತ್ತಿದ್ದರು. ಸತ್ಯಾಗ್ರಹಿಗಳ ದನಕರುಗಳು, ಆಹಾರ ಧಾನ್ಯ, ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದರು. ಹಾರನಹಳ್ಳಿ ರಾಮಸ್ವಾಮಿಯವರು ಈ ಕಾಲದಲ್ಲಿ ಜಿಲ್ಲೆಯಾದ್ಯಂತ ಕ್ರಾಂತಿಕಾರಿ ಚಟುವಟಿಕೆಗಳು ನಡೆಯುವಂತೆ ನೋಡಿಕೊಳ್ಳುತ್ತಿದ್ದರುಹೀಗೆ ೧೯೪೨ ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಯಾವುದೇ ಪ್ರದೇಶಗಳಿಗೆ ಕಡಿಮೆ ಇಲ್ಲದಂತೆ ಹಾಸನ ಜಿಲ್ಲೆಯ ನಗರಗಳಾದ ಬೇಲೂರು, ಹಳೇಬೀಡು, ಹಾಸನ, ಹೊಳೆನರಸೀಪುರ, ಆಲೂರು, ಸಕಲೇಶಪುರ ಹೀಗೆ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಚಳವಳಿಯನ್ನು ನಡೆಸಿದರು. ಈ ವೇಳೆಯಲ್ಲಿ ತಾಲ್ಲೂಕಿನ ಬಂಧಿಖಾನೆಗಳು ರಾಜಕೀಯ ಖೈದಿಗಳಿಂದ ತುಂಬಿರುತ್ತಿದ್ದವು. ಹೀಗೆ ಸಾಂಪ್ರಾದಾಯಿಕ ಮತ್ತು ವಸಾಹತು ನಗರ ಹಾಸನದಲ್ಲಿ ಬ್ರಿಟೀಷರ ನೀತಿಯ ವಿರುದ್ಧ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಈ ಚಳವಳಿಯಲ್ಲಿ ಸಾವಿರಾರು ಜಿಲ್ಲೆಯ ಚಳವಳಿಗಾರರು ಮನೆ ಮಠಗಳನ್ನು ಕಳೆದುಕೊಂಡು ಬೀದಿಗೆ ಬಂದರು.

೧೯೪೭ ಆಗಸ್ಟ್ ೧೫ ರಂದು ಭಾರತ ಸ್ವಾತಂತ್ರ್ಯಗೊಂಡರು ಕೂಡಾ ಮೈಸೂರು ಮಹಾರಾಜರ ಹಿಡಿತದಲ್ಲೇ ಇತ್ತು. ಇದನ್ನು ವಿರೋಧಿಸಿ ಮೈಸೂರಿನಾದ್ಯಂತ ತೀವ್ರವಾದ ಹೋರಾಟ ನಡೆಯಿತು. ಇದು ಕರ್ನಾಟಕ

ಇತಿಹಾಸದಲ್ಲಿ 'ಮೈಸೂರು ಚಲೋ' ಎಂದು ಪರಿಚಿತವಾಗಿದೆ. ಹಾಸನದಲ್ಲಿ ಇದು ತೀವ್ರಗೊಂಡಿತು. ಎಲ್ಲಾ ವರ್ಗದ ಜನರು ಭಾಗವಹಿಸಿದರು. ಜಿಲ್ಲೆಯಿಂದ ಒಂದು ಸಾವಿರಕ್ಕೂ ಹೆಚ್ಚು ಜನರು ಬಂಧಿತರಾದರು.

ರಾಮಸ್ವಾಮಿ ಎಂಬುವರು ಮೈಸೂರಿನಲ್ಲಿ ಪೋಲೀಸರ ಗುಂಡಿಗೆ ಬಲಿಯಾದರೆ ಹಾಸನದಲ್ಲಿ ಗೊರೂರು ರಾಮಸ್ವಾಮಿಯವರ ಮಗ ರಾಮಚಂದ್ರ ಮರಣ ಹೊಂದಿದರು. ಈ ಚಳವಳಿಯಲ್ಲಿ ಜಿಲ್ಲೆಯ ಹಿರಿಯ ಸ್ವಾತಂತ್ರ್ಯ ಹೊರಾಟಗಾರರಾದ ಹೆಚ್.ಎಂ. ಶಿವಣ್ಣನವರ ಪಾತ್ರ ಅತ್ಯಂತ ಹಿರಿದದ್ದು.

ಗೊರೂರು ಭಾಗದ ಎಲ್ಲಾ ವರ್ಗದ ಹೆಂಗಸರು, ಗಂಡಸರು, ಮಕ್ಕಳು, ಮುದುಕರು, ವಿದ್ಯಾರ್ಥಿಗಳು, ಕಾರ್ಮಿಕರು ಎಂಬ ಭೇದವಿಲ್ಲದೆ ಎಲ್ಲಾ ವರ್ಗದವರೂ ಚಳವಳಿಯಲ್ಲಿ ಭಾಗವಹಿಸಿದ್ದರು. ಮೈಸೂರು ಸಂಸ್ಥಾನ ದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯಲ್ಲಿ ಹಾಸನ ಜಿಲ್ಲೆಯ ಪಾತ್ರ ತೆರೆಯ ಮರೆಯಂತಿದ್ದರೂ ಬ್ರಿಟಿಷರು ಹೆಚ್ಚು ತಮ್ಮ ಗಮನವನ್ನು ಹಾಸನ ಜಿಲ್ಲೆಗೆ ಕೊಡುತ್ತಿದ್ದುದನ್ನು ನೋಡಿದರೆ ಜಿಲ್ಲೆಯಲ್ಲಿ ಚಳವಳಿ ನಡೆದಿರುವ ರೀತಿ, ಅದನ್ನು ಹತೋಟಿಗೆ ತರಲು ಅವರು ಪಟ್ಟ ಕಷ್ಟ ಚಳವಳಿಯಿಂದುಂಟಾಗಿದ್ದ ನಷ್ಟ ಇತ್ಯಾದಿಗಳ ಭಯ ಅವರಿಗುಂಟಾಯಿತು. ಜಿಲ್ಲೆಯ ನೂರಾರು ಜನರ ತ್ಯಾಗ ಬಲಿದಾನಗಳು ಮೈಸೂರು ಸಂಸ್ಥಾನದ ಇತರ ಯಾವುದೇ ಭಾಗಗಳಿಗೆ ಕಡಿಮೆ ಇಲ್ಲ ಎಂಬುವುದು ಸ್ಪಷ್ಟವಾಗಿ ತಿಳಿಯುತ್ತದೆ.

## ಗೊರೂರು ಭಾಗದ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು:–

ಭಾರತದ ರಾಷ್ಟ್ರೀಯ ಹೋರಾಟದ ಚರಿತ್ರೆ ಒಂದು ರೋಮಾಂಚನಾಕಾರಿ ಘಟನೆಯಾಗಿದ್ದು ಈ ಚಳವಳಿಯಲ್ಲಿ ದೇಶದುದ್ದಗಲಕ್ಕೂ ದೇಶಪ್ರೆಮಿಗಳು ಕ್ರಾಂತಿಯ ದೀವಿಟಿಗೆ ಹಿಡಿದು ಬ್ರಿಟಿಷ್ ದುರಾಡಳಿತದ ಕರಿನೆರಳನ್ನು ಹೊಡೆದೋಡಿಸಿ ಸ್ವಾತಂತ್ರ್ಯದ ಬೆಳಕನ್ನು ನೀಡುವಲ್ಲಿ ಸಹಸ್ರಾರು ದೇಶಪ್ರೇಮಿಗಳು ತ್ಯಾಗ–ಬಲಿದಾನ ನೀಡಿದ್ದಾರೆ. ಮೈಸೂರು ಸಂಸ್ಥಾನದ ಭಾಗವಾಗಿದ್ದ ಹಾಸನ ಜಿಲ್ಲೆಯ ಆನೇಕ ಮಹನೀಯರು ರಾಷ್ಟ್ರೀಯ ಹೋರಾಟದಲ್ಲಿ ತಮ್ಮ ಅಮೂಲ್ಯವಾದ ಕೊಡುಗೆಗಳನ್ನು ನೀಡಿದ್ದು ಅವುಗಳನ್ನು ಸ್ಮರಿಸುವುದು ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ. ಈ ಲೇಖನದ ಮೂಲಕ ಅಂತಹ ಮಹನೀಯರನ್ನು ಸ್ಮರಿಸಿಕೊಳ್ಳುವ ಪ್ರಯತ್ನ ಇದಾಗಿದೆ.



## ಸ್ವಾತಂತ್ರ್ಯ ಹೋರಾಟಗಾರರಾಗಿ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್

ಭಾರತದ ರಾಷ್ಟ್ರೀಯ ಚಳವಳಿಯಲ್ಲಿ ಮೈಸೂರು ಸಂಸ್ಥಾನದ ಪಾತ್ರ ಅತ್ಯಂತ ಪ್ರಮುಖವಾಗಿದ್ದು ೧೯೨೪ ರ ಬೆಳಗಾಂ ಕಾಂಗ್ರೆಸ್ ಅಧಿವೇಶನದ ಮೂಲಕ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿ ಅತ್ಯಂತ ತೀವ್ರ ಸ್ವರೂಪವನ್ನು ಪಡೆದುಕೊಂಡಿತು. ಹೀಗೆ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಹಾಸನ ಜಿಲ್ಲೆಯ ಪಾತ್ರ ಅತ್ಯಂತ ಹಿರಿದಾದದ್ದು. ಅಸಂಖ್ಯಾತ ಜಿಲ್ಲೆಯ ನಾಯಕರು ಬ್ರಿಟಿಷರ ಆಳ್ವಿಕೆಯ ವಿರುದ್ಧ ಬಂಡಾಯದ ಕಹಳೆ ಊದಿದರು. ಅಂತಹ ಅಪ್ರತೀಮ ದೇಶಪ್ರೇಮಿಗಳಲ್ಲಿ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಅತ್ಯಂತ ಪ್ರಮುಖರು.

ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಜುಲೈ ೪, ೧೯೦೪ರಲ್ಲಿ ಹಾಸನ ತಾಲ್ಲೂಕಿನ ಗೊರೂರು ಗ್ರಾಮದ ಶ್ರೀನಿವಾಸ ಅಯ್ಯಂಗಾರ್ ಮತ್ತು ಲಕ್ಷ್ಮಮ್ಮನವರ ಸುಪುತ್ರರಾಗಿ ಜನಿಸಿದರು. ಇವರದು ಸಂಪ್ರದಾಯ ಬ್ರಾಹ್ಮಣ ಕುಟುಂಬ. ಗೊರೂರು ಗ್ರಾಮ ಹೇಮಾವತಿ ನದಿ ದಂಡೆಯ ಮೇಲಿದ್ದ ಮಲೆನಾಡಿನ ಸೆರಗಿನಂತಿದೆ.ಇವರ ತಂದೆ ಆ ಭಾಗದಲ್ಲಿ ಸಂಸ್ಕೃತದ ಘನ ಪಂಡಿತರಾಗಿದ್ದು, ಪ್ರತಿದಿನ ಸಂಜೆ ಇವರು ಮನೆಯಲ್ಲಿ ರಾಮಾಯಣ, ಮಹಾಭಾರತದ ಕತೆಯನ್ನು ತಮ್ಮ ತಾಯಿಯವರಿಂದ ತಂದೆಯ ಪ್ರವಚನದಿಂದ ಪ್ರೇರಣೆಗೊಂಡರು. ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಸ್ವಾತಂತ್ರ್ಯ ಹೋರಾಟದಿಂದ ಸ್ಫೂರ್ತಿಗೊಂಡು ಚಳವಳಿಗೆ ಧುಮುಕಿದರು.

೧೯೨೦ ರಲ್ಲಿ ರಾಮಸ್ವಾಮಿಯವರು ಹಾಸನ ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಬಾಲಗಂಗಾಧರ ತಿಲಕರು ಮುಂತಾದ ವಿಚಾರ ತಿಳಿದು ಎಲ್ಲಾ ವಿದ್ಯಾರ್ಥಿಗಳೊಂದಿಗೆ ಸ್ವಯಂ ಪ್ರೇರಿತರಾಗಿ ಶಾಲಾ ಕೊಠಡಿಯಿಂದ ಹೊರಬಂದು ಮಹಾತ್ಮಗಾಂಧಿ ಹಾಗೂ ತಿಲಕರ ಭಾವಚಿತ್ರ ಹಿಡಿದು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಬಂದರು. ದಾರಿ ಮಧ್ಯೆ ಸಿಕ್ಕ ವಿದೇಶಿ ವಸ್ತುಗಳ ಮಾರಾಟ ಅಂಗಡಿಗಳಿಗೆ ಮುತ್ತಿಗೆ ಹಾಕಿ ವಿದೇಶಿ ವಸ್ತುಗಳನ್ನು ಸಂಗ್ರಹಿಸಿ ಬೆಂಕಿ ಹಾಕಿ ಸುಟ್ಟುಹಾಕಿದರು. ಇದೇ ಸಮಯದಲ್ಲಿ ತಿಲಕರ ಸ್ವರಾಜ್ಯ ನಿಧಿಗೆ ರೂ. ೧೦೦ ಗಳನ್ನು ಸಂಗ್ರಹಿಸಿದರು. ಮೆರವಣಿಗೆ ನಗರದ ಜೂಬ್ಲಿ ಮೈದಾನದಲ್ಲಿ ನಡೆದ ಬಹಿರಂಗ ಸಭೆಯೊಂದಿಗೆ

ಅಂತ್ಯವಾಯಿತು. ಈ ಮೆರವಣಿಗೆಯಲ್ಲಿ ರಾಮಸ್ವಾಮಿಯವರು ವಿದ್ಯಾರ್ಥಿ ನಾಯಕರಾಗಿ ಹೊರಹೊಮ್ಮಿದರು. ಸಂಗ್ರಹವಾದ ೧೦೦ ರೂ. ತಿಲಕರ ನಿಧಿಯಲ್ಲಿ ಖಾದಿ ವಸ್ತ್ರವನ್ನು ಕೊಂಡು ಗಾಂಧಿ ಟೋಪಿಗಳನ್ನು ಹೊಲಿಸಿ ವಿದ್ಯಾರ್ಥಿಗಳಿಗೆ ಹಂಚಲಾಯಿತು.

ಮಹಾತ್ಮ ಗಾಂಧೀಜಿಯವರು ೧೯೧೯ ಏಪ್ರಿಲ್ ೧೩ ರಂದು ನಡೆದ ಜಲಿಯನ್ ವಾಲಾಬಾಗ್ ದುರಂತವನ್ನು ವಿರೋಧಿಸುತ್ತಾ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಚಳವಳಿಗೆ ಪಾದಾರ್ಪಣೆ ಮಾಡಿದರು. ಗಾಂಧಿ ಮತ್ತು ಇತರ ನಾಯಕರ ಹೋರಾಟದಿಂದ ರಾಮಸ್ವಾಮಿಯವರು ಸ್ಫೂರ್ತಿ ಹೊಂದಿದರು. ಪ್ರೌಢಶಾಲೆಯ ಹಂತದಲ್ಲಿ ಇಂಗ್ಲಿಷ್ ಶಿಕ್ಷಣ ಪಡೆಯುತ್ತಿದ್ದ ರಾಮಸ್ವಾಮಿಯವರು ಗಾಂಧೀಜಿಯವರು ಇಂಗ್ಲಿಷ್ ಶಿಕ್ಷಣ ಪದ್ಧತಿಯನ್ನು ಟೀಕಿಸಿ ವಿರೋಧಿಸಿದ್ದರಿಂದ ಇಂಗ್ಲಿಷ್ ಶಿಕ್ಷಣಕ್ಕೆ ತಿಲಾಂಜಲಿ ಇಟ್ಟು ಗಾಂಧೀಜಿಯವರು ಸ್ಥಾಪಿಸಿದ್ದ ಗುಜರಾತಿನ ಸಬರಮತಿ ಆಶ್ರಮ ಸೇರಿಕೊಂಡರು. ಇದೇ ವೇಳೆ ೧೯೨೦ ರಿಂದ ೨೨ ರವರೆಗೆ ಗಾಂಧೀಜಿಯವರು ಅಸಹಕಾರ ಚಳವಳಿಗೆ ಕರೆ ಕೊಟ್ಟಾಗ ಧಾರವಾಡದಲ್ಲಿ ಅಹಕಾರ ಚಳವಳಿ ಪ್ರಬಲವಾಗಿ ನಡೆಯುತ್ತಿತ್ತು. ಈ ವೇಳೆ ಯುವದೇಶ ಪ್ರೇಮಿಯಾಗಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಅನೇಕ ಬಹಿರಂಗ ಸಭೆಗಳಲ್ಲಿ ಅತ್ಯಂತ ತೀಕ್ಷ್ಣವಾಗಿ ಬ್ರಿಟಿಷರ ನೀತಿಯನ್ನು ಟೀಕಿಸಿ ಬ್ರಿಟಿಷ್ ಕೆಂಗಣ್ಣಿಗೆ ಗುರಿಯಾದರು. ಇವರ ಸ್ನೇಹಿತರು ಇವರನ್ನು ಪೊಲೀಸರ ಕಣ್ಣುತಪ್ಪಿಸಿ ಬಾಂಬೆಗೆ ಕಳುಹಿಸಿಕೊಟ್ಟರು.

ಅಲ್ಲಿಂದ ಮುಂದೆ ಅಹಮದಾಬಾದ್ ಮೂಲಕ ಸಬರಮತಿ ಆಶ್ರಮ ಸೇರಿದರು. ಈ ಮೂಲಕ ಅನೇಕ ಅಗ್ರಗಣ್ಯ ನಾಯಕರ ಸಂಪರ್ಕ ಸಿಕ್ಕಿ ಮೈಸೂರು ಪ್ರಾಂತ್ಯದ ಕಾಂಗ್ರೆಸ್ಸಿನಲ್ಲಿ ಹಾಸನ ಜಿಲ್ಲೆಯ ಪ್ರಸಿದ್ಧ ನಾಯಕರಾಗಿ ಹೊರಹೊಮ್ಮಿದರು. ಗಾಂಧೀಯವರ ರಚನಾತ್ಮಕ ಕಾರ್ಯಗಳಿಂದ ಸ್ಫೂರ್ತಿಗೊಂಡು ರಾಮಸ್ವಾಮಿಯವರು ಹಾಸನ ಜಿಲ್ಲೆಯಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಂಘಟಿಸಿದರು.

೧೯೩೦ರಲ್ಲಿ ರಾಮಸ್ವಾಮಿ ಅಯ್ಯಂಗಾರ್‌ರವರು ಕೆಂಗೇರಿಯಲ್ಲಿ ಗುರುಕುಲಾಶ್ರಮವನ್ನು ಆರಂಭಿಸಿದರು. ಇಲ್ಲಿ ಸಬರಮತಿ ಆಶ್ರಮದಲ್ಲಿ ಪಡೆದ



ಅನುಭವದ ಆಧಾರದ ಮೇಲೆ ಶೂದ್ರರಿಗೆ ಶಿಕ್ಷಣ, ಗುಡಿ ಕೈಗಾರಿಕೆಗಳ ಪ್ರಗತಿ, ಸಾಮಾಜಿಕ ಸುಧಾರಣೆಗಳು, ಹರಿಜನೋದ್ಧಾರ, ಖಾದಿ ಪ್ರಚಾರ, ಹರಿಜನರಿಗೆ ದೇವಾಲಯ ಪ್ರವೇಶ ಇತ್ಯಾದಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡರು. ನಂತರ ಬೆಂಗಳೂರಿನ ಖಾದಿ ವಸ್ತ್ರ ಭಂಡಾರ ಹಾಗೂ ಅಖಿಲ ಭಾರತ ಚರಕ ಸಂಘದ ವ್ಯವಸ್ಥಾಪಕರಾದರು. ಈ ಹುದ್ದೆಯು ಅವರಿಗೆ ಅನೇಕ ಅಗ್ರಗಣ್ಯ ನಾಯಕರ ಪರಿಚಯಕ್ಕೆ ದಾರಿಮಾಡಿಕೊಟ್ಟಿತು.

೧೯೩೩ ರಲ್ಲಿ ಗೊರೂರು ರಾಮಸ್ವಾಮಿಯವರು ತಮ್ಮ ಸ್ವಂತ ಊರು ಗೊರೂರಿಗೆ ಬಂದು ಸಂಪತ್ತಯ್ಯಂಗಾರರ ಸಹಾಯದೊಂದಿಗೆ ಮೈಸೂರು ಗ್ರಾಮ ಸೇವಾ ಸಂಘವನ್ನು ಆರಂಭಿಸಿದರು. ನಂತರ ಜಿಲ್ಲೆಯಾದ್ಯಂತ ಭೇಟಿ ನೀಡಿ ಬಹಿರಂಗ ಸಭೆಗಳಲ್ಲಿ ಮೈಸೂರು ಗ್ರಾಮ ಸೇವಾ ಸಂಘದ ಬಗ್ಗೆ ಬ್ರಿಟಿಷರ ಆಳ್ವಿಕೆಯ ಪರಿಣಾಮ, ರಾಷ್ಟ್ರೀಯತೆ ಹಾಗೂ ರಚನಾತ್ಮಕ ಕಾರ್ಯಗಳ ಬಗ್ಗೆ ಭಾಷಣ ಮಾಡಿದರು. ಇವರ ಭಾಷಣಗಳು ಜಿಲ್ಲೆಯಲ್ಲಿ ಬ್ರಿಟಿಷ್ ವಿರೋಧಿ ಅಲೆಯನ್ನು ಸೃಷ್ಟಿಸಿತು.

ಈ ವೇಳೆಯಲ್ಲಿ ಹಾಸನ ಜಿಲ್ಲೆಯಲ್ಲಿ ಗೊರೂರು ಗ್ರಾಮ ರಾಷ್ಟ್ರೀಯ ಚಳುವಳಿಯ ಕೇಂದ್ರವಾಗಿತ್ತು. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಂಪತ್ತಯ್ಯಂಗಾರ್, ಸೆಲ್ವಪಿಳ್ಳೆ ಅಯ್ಯಂಗಾರ್ ಮತ್ತು ಗರುಡ ಅಯ್ಯಂಗಾರ್‌ರವರ ಹೋರಾಟದ ಪ್ರತಿಫಲವಾಗಿ ಗೊರೂರು ರಾಷ್ಟ್ರೀಯತೆಯ ಕೇಂದ್ರವಾಗಿತ್ತು. ಈ ನಾಯಕರು ಈ ಭಾಗದ ಧಾರ್ಮಿಕ ಹಾಗೂ ಸಾರ್ವಜನಿಕ ಚಟುವಟಿಕೆಗಳ ಕೇಂದ್ರವಾಗಿತ್ತು.ಮಹಾತ್ಮಗಾಂಧಿಯವರು ದಕ್ಷಿಣ ಭಾರತದ ಪ್ರವಾಸ ಕೈಗೊಂಡಾಗ ಗೊರೂರು ರಾಮಸ್ವಾಮಿಯವರು ಗಾಂಧೀಜಿಯವರ ಜೊತೆ ಪ್ರಯಾಣಿಸಿದರು. ಇದಾದ ನಂತರ ಗೊರೂರು ರಾಮಸ್ವಾಮಿಯವರು ಜಿಲ್ಲೆಯ ಪ್ರಸಿದ್ಧ ನಾಯಕರಾದರು.

ಇವರ ಪ್ರಸಿದ್ಧತೆಯನ್ನು ಗಮನಿಸಿದ ಮೈಸೂರು ಸರ್ಕಾರ ಇವರನ್ನು ಗುಡಿಕೈಗಾರಿಕೆಗಳ ಅಭಿವೃದ್ಧಿ ಸಮಿತಿಗೆ ಜಿಲ್ಲಾ ಬೋರ್ಡ್ ಹಾಗೂ ಸ್ಥಳೀಯ ಶಿಕ್ಷಣ ಬೋರ್ಡ್‌ಗೆ ನೇಮಕ ಮಾಡಿ ರಾಷ್ಟ್ರೀಯ ಚಳವಳಿಯಿಂದ ಇವರನ್ನು ದೂರವಿಡುವ ಪ್ರಯತ್ನ ನಡೆಸಿತು. ಆಗ ಇವರು ಗಾಂಧೀಜಿಯವರ

ಒಪ್ಪಿಗೆಯೊಂದಿಗೆ ಈ ಕಮಿಟಿಗಳಲ್ಲಿ ಕಾರ್ಯನಿರ್ವಹಿಸಿ ಮೈಸೂರಿನ ಜನರ ಹಿತಕ್ಕಾಗಿ ದುಡಿದರು.

೧೯೩೯ರಲ್ಲಿ ಮೈಸೂರು ಕಾಂಗ್ರೆಸ್ ಕಮಿಟಿ ಇವರನ್ನು ವೈಯಕ್ತಿಕ ಸತ್ಯಾಗ್ರಹಕ್ಕೆ ಆಯ್ಕೆ ಮಾಡಿತು. ಅದೇ ವರ್ಷ ಜಿಲ್ಲೆಯ ಅರಸೀಕೆರೆ ನಗರದಲ್ಲಿ ಮೈಸೂರು ಕಾಂಗ್ರೆಸ್ ಸಮಿತಿಯ ಸಭೆ ನಡೆಯಿತು. ಈ ಸಭೆಗೆ ಮೈಸೂರು ಸಂಸ್ಥಾನದ ಮಹಾನ್ ನಾಯಕರುಗಳೆಲ್ಲಾ ಭಾಗವಹಿಸಿದರು. ಈ ಸಭೆಯಲ್ಲಿ ೧೯೩೮ರ ವಿಧುರಾಶ್ವತ್ಥ ದುರಂತದ ಬಗ್ಗೆ ಸುದೀರ್ಘ ಚರ್ಚೆ ನಡೆಸಿದರು. ಅರಸೀಕೆರೆಯ ಡಿ.ವಿ. ರಾಮಸ್ವಾಮಿಯವರನ್ನು ಏಳನೇ ಮೈಸೂರಿನ ಕಾಂಗ್ರೆಸ್ಸಿನ ಡಿಕ್ಟೇಟರ್ ಆಗಿ ನೇಮಕ ಮಾಡಲಾಯಿತು. ಈ ಸಭೆಯಲ್ಲಿ ಗೊರೂರು ರಾಮಸ್ವಾಮಿಯವರು ಚಳವಳಿಯ ತೀವ್ರತೆಯನ್ನು ಹೆಚ್ಚಿಸಲು ಬೇಕಾದ ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿದರು ಹಾಗೂ ಈ ಸಭೆಯಲ್ಲಿ ಮೈಸೂರು ಕಾಂಗ್ರೆಸ್‌ನ ಮುಂದಿನ ಹೋರಾಟದ ಮಾರ್ಗಸೂಚಿ ಕಮಿಟಿಯನ್ನು ರಚಿಸಲಾಯಿತು.ಅದಾದ ನಂತರ ಮೈಸೂರು ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ೧೯೪೧ ರ ವಾರ್ಧಾ ಅಖಿಲ ಭಾರತ ಕಾಂಗ್ರೆಸ್‌ನ ಸಭೆಯಲ್ಲಿ ಭಾಗವಹಿಸಿ ರಾಷ್ಟ್ರ ನಾಯಕರ ಸಂದೇಶ ಹೊತ್ತು ವಾಪಸ್ಸಾದರು.

**ಕ್ವಿಟ್ ಇಂಡಿಯಾ ಚಳವಳಿಯಲ್ಲಿ ರಾಮಸ್ವಾಮಿ**

ಮಹಾತ್ಮರು ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ನೀಡಿದ ಮೇಲೆ ಹಾಸನ ಜಿಲ್ಲೆ ತನ್ನದೇ ಆದಂತಹ ಪರಿಣಾಮಕಾರಿಯಾದ ಹೋರಾಟವನ್ನು ಮುಂದುವರೆಸಿತು. ಈ ಚಳುವಳಿಗೆ ಆಳವಾದ ಹಾಗೂ ಅಗಲವಾದ ಹೋರಾಟದ ನೆಲೆಗಟ್ಟನ್ನು ರೂಪಿಸಿದವರು ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು. ೧೯೪೨ ಆಗಸ್ಟ್ ೯ ರಂದು ಗಾಂಧೀಜಿಯ ಬಂಧನದ ಸುದ್ದಿ ತಿಳಿದ ಗೊರೂರು ಆಗಸ್ಟ್ ೧೦, ೧೯೪೨ ರಂದು ಮೈಸೂರಿನ ದಿವಾನರಿಗೆ ಜಿಲ್ಲಾ ಬೋರ್ಡು ಕಮಿಟಿ, ಮೈಸೂರಿನ ಗುಡಿ ಕೈಗಾರಿಕಾ ಸಮಿತಿ, ಜಿಲ್ಲಾ ವಯಸ್ಕ ಶಿಕ್ಷಣ ಸಮಿತಿಗಳಿಗೆ ರಾಜೀನಾಮೆ ಪತ್ರವನ್ನು ನೀಡಿದರು. ಜಿಲ್ಲೆಯಾದ್ಯಂತ ಸಂಚಾರ ಮಾಡಿ ರೈತರು, ಕಾರ್ಮಿಕರು, ವಿದ್ಯಾರ್ಥಿಗಳನ್ನು ಕ್ವಿಟ್ ಇಂಡಿಯಾ ಚಳವಳಿಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದರು.ಇವರ ಮಾರ್ಗದರ್ಶನದಲ್ಲಿ ಸಂತೆ ಸುಂಕ ನಿರಾಕರಣೆ ಚಳವಳಿ, ಹೆಂಡದ ಪಿಪಾಯಿಗಳ ಧ್ವಂಸ, ಈಚಲ ಮರ ಕಡಿಯುವುದು, ಕರ ನಿರಾಕರಣೆ ಮುಂತಾದ ಚಳವಳಿಗಳು ಜಿಲ್ಲೆಯಾದ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಆರಂಭಗೊಂಡವು. ಗೊರೂರು ಸಂತೆಯಲ್ಲಿ ಬಹುದೊಡ್ಡ ಹೋರಾಟವೇ ನಡೆಯಿತು.

ಆಗಸ್ಟ್ ೨೫, ೧೯೪೨ ರಂದು ವಿದ್ಯಾರ್ಥಿಗಳೊಂದಿಗೆ ಹಾಸನ ಜಿಲ್ಲೆಯ ಇಂಪ್ಲಿಮೆಂಟ್ ಕಾರ್ಖಾನೆಗೆ ಮುತ್ತಿಗೆ ಹಾಕಿದರು. ಆಗ ಕಾರ್ಮಿಕರೆಲ್ಲಾ ಗೊರೂರು ರಾಮಸ್ವಾಮಿಯವರಿಗೆ ಬೆಂಬಲ ನೀಡಿದರು. ಆಗಸ್ಟ್ ೨೫ ರಂದು ಗೊರೂರು ರಾಮಸ್ವಾಮಿಯವರನ್ನು ಇಬ್ಬರು ಸಹಪಾಠಿಗಳೊಂದಿಗೆ ಬಂಧಿಸಿ ೧೫ ತಿಂಗಳ ಕಾರಾಗೃಹ ಶಿಕ್ಷೆಗೆ ಗುರಿಪಡಿಸಲಾಯಿತು. ಹಾಸನ, ಶಿವಮೊಗ್ಗ, ಸಾಗರ ಹಾಗೂ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರು. ಈ ವೇಳೆ ಭಾರತೀಯ ಬ್ರಿಟಿಷ್ ಸೇನೆಯಲ್ಲಿ ಭಾರತೀಯ ಸೈನಿಕರ ಸ್ಥಿತಿ ಗತಿ ಶೋಷಣೆ ಇತ್ಯಾದಿಗಳನ್ನು ಮನವರಿಕೆ ಮಾಡಿಕೊಟ್ಟು ಬ್ರಿಟಿಷ್ ಸೈನ್ಯದಲ್ಲಿ ಭಾರತೀಯ ಸೈನಿಕರ ಶೋಷಣೆಯ ಬಗ್ಗೆ ಮೆರವಣಿಗೆ ಎಂಬ ಪುಸ್ತಕವನ್ನು ರಚಿಸಿದರು.

ಕಾರಾಗೃಹ ಶಿಕ್ಷೆಯನ್ನು ಮುಗಿಸಿ ವಾಪಸ್ಸು ಬಂದ ಮೇಲೆ ಗೊರೂರರು ತಮ್ಮ ಗುಡಿ ಕೈಗಾರಿಕಾ ಅಭಿವೃದ್ಧಿ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳು, ಸಾಮಾಜಿಕ ಸುಧಾರಣೆ ಇತ್ಯಾದಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

**ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಗೊರೂರರು**

ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಇವರ ಪಾತ್ರ ಅತ್ಯಂತ ಹಿರಿದಾದದ್ದು. ೧೯೪೭ ಜುಲೈ ೨೮ ರಂದು ಹಾಸನ ನಗರದಲ್ಲಿ ೩ನೇ ಯುವ ಕಾಂಗ್ರೆಸ್ ಸಮ್ಮೇಳನವನ್ನು ಆಯೋಜಿಸಿದ್ದರು. ಇವರು ಮೈಸೂರು ರಾಜ್ಯದ ಏಕೀಕರಣಕ್ಕಾಗಿ ಹೆಚ್.ಎಸ್. ದೊರೆಸ್ವಾಮಿ, ಆರ್.ಎಸ್. ಆರಾಧ್ಯ, ಹಾರನಹಳ್ಳಿ ರಾಮಸ್ವಾಮಿ, ಕೆ.ಎಂ. ರುದ್ರಪ್ಪ ಮುಂತಾದವರನ್ನು ಕೇಂದ್ರಕ್ಕೆ ಅಯೋಗವನ್ನು ದೆಹಲಿಗೆ ಕೊಂಡೊಯ್ದರು. ಅಲ್ಲಿ ಸರ್ದಾರ್ ವಲ್ಲಭಬಾಯಿ ಪಟೇಲರು Go And Remove Your Maharaja ಎಂದು ಸಲಹೆ ನೀಡಿದರು.

೧೯೪೭ ಆಗಸ್ಟ್ ೧೫ ರಂದು ಭಾರತ ಸ್ವಾತಂತ್ರ್ಯಗೊಂಡಿದ್ದರೂ ಮೈಸೂರು ಮಾತ್ರ ಮಹಾರಾಜರ ಆಳ್ವಿಕೆಯಲ್ಲಿದ್ದರಿಂದ ಅದನ್ನು ವಿರೋಧಿಸಿ ಮೈಸೂರು ಮಹಾಸಂಸ್ಥಾನದಾದ್ಯಂತ ಅರಮನೆ ಸತ್ಯಾಗ್ರಹ ಅಥವಾ ಮೈಸೂರು

ಚಲೋ ಚಳುವಳಿ ನಡೆಯಿತು. ಈ ಚಳವಳಿಯಲ್ಲಿ ಗೊರೂರರು ಅತ್ಯಂತ ಪ್ರಮುಖ ಪಾತ್ರ ನಿರ್ವಹಿಸಿದರು. ೧೯೪೭ ಸೆಪ್ಟೆಂಬರ್‌ನಲ್ಲಿ ಗೊರೂರವರನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಯಿತು. ಇದೇ ಸಮಯದಲ್ಲಿ ಇವರ ಮಗ ರಾಮಚಂದ್ರ ತುಮಕೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದು ಅರಮನೆ ಸತ್ಯಾಗ್ರಹದಲ್ಲಿ ಭಾಗವಹಿಸಿ ಮೆರವಣಿಗೆ ಬರುವಾಗ ಪೊಲೀಸ್ ಗುಂಡಿಗೆ ಬಲಿಯಾದರು. ತನ್ನ ಮಗ ಮೃತರಾದಾಗ ಗೊರೂರು ಸೆರೆಮನೆಯಲ್ಲಿದ್ದರು. ಸುದ್ದಿ ತಿಳಿದ ಪೊಲೀಸರು ಇವರನ್ನು ಪೊಲೀಸರೊಂದಿಗೆ ಗೊರೂರಿಗೆ ಕಳುಹಿಸಿಕೊಟ್ಟರು. ಐನೂರಕ್ಕೂ ಹೆಚ್ಚು ಜಿಲ್ಲೆಯ ಜನ ಗೊರೂರಿಗೆ ಧಾವಿಸಿ ಗೊರೂರರ ಪುತ್ರನ ಶವದ ಮೆರವಣಿಗೆ ನಡೆಸಿ ಅಂತ್ಯಕ್ರಿಯೆ ನೆರವೇರಿಸಿದರು. ಅವರ ಚಿತಾ ಭಸ್ಮವನ್ನು ಹೇಮಾವತಿ ಹಾಗೂ ಯಗಚಿ ನದಿಯ ಸಂಗಮದಲ್ಲಿ ಐನೂರು ಜನರು ಚಿತಾಭಸ್ಮವನ್ನು ವಿಸರ್ಜಿಸಿದರು. ತದನಂತರ ಗೊರೂರು ರಾಮಸ್ವಾಮಿಗಳು ತಮ್ಮ ಪುತ್ರನ ಅಗಲಿಕೆಯ ನೋವಿನಲ್ಲೂ ಜನರನ್ನು ಕುರಿತು ಇಂತಹ ಸಾವಿಗೆ ಶೋಕಿಸಬಾರದು. ಅವನು ದೇಶದ ವಿಮೋಚನೆಗಾಗಿ ಜೀವಾರ್ಪಣೆ ಮಾಡಿದ ಎಂದು ನುಡಿದಿರುವುದು ಅವರ ದೇಶಪ್ರೇಮಕ್ಕೆ ತ್ಯಾಗಕ್ಕೆ ಸಾಕ್ಷಿಯಾಗಿದೆ. ಇವರ ಮಗನ ಮರಣದ ಸುದ್ದಿ ತಿಳಿದ ಮಹಾತ್ಮ ಗಾಂಧೀಜಿಯವರು ಗೊರೂರಿಗೆ ಪತ್ರ ಬರೆದು, ನಿಮ್ಮ ಮಗ ದೇಶಕ್ಕಾಗಿ ಹುತಾತ್ಮನಾಗಿದ್ದಾನೆ. ನಿಮ್ಮ ಮಗನ ತ್ಯಾಗ ರಾಷ್ಟ್ರೀಯ ಚಳವಳಿಯ ಇತಿಹಾಸದಲ್ಲಿ ದೀರ್ಘ ಕಾಲದವರೆಗೆ ಸ್ಮರಣೀಯವಾಗಿರುತ್ತದೆ ಎಂದು ಸಂತಾಪ ಸೂಚಿಸಿದರು.

ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದ ಮೇಲೆ ರಾಮಸ್ವಾಮಿಯವರನ್ನು ಮೈಸೂರು, ವಿಧಾನ ಪರಿಷತ್ ಸದಸ್ಯರಾಗಿ ನಾಮಕರಣ ಮಾಡಿತು. ಅಧಿವೇಶನದ ಮೊದಲ ದಿನವೇ ಮಾತನಾಡುತ್ತಾ ಸರ್ಕಾರದ ಎಲ್ಲಾ ಕಾರ್ಯಚಟುವಟಿಕೆಗಳು ಕನ್ನಡದಲ್ಲೇ ನಡೆಯಬೇಕೆಂದು ಒತ್ತಾಯ ಮಾಡಿದರು. ಬಳ್ಳಾರಿ ಮೈಸೂರು ರಾಜ್ಯಕ್ಕೆ ಸೇರಬೇಕೆಂದು ಒತ್ತಾಯಿಸಿದರು. ೧೯೫೫ ರ ಪರಿಷತ್ ಅಧಿವೇಶನದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸುದೀರ್ಘ ಭಾಷಣ ಮಾಡಿದರು. ಇವರ ಸೇವೆಯನ್ನು ಗುರುತಿಸಿ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರನ್ನಾಗಿ ನೇಮಿಸಿತು. ೧೨ ವರ್ಷಗಳ ಸುದೀರ್ಘ ಕಾಲ ವಿಧಾನ ಪರಿಷತ್ ಸದಸ್ಯರಾಗಿ ರಾಜ್ಯದ ಪ್ರಗತಿಗಾಗಿ ಸೇವೆ ಸಲ್ಲಿಸಿದರು.



## ಬರಹಗಾರರಾಗಿ ಗೊರೂರು

ಬಾಲ್ಯದಿಂದಲೇ ಓದು ಹಾಗೂ ಬರಹದ ಹವ್ಯಾಸವನ್ನು ಹೊಂದಿದ್ದ ರಾಮಸ್ವಾಮಿ ಅಯ್ಯಂಗಾರ್‌ರವರು ಅನೇಕ ಕೃತಿಗಳನ್ನು ಪತ್ರಿಕಾ ಲೇಖನಗಳನ್ನು ಬರೆಯಲಾರಂಭಿಸಿದರು. ಪ್ರಪ್ರಥಮವಾಗಿ ಸಾಧ್ವಿ ಪತ್ರಿಕೆಯಲ್ಲಿ ಗ್ರಾಮೀಣ ಗುಡಿ ಕೈಗಾರಿಕೆಗಳ ಪ್ರಾಮುಖ್ಯತೆಯ ಬಗ್ಗೆ ಲೇಖನ ಬರೆದು ಪ್ರಖ್ಯಾತಿ ಪಡೆದರು.ಈ ಪತ್ರಿಕೆಯನ್ನು ಎಂ. ವೆಂಕಟಕೃಷ್ಣಯ್ಯನವರು ಸಂಪಾದಿಸುತ್ತಿದ್ದರು.ಕನ್ನಡ ಕುಲಪುರೋಹಿತ ಆಲೂರು ವೆಂಕಟರಾವ್‌ರು ಸಂಪಾದಿಸುತ್ತಿದ್ದ ಜಯಕರ್ನಾಟಕ ಪತ್ರಿಕೆಯಲ್ಲಿ ಮತ್ತೊಂದು ಲೇಖನ ಪ್ರಕಟಿಸಿದರು. ಈ ಲೇಖನದಲ್ಲಿ ಭಾರತ ಒಂದು ದೇಶವೇ? ಎಂಬ ಶಿರೋನಾಮದಡಿ ಬ್ರಿಟಿಷ್ ಆರ್ಥಿಕ ಶೋಷಣೆ ಸಿದ್ಧಾಂತ ಹಾಗೂ ಭಾರತದ ಅರ್ಥವ್ಯವಸ್ಥೆಯ ಅವನತಿಗೆ ಕಾರಣಗಳನ್ನು ಕುರಿತು ಲೇಖನ ಪ್ರಕಟಿಸಿದರು. ಹೀಗೆ ಅನೇಕ ಪತ್ರಿಕೆಗಳಲ್ಲಿ ಮಸ್ಲಿನ್ ಬಟ್ಟೆ, ಕರಕುಶಲ ಕಲೆ, ಗ್ರಾಮೀಣ ಕೈಗಾರಿಕೆ ಇತ್ಯಾದಿಗಳನ್ನು ಕುರಿತು ಲೇಖನಗಳನ್ನು ಪ್ರಕಟಿಸಿಸುತ್ತಿದ್ದರು.

ತದನಂತರ ಮದ್ರಾಸಿನ ಲೋಕಮಿತ್ರ ದಿನಪತ್ರಿಕೆಯ ಸಹ ಸಂಪಾದಕರಾಗಿ ಕರ್ತವ್ಯ ನಿರ್ವಹಿಸಿದರು. ತೆಲುಗು ದಿನಪತ್ರಿಕೆಯಿಂದ ಆಂದ್ರೆ ಆಂಡ್ ಭಾರತಿ ಪತ್ರಿಕೆಯಲ್ಲಿ ಶ್ರೀ ಅರವಿಂದರ ಹಾಗೂ ಗಾಂಧೀಜಿಯವರ ಬಗ್ಗೆ ಕನ್ನಡದಲ್ಲಿ ಭಾಷಾಂತರಿಸಿ ಲೇಖನಗಳನ್ನು ಬರೆಯತೊಡಗಿದರು.

ಕನ್ನಡ ಸಾರಸ್ವತ ಲೋಕದ ಹೆಮ್ಮೆಯ ಪುತ್ರರಾದ ಗೊರೂರರು ಭಾರತ ಸ್ವಾತಂತ್ರ್ಯ ನಮ್ಮೂರಿನ ರಸಿಕರು, ಹಳ್ಳಿಯ ಚಿತ್ರಗಳು, ಮೆರವಣಿಗೆ ಇತ್ಯಾದಿ ಕೃತಿಗಳಲ್ಲಿ ಹಳ್ಳಿಗಳ ಜನಜೀವನ–ದೇಶಪ್ರೇಮ, ಗ್ರಾಮೀಣ, ಆರ್ಥಿಕ ಪ್ರಗತಿ, ಶೂದ್ರರ ಬದುಕು ಇತ್ಯಾದಿಗಳನ್ನು ಚಿತ್ರಿಸಿದ್ದಾರೆ.ಇವರ ಕೃತಿಗಳಲ್ಲಿ ಜನರ ಪೂರ್ವಗ್ರಹಿಕೆಗಳು ಸಮಸ್ಯೆ ಹಾಗೂ ಪರಿಹಾರಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಗಾಂಧಿ ಕಸ್ತೂರಬಾ ಮುಂತಾದವರ ಜೀವನ ಚರಿತ್ರೆಗಳನ್ನು ಕನ್ನಡದಲ್ಲಿ ಪರಿಚಯಿಸಿದ್ದಾರೆ. ಇಂತಹ ಮಹಾನ್ ಲೇಖಕರನ್ನು ಅನೇಕ ಪ್ರಶಸ್ತಿಗಳು ಅರಸಿ ಬಂದಿವೆ. ೧೯೬೬ರಲ್ಲಿ ಮೈಸೂರು ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೭೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಡಿಲಿಟ್ ಪದವಿ, ೧೯೮೦ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಸಂದಿವೆ. ೧೯೮೨ರಲ್ಲಿ ಸಿರಸಿಯಲ್ಲಿ

ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ೧೯೯೧ ಸೆಪ್ಟೆಂಬರ್ ೨೮ ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.

ಮೈಸೂರು ಭಾಗದ ಅರಂಭಿಕ ಸುಶಿಕ್ಷಿತರಾಗಿದ್ದು, ಗೊರೂರು ಭಾರತದ ರಾಷ್ಟ್ರೀಯ ಹೋರಾಟದಲ್ಲಿ ಗೊರೂರು ಶ್ರಮದಿಂದ ಜಿಲ್ಲಾ ನಾಯಕರಾಗಿ ರಾಜ್ಯ ನಾಯಕರಾಗಿ ತಮ್ಮ ವಿಶಿಷ್ಟವಾದ ಚಟುವಟಿಕೆಗಳ ಮೂಲಕ ಹಾಸನ ಜಿಲ್ಲೆಯನ್ನು ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರಮಟ್ಟಕ್ಕೆ ಪರಿಚಯಿಸಿಕೊಟ್ಟ ಕೀರ್ತಿ ಇವರದಾಗಿದೆ. ಇವರೊಬ್ಬ ಅಪ್ರತಿಮ ದೇಶಪ್ರೇಮಿ, ಶ್ರೇಷ್ಠ ಬರಹಗಾರರಾಗಿ ಮಹಾತ್ಮ ಹಾಗೂ ಮೈಸೂರು ಸಂಸ್ಥಾನದ ಕೊಂಡಿಗಳಲ್ಲಿ ಒಬ್ಬರಾಗಿ ಅಪ್ರತಿಮ ಸೇವೆ ಸಲ್ಲಿಸಿದ್ದು ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿದ್ದಾರೆ.

### ಗೊರೂರಿನ ಸಾಹುಕಾರ್ ಸಂಪತ್ತಯ್ಯಂಗಾರ್

ಗೊರೂರು ರಾಮಸ್ವಾಮಿ ಅಯ್ಯಂಗಾರರ ಸಮಕಾಲೀನರಾದ ಜಿ.ಎಸ್. ಸಂಪತ್ತಯ್ಯಂಗಾರ್ ಗೊರೂರಿನಲ್ಲಿ ಸಾಹುಕಾರ್ ಸಂಪತ್ತಯ್ಯಂಗಾರ್ ಎಂದೇ ಚಿರಪರಿಚಿತರಾಗಿದ್ದರು. ಶ್ರೇಷ್ಠ ಖಗೋಳ ಶಾಸ್ತ್ರಜ್ಞರು, ವೇದ ಉಪನಿಷತ್, ರಾಮಾಯಣ, ಮಹಾಭಾರತ ಗ್ರಂಥಗಳನ್ನು ವಿಶೇಷ ಆಸಕ್ತಿಯಿಂದ ಅಧ್ಯಯನ ಮಾಡಿ ಆಳವಾದ ವಿದ್ವತ್ತನ್ನು ಸಂಪಾದಿಸಿಕೊಂಡು ಶ್ರೀರಾಮನ ಜನ್ಮಕುಂಡಲಿಯನ್ನು ಬರೆದಿದ್ದಾರೆ. ಇವರಿಗೆ ತಮ್ಮ ತಂದೆಯವರ ಮುಖ ಪರಿಚಯವೇ ಇರಲಿಲ್ಲ. ಏಕೆಂದರೆ ಅವರ ಮೂರನೇ ವಯಸ್ಸಿನಲ್ಲಿ ಅವರ ತಂದೆ ತೀರಿಕೊಂಡಿದ್ದರು. ಹಾಗಾಗಿ ತಮ್ಮ ತಾಯಿಯ ಹಾಗೂ ತಮ್ಮ ಅಣ್ಣಂದಿರಾದ ಶಲ್ವಪಿಳ್ಳೆ ಅಯ್ಯಂಗಾರ್, ವೆಂಕಟ ನರಸಿಂಹ ಅಯ್ಯಂಗಾರ್ ರಾಮನ ಮತ್ತು ಕೃಷ್ಣ ಅಯ್ಯಂಗಾರ್ ಆಶ್ರಯದಲ್ಲಿ ಬೆಳೆದರು.

ತಮ್ಮ ಸ್ವಗ್ರಾಮದಲ್ಲಿ ಗೊರೂರು ಹಾಗೂ ಹಾಸನದಲ್ಲಿ ವಿದ್ಯಾಭ್ಯಾಸ ಮುಗಿಸಿ ೧೯೩೦ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಪದವಿ ಮುಗಿಸಿದರು. ಗಣಿತ ಹಾಗೂ ಖಗೋಳಶಾಸ್ತ್ರದಲ್ಲಿ ಆಸಕ್ತಿ, ಚುರುಕಿನ ಹಾಕಿ ಆಟಗಾರ, ಬಿರುಸಿನ ಈಜುಗಾರ ಸಂಪತ್ತಯ್ಯಂಗಾರ್ ತಾಯಿ ಮಡಿಯಾದ ವಿಧುವೆ, ವಿವಿಧ ರೀತಿಯ ಭಕ್ಷ್ಯ ಭೋಜನಗಳ ತಯಾರಿಕೆಗೆ ಮಾರ್ಗದರ್ಶನ ನೀಡುತ್ತಿದ್ದರು. ದೊಡ್ಡ ಮನೆಯ ಹಿತ್ತಲಿನಲ್ಲಿ ಒಂದು ಚಿಕ್ಕ ಮನೆ ಇತ್ತು. ಮಧ್ಯಾಹ್ನದ ಹೊತ್ತಿಗೆ ಅಲ್ಲಿಗೆ ಹೋಗಿ ಸ್ನಾನ ಮಾಡಿ ತುಳಸಿ ಪೂಜೆ ಮಾಡಿ



ಮಡಿಯಿಂದ ಅಡಿಗೆ ತಯಾರಿಸಿ ತಿನ್ನುತ್ತಿದ್ದರು. ಆದರೆ ಮಗ ಸಂಪತ್ತಯ್ಯಂಗಾರ್ ಅವರ ಮನೆಗೆ ವಾರಾಂತ್ಯಕ್ಕೆ ಬ್ರಾಹ್ಮಣ ವಿದ್ಯಾರ್ಥಿಗಳು ಮಾತ್ರವಲ್ಲದೇ ಒಕ್ಕಲಿಗ, ಬೆಸ್ತರು, ಅವರ ಗದ್ದೆಗಳನ್ನು ವಾರಕ್ಕೆ ಹೊಡೆಯುತ್ತಿದ್ದ ರೈತರ ಮಕ್ಕಳು, ಹರಿಜನರು ಬರುತ್ತಿದ್ದರು. ಬಾಲ್ಯದಿಂದಲೇ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಜಾತಿಬೇಧ ಮಾಡದೆ ಎಲ್ಲರನ್ನು ಸಮಾನರಾಗಿ ಕಾಣುತ್ತಿದ್ದರು. ಭೇದ ಎಲ್ಲರಿಗೂ ಅವರ ಅಡಿಗೆ ಮನೆಗೂ ಪ್ರವೇಶವಿತ್ತು. ಇವರ ಮನೆಯ ಸಹೋದರರೆಲ್ಲರೂ ಪದವೀಧರರಾಗಿದ್ದರೂ ಕೂಡ ವಸಾಹತುಶಾಹಿ ದಾಸ್ಯದ ಕೈಕೆಳಗೆ ನೌಕರಿಗೆ ಸೇರದೇ ಕೃಷಿಕರಾಗಿ ಊರಿನಲ್ಲೇ ಇದ್ದರು.

ಸಾಹುಕಾರ ಸಂಪತ್ತಯ್ಯಂಗಾರ್ ತಮ್ಮ ೩೦ನೇ ವಯಸ್ಸಿನಲ್ಲಿ ಕೆಂಪು ಮಿಶ್ರಿತ ಬಿಳಿ ಬಣ್ಣ ಸಾರೊಷ್ಟು ಎತ್ತರ ಅಗಲವಾದ ತುಸು ಹೆಚ್ಚು ಎನ್ನುವ ಮೈಕಟ್ಟು, ಗುಂಗುರು ಕೂದಲಿನ ಕ್ರಾಪು, ಖಾದಿ ಚೆಡ್ಡಿಯ ಮೇಲೆ ಒಂದೆಳೆಯ ಖಾದಿ ಲುಂಗಿ, ಮೈಮೇಲೆ ಬಿಳಿ ಖಾದಿಯಲ್ಲಿ ಹೊಲಿದ ಬನೀನಿನ ಮೇಲೆ ಅರ್ಧ ತೋಳಿನ ಕಾಲರ್ ಉಳ್ಳ ಖಾದಿ ಷರಟು ಬಿಸಿಲಿಗೆ ತಲೆಯ ಮೇಲೆ ಲಪ್ಪಟೆಯಂತೆ ಸುತ್ತಿಕೊಳ್ಳುವ ಅಥವಾ ಎಡ ಹೆಗಲ ಮೇಲೆ ಹಾಕಿಕೊಳ್ಳಲು ಒಂದು ಬಿಳಿ ಖಾದಿ ಚೌಕ, ಕಾಲಿಗೆ ದಪ್ಪನೆಯ ಹಳ್ಳ ಎಕ್ಕಡ, ನೂರಾರು ಜನರ ನಡುವೆಯೂ ಎದ್ದು ಕಾಣುವ ಚಹರೆ ಅವರದು. ಪ್ರತಿನಿತ್ಯ ಅವರ ಮನೆಯಲ್ಲಿ ವಾರಾನ್ನದ ವಿದ್ಯಾರ್ಥಿಗಳಿಗೆ ಕೆಲಸಗಾರರಿಗೆ ಅನ್ನದಾಸೋಹವೇ ನಡೆಯುತ್ತಿತ್ತು. ಇಷ್ಟೆಲ್ಲಾ ಸೇವೆಗಳು ಯಾವುದೇ ಪ್ರತಿಫಲಾಪೇಕ್ಷೆಗಳಿಲ್ಲದೇ ಪ್ರತಿನಿತ್ಯ ನಡೆಯುತ್ತಿತ್ತು.

### ಸ್ವಾತಂತ್ರ್ಯ ಚಳವಳಿಯಲ್ಲಿ

೧೯೨೭–೨೮ ರಲ್ಲಿ ಹಾಸನದ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಮಹಾತ್ಮರು ಹಾಸನಕ್ಕೆ ಬಂದಾಗ ಅವರ ದರ್ಶನದಿಂದ, ಅವರ ಪ್ರಭಾವಕ್ಕೆ ಒಳಗಾದರು. ಇದರಿಂದ ಇರ್ವಿನ್ ಕೆನಾಲ್ ಫಾರಂ, ಫಾರಂ, ಬದನವಾಳು ಇತ್ಯಾದಿ ಸ್ಥಳಗಳಿಗೆ ಭೇಟಿ ಕೊಟ್ಟು ವಾರ್ದಾದಲ್ಲಿ ೧೫ ದಿನಗಳ ತರಬೇತಿ ಪಡೆದು ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರಿಗೆ ಗ್ರಾಮದಲ್ಲಿ ಗುಡಿ ಕೈಗಾರಿಕೆಗೆ ಬೆಂಬಲವಾಗಿ ನಿಂತರು. ವಿವಿಧ ಸಣ್ಣ ಕೈಗಾರಿಕೆಯನ್ನು ಸ್ಥಾಪನೆ ಮಾಡಿ ಗ್ರಾಮೋದ್ಯೋಗ ಕಾರ್ಯಕ್ರಮವನ್ನು ರೂಢಿಸಿ ಗೊರೂರು ಮಾದರಿ ಗ್ರಾಮ ಎಂಬ ಹೆಸರು ತಂದುಕೊಟ್ಟರು.

೧೯೪೦ರಲ್ಲಿ ವೈಯುಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಲು ಗಾಂಧೀಜಿಯವರು ಇವರಿಗೆ ಅವಕಾಶ ಕೊಟ್ಟಾಗ ಅದು ಸೌಭಾಗ್ಯವೆಂದು ತಿಳಿದು ೧೯೪೧ರಲ್ಲಿ ಗಾಂಧೀಜಿಯವರೊಡನೆ ಸತ್ಯಾಗ್ರಹದಲ್ಲಿ ಭಾಗವಹಿಸಿ ಆರು ತಿಂಗಳ ಜೈಲುವಾಸ ಅನುಭವಿಸಿದರು. ಬೆಳಗಾಂನ ಸೆರೆಮನೆಯಲ್ಲಿ ಹಳೆ ಮೈಸೂರು ಕಾಂಗ್ರೆಸ್ ಪರವಾಗಿ ಶಿಕ್ಷೆ ಅನುಭವಿಸಿದರು.

ಗೊರೂರು ರಾಮಸ್ವಾಮಿಯವರು ತಮ್ಮ 'ಮೆರವಣಿಗೆ' ಎಂಬ ಕಾದಂಬರಿಯಲ್ಲಿ ತಮ್ಮ ಊರನ್ನು ಒಂದು ಮಾದರಿ ಗ್ರಾಮವನ್ನಾಗಿ ಮಾಡಲು ಸಂಪತ್ತಯ್ಯಂಗಾರ್ ನೀಡಿದ ಸಹಕಾರದ ಬಗ್ಗೆ ತಿಳಿಸುತ್ತಾ ೨೯ನೇ ಅಧ್ಯಾಯದಲ್ಲಿ ರಾಟೆ, ನೂಲು, ಮಗ್ಗ, ಗಾಣ, ಕಾಗದ, ಖಾದಿ ಇತ್ಯಾದಿ ಗುಡಿ ಕೈಗಾರಿಕೆಗಳ ಬಗ್ಗೆ ತಿಳಿಸಿದ್ದಾರೆ.

ಗೊರೂರು ರಾಮಸ್ವಾಮಿಯವರ ಜೊತೆ ಸೇರಿ ತಮ್ಮ ಊರಿನ ಪಕ್ಕದ ಗ್ರಾಮ ಮಲ್ಲಿಗೆ ಹಳ್ಳಿಯಲ್ಲಿಯೂ ಕಾಗದ, ಗುಡಿ ಕೈಗಾರಿಕೆ, ಗೋಣಿ ಚೀಲ ತಯಾರಿಕೆ, ಜಮಖಾನ ತಯಾರಿಕೆ, ಖಾದಿ ಬಟ್ಟೆ ತಯಾರಿಕೆ, ಎಣ್ಣೆ ಗಾಣ ಇತ್ಯಾದಿಗಳನ್ನು ಸರ್ಕಾರದ ವಿರುದ್ಧವಾಗಿ ಸ್ಥಾಪಿಸಿ ಯಶಸ್ಸುಕಂಡರು. ಸಂಪತ್ತಯ್ಯಂಗಾರ್ ಮಲ್ಲಿಗೆಹಳ್ಳಿ ಎಣ್ಣೆ ಗಾಣದ ಮೇಲೆ ಕುಳಿತ ಬ್ರಾಹ್ಮಣರೊಬ್ಬರು ಖಾದಿ ವಸ್ತ್ರ ಹಾಗೂ ಟೋಪಿ ಧರಿಸಿ ಗಾಣಿಗರಾದರು.

ಸಂಪತ್ತಯ್ಯಂಗಾರ್‌ರವರಿಗೆ ಕಾಗದ ತಯಾರಿಕೆಯಲ್ಲಿ ಆಸಕ್ತಿ ಇತ್ತು. ವಾರ್ಧಾದಲ್ಲಿ ಕಲಿತ ಆ ಕಲೆಯನ್ನು ಗೊರೂರಿನಲ್ಲಿ ಆರಂಭಿಸಿದರು. ತೋಟದಲ್ಲಿ ವ್ಯರ್ಥವಾಗುತ್ತಿದ್ದ ಬಾಳೆನಾರು, ಹಳೆ ಕಾಗದದ ಚೂರು, ಬಟ್ಟೆ ಚೂರು ಸಂಗ್ರಹಿಸಿದರು. ಇವುಗಳ ಸಂಗ್ರಹಕ್ಕಾಗಿ ಮನೆ ಮನೆಗೂ ಬುಟ್ಟಿಗಳನ್ನು ಇಟ್ಟಿರುತ್ತಿದ್ದರು. ಕಾಗದದ ಕಚ್ಚಾಮೂಲವನ್ನು ತಯಾರಿಸಲು, ಯಾತ ಕರಗಿಸುವುದಕ್ಕೆ, ಇಟ್ಟಿಗೆ ತೊಟ್ಟಿ, ಬೇಯಿಸುವುದಕ್ಕೆ ಒಂದು ಕೊಳಗದಪ್ಪಲೆ, ಪಲ್ಪ್ ಕಾಗದದ ಮಿಶ್ರಣಕ್ಕೆ ವಿಶಾಲವಾದ ತೊಟ್ಟಿ ಸಿದ್ಧಪಡಿಸಿಕೊಂಡಿದ್ದರು. ಮೊದಲನೆ ದಿನ ಕಾಗದ ಹಪ್ಪಳದಂತೆ ಮಂದವಾಗಿತ್ತು. ಬೀದಿಗಳಲ್ಲಿ ಒಣಗಿಸುವಾಗ ಹಪ್ಪಳ ಒಣಗಿಸುತ್ತಿದ್ದೀರಾ ಎಂದು ಗೇಲಿ ಮಾಡಿದ್ದು ಉಂಟು. ಇದ್ದಕ್ಕಿದ್ದಂತೆ ಕಾಗದದ ಮನೆ ಸಾರ್ವಜನಿಕ ಕಟ್ಟಡವಾಯಿತು. ಚಳವಳಿ ಕಾಲಕ್ಕೆ ಸ್ವದೇಶಿ ಮತ್ತು ಸ್ವಾವಲಂಬನೆ ಗೊರೂರು ಗ್ರಾಮದ ಉಸಿರಾಗಿತ್ತು. ಇವರುಗಳ



ಮೇಲೆ ನಿಗಾ ಇರಿಸಲು ೧೫ ರೂಪಾಯಿ ಸಂಬಳದ ಒಬ್ಬ ಪೊಲೀಸರನ್ನು ನೇಮಿಸಲಾಯಿತು. ಇವರು ಮಾರು ವೇಷಧಾರಿಗಳೂ ಆಗಿದ್ದು ಆಗ್ಗಿಂದಾಗ್ಗೆ ಮೇಲಾಧಿಕಾರಿಗಳಿಗೆ ವರದಿ ನೀಡುತ್ತಿದ್ದರು.

ಅಪ್ರತಿಮ ದೇಶಭಕ್ತರಾಗಿದ್ದ ಸಂಪತ್ತಯ್ಯಂಗಾರ್ ಗೊರೂರು ರಾಮಸ್ವಾಮಿಯವರ ಜೊತೆ ಸೇರಿ ಜಿಲ್ಲೆಯಾದ್ಯಂತ ಸಂಚರಿಸಿ ದೇಶಪ್ರೇಮದ ಬೀಜ ಬಿತ್ತಿದರು. ಗೊರೂರು ಹಾಗೂ ಸುತ್ತಮುತ್ತ ಹಳ್ಳಿಗಳು ಹಾಸನ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯ ಕೇಂದ್ರ ಭಾಗವಾಗಿತ್ತು. ೧೯೪೨ ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಅನೇಕ ಸಂತೆ ಸುಂಕ ಚಳುವಳಿಯನ್ನು ಯಶಸ್ವಿಯಾಗಿ ನಡೆಸಿ ಸೆರಮನೆ ಸೇರಿದರು.

೧೯೪೭ ಆಗಸ್ಟ್ ೧೪ ರ ಮಧ್ಯೆ ರಾತ್ರಿ ಭಾರತಾಂಬೆ ಬ್ರಿಟಿಷ್ ದಾಸ್ಯದಿಂದ ಮುಕ್ತಿ ಹೊಂದಿ ಸ್ವಾತಂತ್ರ್ಯಗೊಂಡರೂ ಮೈಸೂರು ಮಾತ್ರ ಮಹಾರಾಜರ ಆಳ್ವಿಕೆಯಲ್ಲಿ ಇತ್ತು. ಇದನ್ನು ವಿರೋಧಿಸಿ ೧೯೪೭ ಸೆಪ್ಟೆಂಬರ್‌ನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ ನಡೆಯಿತು. ಸಂಪತ್ತಯ್ಯಂಗಾರ್ ರಾಮಸ್ವಾಮಿಯವರ ಜೊತೆ ಸೇರಿ ಜಿಲ್ಲೆಯಾದ್ಯಂತ ಅತ್ಯಂತ ಪ್ರಬಲವಾದ ಚಳವಳಿಯನ್ನು ಸಂಘಟಿಸಿದರು. ಇವರ ನಾಯಕತ್ವದಲ್ಲೆ ಗೊರೂರಿನಲ್ಲಿ ಸಂತೆಯ ದಿನ ಶಾಲೆಯ ವಿದ್ಯಾರ್ಥಿಗಳನ್ನು ಹಾಗೂ ಊರಿನ ನಾಗರಿಕರನ್ನೆಲ್ಲಾ ಸೇರಿಸಿ ಊರಿನ ಎಲ್ಲಾ ಬೀದಿಗಳಲ್ಲೂ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು. ಸಂತೆಯ ಮಧ್ಯಭಾಗದಲ್ಲಿ ಸಾರ್ವಜನಿಕ ಸಭೆಯಲ್ಲಿ ಪ್ರಚೋದನಾಕಾರಿ ಭಾಷಣ ಮಾಡಿದರು. ನಂತರ ಸಂಪತ್ತಯ್ಯಂಗಾರ್‌ರನ್ನು ಬಂಧಿಸಲಾಯಿತು. ಇವರ ಜೊತೆ ಅನೇಕರು ಬಂಧನಕ್ಕೊಳಗಾದರು. ಗೊರೂರು ಸುತ್ತಮುತ್ತಲಿನ ಜನ ಪ್ರಚೋದಿತರಾಗಿದ್ದರು. ಆ ಭಾಗದ ಸುತ್ತಮುತ್ತಲಿನ ಹತ್ತು ಹಲವಾರು ಗ್ರಾಮಗಳ ಜನ ಸೇರಿ ಹಾಸನ, ಅರಕಲಗೂಡು ರಸ್ತೆಯಲ್ಲಿ ರಸ್ತೆ ತಡೆ ನಡೆಸಿದರು. ಹೆಂಡದ ಲಾರಿಗಳನ್ನು ಪಡೆದು ಹೆಂಡದ ಪಿಪಾಯಿಗಳನ್ನು ಧ್ವಂಸ ಮಾಡಿದರು.

ಇಡೀ ಗೊರೂರಿನ ಸುತ್ತಮುತ್ತ ಹಾಗೂ ಇಡೀ ಹಾಸನ ಜಿಲ್ಲೆಯಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ತೀವ್ರವಾದ ಹೋರಾಟ ಆರಂಭವಾಯಿತು. ಗೊರೂರು ಈ ಚಳವಳಿಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದರು.

ಒಟ್ಟಾರೆ ಸಂಪತ್ ಅಯ್ಯಂಗಾರ್‌ರವರು ಅಪ್ರತಿಮ ದೇಶಪ್ರೇಮಿ, ಸ್ವಾತಂತ್ರ್ಯ

ಪ್ರೇಮಿಯಾಗಿ ಇಡೀ ಜಿಲ್ಲೆಯ ಸ್ವಾತಂತ್ರ್ಯ ಪ್ರೇಮಿಯಾಗಿ ಇಡೀ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ದೇಶ ಸೇವೆ ಮಾಡಿದರು. ಸ್ವಾತಂತ್ರ್ಯ ನಂತರ ಕೇಂದ್ರ ಸರ್ಕಾರದಲ್ಲಿ ಕಾರ್ಯನಿರ್ವಹಿಸುವ ಜವಾಬ್ದಾರಿಯ ಕರೆ ಬಂದರೂ ಗಾಂಧಿಯವರ ಕರೆಯಂತೆ ಅಧಿಕಾರದ ವ್ಯಾಮೋಹಕ್ಕೆ ಒಳಗಾಗದೆ, ತನ್ನ ಊರಿನಲ್ಲೇ ಉಳಿದು ಸಾಹಿತ್ಯ ಸೇವೆ ಮಾಡಿದರು.

## ಬಿ. ಎನ್. ಬೋರಣ್ಣಗೌಡ

ಭಾರತಾಂಬೆಯು ತನ್ನ ದಾಸ್ಯದ ನೊಗವನ್ನು ಕಿತ್ತೊಗೆಯುವಲ್ಲಿ ಹಾಸನ ಜಿಲ್ಲೆಯು ತನ್ನದೇ ಆದ ಕೊಡುಗೆಯನ್ನು ನೀಡಿದೆ. ಅಂತಹ ಕೊಡುಗೆಗಳೆಂದರೆ ಜಿಲ್ಲೆಯ ಸಾವಿರಾರು ಸ್ವಾತಂತ್ರ್ಯ ಹೋರಾಟಗಾರರು. ಅಂತಹ ಹೋರಾಟಗಾರರ ಮುಂದಾಳುಗಳಾಗಿ, ಸ್ಫೂರ್ತಿ ಸೆಲೆಯಾಗಿ ಛಲ ಬಿಡದ ತ್ರಿವಿಕ್ರಮನಂತೆ ಬ್ರಿಟಿಷರ ವಿರುದ್ಧ ಹೋರಾಡಿ ಅವರ ಪ್ರತಿರೋಧಕ್ಕೆ ಎದೆಯೊಡ್ಡಿ ನಿಂತ ಧೀಮಂತ ಹೋರಾಟಗಾರರೆಂದರೆ ಶ್ರೀ ಬಿ.ಎನ್. ಬೋರಣ್ಣಗೌಡರು.

ಶ್ರೀಯುತರು ೧೬–೧೦–೧೯೦೭ರಂದು ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಮುಗಳವಳ್ಳಿ ಶ್ರೀ ನಿಂಗೇಗೌಡ ಮತ್ತು ದ್ಯಾವಮ್ಮ ಇವರ ಪುತ್ರನಾಗಿ ಜನಿಸಿದರು, ಸಾಮಾನ್ಯ ರೈತ ಕುಟುಂಬದಲ್ಲಿ ಹುಟ್ಟಿದ ಇವರ ಪ್ರಾಥಮಿಕ ಶಿಕ್ಷಣವು ಪಕ್ಕದ ಊರುಗಳಾದ ಶಾಲೆಗಳಲ್ಲಿ ನಡೆಯಿತು. ಹೆಚ್ಚಿನ ಶಿಕ್ಷಣವನ್ನು ಹಾಸನ, ಮೈಸೂರು ಮತ್ತು ಕನಕಪುರ ಹಾಗೂ ಬೆಂಗಳೂರುಗಳಲ್ಲಿ ಪಡೆದರು. ಬಿ.ಎ. ಆನರ್ಸ್‌ವರಗೆ ಓದಿರುವ ಗೌಡರು ಆ ಸಂದರ್ಭದಲ್ಲಿ ಕೆಂಗಲ್ ಹನುಮಂತಯ್ಯ, ಕೆ. ಸಿ. ರೆಡ್ಡಿ ಮುಂತಾದವರ ಸ್ನೇಹಿತರಾಗಿದ್ದರು, ಗಾಂಧೀಜಿಯವರ ಕರೆಯ ಮೇರೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು.

೧೯೨೭ರಲ್ಲಿ ಎರಡನೇ ವರ್ಷದ ಬಿ.ಎ. ಆನರ್ಸ್ ಓದುತ್ತಿದ್ದಾಗ ಗಾಂಧೀಜಿಯವರಿಂದ ಪತ್ರಬಂತು. ಪತ್ರದಲ್ಲಿ ದೇಶಕ್ಕೆ ನಿನ್ನ ಸೇವೆ ಬೇಕಾಗಿದೆ ವಿದ್ಯಾಭ್ಯಾಸ ನಿಲ್ಲಿಸಿ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸು ಎಂದು ಗಾಂಧೀಜಿ ಆಜ್ಞಾಪಿಸಿದ್ದರು. ಹಾಗಾಗಿ ಹೋರಾಟದಲ್ಲಿ ಪಾಲ್ಗೊಂಡರು. ಅಲ್ಲದೇ ಗಾಂಧೀಜಿಯವರು ಅಪೆಂಡಿಸೈಟಿಸ್ ಶಸ್ತ್ರ ಚಿಕಿತ್ಸೆಗಾಗಿ ನಂದಿ ಬೆಟ್ಟಕ್ಕೆ ಬಂದಾಗ



ಶಿಬಿರದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ಗಾಂಧೀಜಿಯವರ ನಿಕಟ ಬಾಂದವ್ಯ ಗಳಿಸಿದರು. ೧೯೩೭ರ ವರೆಗೆ ರಹಸ್ಯ ಸೇವಾ ಸಂಸ್ಥೆಯಲ್ಲಿ ಸಿದ್ಧವಾಹಕರಾಗಿ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಸೈಮನ್ ಕಮೀಷನ್ ವಿರುದ್ಧ ಪತ್ರಗಳನ್ನು ಮುದ್ರಿಸಿ ಉತ್ತರ ಭಾರತಕ್ಕೆ ರವಾನಿಸಿದರು. ಸಿರಸಿ ಕರಾನಿರಾಕರಣೆ ಚಳುವಳಿಯಲ್ಲಿ ೩–೪ ಗುಂಪುಗಳ ಮುಂದಾಳತ್ವ ವಹಿಸಿದ್ದರು.

೧೯೩೯ರಲ್ಲಿ ನಾರಿಮನ್ ಗಲಭೆಯಲ್ಲಿ ಇವರೇ ಮೊದಲನೇ ಅಪರಾಧಿ ಎಂದು ಪರಿಗನಿಸಿ ಬಂಧಿಸಲಾಯಿತು. ವಿಚಾರಣೆ ಕಾಲದಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಲು ನಿರಾಕರಿಸಿದ ಆಗಿನ ಸರ್ಕಾರ ಇವರನ್ನು ಬಂಧನದಲ್ಲಿಟ್ಟುಕೊಂಡೇ ಸತತ ಒಂದು ವರ್ಷಕಾಲ ವಿಚಾರಣೆ ನಡೆಸಿ ಆರು ತಿಂಗಳ ಕಠಿಣ ಶಿಕ್ಷೆ ವಿಧಿಸಿತು.

೧೯೪೦ರಲ್ಲಿ ಚಿಕ್ಕಮಗಳೂರು ಜೈಲಿನಲ್ಲಿದ್ದಾಗ ಘಟನೆಯೊಂದು ನಡೆಯಿತು. ಇವರನ್ನು ಸೆರೆಮನೆಗೆ ತಳ್ಳಿ ಅಧಿಕಾರಿಗಳು ಇವರು ಹಾಕಿದ್ದ ಬಟ್ಟೆ ಬದಲಿಸಿ ಬಟ್ಟೆ ಹಾಕಲು ಹೇಳಿ ಹಳೇ ಬಟ್ಟೆಗಳನ್ನು ಕೊಟ್ಟರು ಅದನ್ನು ನಿರಾಕರಿಸಿ ನನಗೆ ಐದು ವರ್ಷಗಳ ಶಿಕ್ಷೆ ವಿಧಿಸಲಾಗಿದೆ. ಆರು ತಿಂಗಳಿಗಿಂತ ಮೇಲ್ಪಟ್ಟ ಶಿಕ್ಷೆ ಇದ್ದವರಿಗೆ ಹೊಸಬಟ್ಟೆಗಳನ್ನು ಕೊಡಬೇಕೆಂಬ ನಿಯಮವಿದೆ. ಅದರಂತೆ ಹೊಸ ಬಟ್ಟೆ ಕೊಡಿ ಇಲ್ಲವೇ ನನ್ನ ಬಟ್ಟೆಗಳನ್ನೇ ಹಾಕಿಕೊಂಡಿರಲು ಬಿಡಿ ಎಂದು ಹಠ ಹಿಡಿದರು. ಸರ್ವಾಧಿಕಾರಿಗಳಾಗಿದ್ದ ಜೈಲಿನ ಅಧಿಕಾರಿಗಳು ಬಲವಂತವಾಗಿ ಇವರ ಬಟ್ಟೆಗಳನ್ನು ಕಳಚಿ ಸೆರೆಮನೆ ಬಟ್ಟೆಗಳನ್ನು ತೊಡಿಸಿದರು. ಶ್ರೀಯುತ ಬಿ.ಎನ್. ಬೋರಣ್ಣಗೌಡರು ಕೌಪೀನ ಹೊರತುಪಡಿಸಿ ಬೆತ್ತಲೆಯಾದರು. ಪುನಃ ಅಧಿಕಾರಿಗಳು ಅಂಗಿ ಚಡ್ಡಿಗಳನ್ನು ಕೊಟ್ಟಾಗ ನಿರ್ವಾಣದಲ್ಲಿಯೇ ಉಳಿದರು. ಹಲವು ದಿನಗಳವರೆಗೆ ಅಧಿಕಾರಿಗಳು ಹೊಸ ಬಟ್ಟೆ ಕೊಡದಿದ್ದಾಗ ಉಗ್ರ ಪ್ರತಿಭಟನೆ ಮಾಡಿದರು. ಒಂದು ವಾರ ಕಾಲ ಇದೇ ಸ್ಥಿತಿಯಲ್ಲಿ ಇರಿಸಲಾಯಿತು. ಅವರಿದ್ದ ಕೋಣೆ ಬಹಳ ಚಿಕ್ಕದಾಗಿದ್ದು ಅಲ್ಲಿಯ ಸೊಳ್ಳೆಯ ಕಾಟದಲ್ಲಿ ನಿರಾಹಾರಿಗಳಾದ ಶ್ರೀಯುತರು ದೈಹಿಕವಾಗಿ ಸೊರಗಿದರೂ ಮಾನಸಿಕವಾಗಿ ದೃಢ ಸಂಕಲ್ಪದಿಂದ ಇದ್ದರು. ಇವರ ಹಠಮಾರಿತನಕ್ಕೆ ಹೆದರಿದ ಜೈಲಿನ ಅಧಿಕಾರಿಗಳು ಇವರನ್ನು ಬೆಂಗಳೂರು ಸೆಂಟ್ರಲ್ ಜೈಲಿಗೆ ವರ್ಗಾಯಿಸಿದರು.

## ಸ್ವತಂತ್ರ್ಯ ಹೋರಾಟಗಾರರ ಮುಂದಾಳುಗಳಾಗಿ ಬೋರಣ್ಣಗೌಡರು

೧೯೩೯ರ ವೇಳೆಯಲ್ಲಿ ಜಿಲ್ಲಾ ಬೋರ್ಡ್ ಸದಸ್ಯರಾಗಿದ್ದಾಗ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿ ಅರಣ್ಯ ಸತ್ಯಾಗ್ರಹದಲ್ಲಿ ತೊಡಗಿದರು. ಅರಸೀಕೆರೆ ತಾಲ್ಲೂಕಿನಲ್ಲಿ ಸತ್ಯಾಗ್ರಹವು ತೀವ್ರವಾಗಿ ನಡೆದು ನೂರಾರು ಜನ ಪಾಲ್ಗೊಂಡರು. ಇದಲ್ಲದೆ ಬೇಲೂರು ತಾಲ್ಲೂಕಿನಲ್ಲಿ ಈಚಲ ಮರ ಕಡಿಯುವುದು, ಸಾರಾಯಿ ಅಂಗಡಿ ಪಿಕೆಟಿಂಗ್ ನಡೆಸುವುದು ಇತ್ಯಾದಿ ಚಳವಳಿ ನಡೆಯುತ್ತಿತ್ತು. ಈ ಎಲ್ಲಾ ಹೋರಾಟದ ಮುಂದಾಳತ್ವವನ್ನು ಬೋರಣ್ಣಗೌಡರು ವಹಿಸಿ ಮುಂದುವರಿದರು.

ಆಗಿನ ಜಿಲ್ಲೆಯ ಅಧಿಕಾರಿಗಳು ಸರ್ಕಾರದ ಪಕ್ಷ ವಹಿಸಿ ಲೆವಿಯನ್ನು ದಬ್ಬಾಳಿಕೆಯಿಂದ ಸಂಗ್ರಹಿಸಲು ಆರಂಭಿಸಿದರು. ರೈತರಿಗೆ ತೀರಾ ಹಿಂಸೆ ಕೊಡುತ್ತಿದ್ದರು. ಈ ಬಗ್ಗೆ ಹೋರಾಡಲು ರೈತರಿಗೆ ಕರೆ ನೀಡಿದರು. ಹಳ್ಳಿಗಳಲ್ಲಿ ಸಂಚರಿಸಿ ಸರ್ಕಾರಕ್ಕೆ ಲೆವಿ ಕೊಡದಂತೆ ಮತ್ತು ಸುಂಕ ಕೊಡದಂತೆ ಪ್ರೇರೇಪಿಸಿದರು. ಅಧಿಕಾರಿಗಳು ಲೆವಿ ವಸೂಲಿ ನೆಪದಲ್ಲಿ ರೈತರಿಗೆ ಹಾಗೂ ಮಹಿಳೆಯರಿಗೆ ತೊಂದರೆಕೊಟ್ಟಿದ್ದನ್ನು ಗಮನಿಸಿ ಈ ವಿಚಾರವನ್ನು ಮಹರಾಜರಿಗೆ ಪತ್ರ ಮುಖೇನ ತಿಳಿಸಿದರು. ಬೇಲೂರು ತಾಲ್ಲೂಕಿನಿಂದ ೭೩ ಜನ ರೈತರ ತಂಡದ ಸಹಿತ ಬೆಂಗಳೂರಿಗೆ ತೆರಳಿ ಆಗಿನ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರನ್ನು ಭೇಟಿ ಮಾಡಿದರು. ಕಾರ್ಲ್‌ಟೌನ್ ಹೌಸನಲ್ಲಿದ್ದ ದಿವಾನರು ಗಾಬರಿಗೊಂಡು ಸಿವಿಲ್ ಸಪ್ಲೈಸ್ ಇಲಾಖೆ ಡೈರೆಕ್ಟರನ್ನು ಕಾಣಲು ೫ ಜನರ ತಂಡವನ್ನು ಆಹ್ವಾನಿಸಿದಾಗ ಬೋರಣ್ಣಗೌಡರು ಮತ್ತು ಕಳ್ಳಿ ಕೊಪ್ಪಲು ಪುಪ್ಪೇಗೌಡ ಇತರ ೩ ಜನರು ಚರ್ಚೆಯಲ್ಲಿ ಪಾಲ್ಗೊಂಡು ರೈತರಿಗೆ ಅನುಕೂಲವಾಗುವಂತೆ ಆಜ್ಞೆ ಹೊರಡಿಸಲು ಆಗ್ರಹ ಪಡಿಸಿದರು. ತಕ್ಷಣ ದಿವಾನರು ಡೈರೆಕ್ಟರಿಗೆ ಸ್ಥಳ ಅಧ್ಯಯನ ಮಾಡಲು ತಿಳಿಸಿದರು. ಮುಂದೆ ಡೈರೆಕ್ಟರ್ ಬೇಲೂರಿಗೆ ಬಂದಾಗ ಅವರನ್ನು ತಾಲ್ಲೂಕಿನ ಅನೇಕ ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಪರಿಸ್ಥಿತಿ ವಿವರಿಸಿದರು. ಲೆವಿಯನ್ನು ರದ್ದು ಮಾಡಿಸಿ ಎಲ್ಲಾ ರೈತರನ್ನು ಲೆವಿಯಿಂದ ಮುಕ್ತಗೊಳಿಸಿ ಆ ಬಗ್ಗೆ ಪ್ರಕಟಣೆ ಹೊರಡಿಸಲು ತಹಸೀಲ್ದಾರರಿಗೆ ತಿಳಿಸಿದರು. ಆಗ ಡೆಪ್ಯೂಟಿ ಕಮೀಷನರನ್ನು ಜಿಲ್ಲೆಯಿಂದ ವರ್ಗ ಮಾಡಿಸಿದರು.



## ದಿನಕ್ಕೆ ೩೬ ಸೇರು ರಾಗಿ ಬೀಸಿ ಬ್ರಿಟಿಷ್ ಅಧಿಕಾರಿಗಳಿಗೆ ಸವಾಲೆಸೆದ ಧೀರ ಸತ್ಯಾಗ್ರಹಿ:

ಚಿಕ್ಕಮಗಳೂರು ಜೈಲಿನಿಂದ ಬೆಂಗಳೂರು ಸೆಂಟ್ರಲ್ ಜೈಲಿಗೆ ವರ್ಗಾವಣೆಯಾಗಿದ್ದ ಬಿ. ಎನ್. ಬೋರಣ್ಣಗೌಡರ ದಿಟ್ಟತನದ ವಿಚಾರ ಬ್ರಿಟಿಷ್ ಅಧಿಕಾರಿಗಳಿಗೆ ಮತ್ತು ದಿವಾನರಿಗೆ ತಿಳಿದಿತ್ತು. ಇವರ ಜೊತೆಯಲ್ಲಿ ನಾಡಿನ ಮಹಾನ್ ಹೋರಾಟಗಾರರು ಮತ್ತು ರಾಜಕೀಯ ಮುತ್ಸದ್ಧಿಗಳು ಡಿ. ದೇವರಾಜರಸು, ಹೆಚ್.ಸಿ. ದಾಸಪ್ಪ ಹೆಚ್.ಕೆ. ವೀರಣ್ಣಗೌಡ ಇವರೆಲ್ಲ ಜೈಲಿನಲ್ಲಿರುವ. ಇವರೆಲ್ಲರೂ ಇದ್ದರೂ ಸಹ ದಿವಾನರ ವಕ್ರದೃಷ್ಟಿ ಬಿ.ಎನ್. ಬೋರಣ್ಣಗೌಡರ ಮೇಲೆ ಬಿತ್ತು. ಇವರ ಉದ್ದಟತನವನ್ನು ಹತ್ತಿಕ್ಕುವ ಸಲುವಾಗಿ ಪ್ರತಿದಿನ ೩೬ ಸೇರು ರಾಗಿ ಬೀಸಲು ಅಂದಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಸ್ವತಃ ಆಜ್ಞಾಪಿಸಿದರು. ಇಕ್ಕಟ್ಟಾದ ಕೋಣೆ ಕಾಲು ನೀಡುವಂತೆಯು ಇಲ್ಲ. ಆ ಕಡೆ ಈ ಕಡೆ ಅಲ್ಲಾಡುವಂತೆಯು ಇಲ್ಲ. ರಾಗಿ ಕಲ್ಲು ಇಡಲು ಮತ್ತು ರಾಗಿ ಬೀಸುವಂತೆ ಅನುವಾಗುವಂತೆ ಮಾತ್ರ ಜಾಗವಿರುತ್ತಿತ್ತು. ಅಷ್ಟು ರಾಗಿಯನ್ನು ಹಿಟ್ಟು ಮಾಡುವವರೆಗೆ ಹೊಟ್ಟೆಗೆ ಅನ್ನ ಆಹಾರವಿಲ್ಲ. ಕುಡಿಯಲು ನೀರು ಸಹ ಕೊಡುತ್ತಿರಲಿಲ್ಲ. ಇಂತಹ ಸಂದಿಗ್ಧದಲ್ಲಿ ರಾಗಿಯನ್ನು ಬೀಸಿದರು ಮತ್ತು ಅನೇಕ ಸಾರಿ ಪ್ರತಿಭಟಿಸಲು ಕಲ್ಲುಗಳನ್ನು ಒಡೆದು ಹಾಕಿದರು. ಅಧಿಕಾರಿಗಳು ರಾಗಿ ಸುರಿಯಲು ಬಂದಾಗ ಅವರಿಗೆ ನಾನೊಬ್ಬನೇ ರಾಗಿ ಬೀಸಲು ಬೇಸರವಾಗುತ್ತಿದೆ. ವೈಸ್‌ರಾಯ್ ಹೆಂಡತಿಯನ್ನು ಹಾಡು ಹೇಳಲು ಕಳುಹಿಸಿ ಎಂದು ಸವಾಲೆಸೆದರು. ಅಂದಿನ ಕಾಲದಲ್ಲಿ ಬ್ರಿಟಿಷರ ಬಗ್ಗೆ ಸಾರ್ವಜನಿಕವಾಗಿ ಮಾತನಾಡುವುದೇ ಕಷ್ಟವಾಗಿತ್ತು. ಜೈಲಿನೊಳಗಿದ್ದು ಅವರ ಬಂಧಿಯಾಗಿದ್ದು ಈ ರೀತಿ ಗುಡುಗಿರುವ ಗೌಡರ ಧೈರ್ಯ, ಸಾಹಸ ಎಷ್ಟಿತ್ತೆಂಬುದಕ್ಕೆ ಈ ಘಟನೆ ಕನ್ನಡಿಯಾಗಿದೆ. ಸುಮಾರು ೧೯ ದಿನಗಳು ನಿರಂತರ ರಾಗಿ ಬೀಸಿದ್ದಾರೆ. ಆ ಸಂದರ್ಭದಲ್ಲಿ ತಮ್ಮ ದಣಿವಾರಿಸಿಕೊಳ್ಳಲು ಭಗವದ್ಗೀತೆಯನ್ನು ಪಠಣ ಮಾಡುತ್ತಿದ್ದರು.

ಜೈಲಿನಲ್ಲಿ ಊಟದ ವ್ಯವಸ್ಥೆ ಅಸ್ತವ್ಯಸ್ತವಾದರೆ ಜೈಲಿನ ಅಧಿಕಾರಿಗಳಿಗೆ ಆ ಬಗ್ಗೆ ಎಚ್ಚರಿಕೆ ನೀಡುತ್ತಿದ್ದರು. ತೂಕ ಮತ್ತು ಅಳತೆಯಂತೆ ಕೊಡಲು ತಿಳಿಸುತ್ತಿದ್ದರು. ಯಾವುದೇ ಅಧಿಕಾರಿಯನ್ನು ಧೈರ್ಯದಿಂದ ಎದುರಿಸುತ್ತಿದ್ದರು.

ಬ್ರಿಟಿಷಿನವರು ಇವರ ಉದ್ಧಟತನವನ್ನು ಹತ್ತಿಕ್ಕಲು ಲಾಠಿ ಬೂಟಿನ ಏಟುಗಳನ್ನು ಹೊಡೆಯುತ್ತಿದ್ದರು. ಆ ರೀತಿ ಹೊಡೆದ ಹೊಡೆತಗಳು ತಿಂಗಳುಗಟ್ಟಲೆ ಮಾಯುತ್ತಿರಲಿಲ್ಲ. ಇನ್ನು ಕೆಲವು ವರ್ಷಗಟ್ಟಲೆ ಮತ್ತೆ ಕೆಲವು ಅವರ ಜೀವಿತ ಅವಧಿವರೆಗೆ ಕಲೆಗಳಾಗಿ ಉಳಿದಿದ್ದವು. ಈ ಕಲೆಗಳು ಮುಂದೆ ಅವರ ಹೆಸರನ್ನು ಚಿರಸ್ಥಾಯಿ ಆಗುವಂತೆ ಮಾಡಿದವು. (೧೯೫೩ರಲ್ಲಿ ಶಾಸಕರ ಭವನಕ್ಕೆ ಮಾಜಿ ಪ್ರಧಾನಿಗಳಾದ ಎಚ್. ಡಿ. ದೇವೇಗೌಡರು ಬೋರಣ್ಣಗೌಡರನ್ನು ನೋಡಲು ಹೋದಾಗ ಬೋರಣ್ಣಗೌಡರು ಸ್ನಾನಕ್ಕಾಗಿ ಜುಬ್ಬಾ ತೆಗೆದಾಗ ಅವರ ಮೈಮೇಲೆಲ್ಲ ಗಂಟುಗಳಿದ್ದ ಬಗ್ಗೆ ಕೇಳಲಾಗಿ, "ನೋಡಪ್ಪ ಇದೆಲ್ಲಾ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಂಡೋದಕ್ಕೆ ಹೋರಾಡಿದ್ದಕ್ಕೆ ಪೋಲಿಸಿನವರು, ಜೈಲು ಅಧಿಕಾರಿಗಳು ಹೊಡೆದಂತಹ ಏಟುಗಳ ಗಾಯಗಳು ಹಾಗಾಗಿ ಮೈಯೆಲ್ಲಾ ಗಂಟಾಗಿದೆ" ಎಂದರಂತೆ. ಇದೇ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದು ಜಿಲ್ಲೆಯ ಹೆಮ್ಮೆಯ ಜಲಾಶಯವಾದ ಹೇಮಾವತಿ ಜಲಾಶಯದ ಮೇಲ್ದಂಡೆ ನಾಲೆಗೆ ಶ್ರೀ ಬಿ.ಎನ್. ಬೋರಣ್ಣಗೌಡ ನಾಲೆ ಎಂದು ನಾಮಕರಣ ಮಾಡಿಸಿದುದಾಗಿ, ಮಾನ್ಯ ಎಚ್.ಡಿ.ದೇವೇಗೌಡರು ಹಲವು ಸಂದರ್ಭಗಳಲ್ಲಿ ತಿಳಿಸಿರುತ್ತಾರೆ.

ಬ್ರಿಟಿಷರು ಹೊಡೆದ ಛಾಟಿ ಏಟುಗಳಿಂದ ಬಂದ ರಕ್ತ ಹೆಪ್ಪುಗಟ್ಟಿ ಸ್ನಾನ ಮಾಡುವಾಗ ರಕ್ತಸ್ರಾವವಾಗುತ್ತಿತ್ತು. ಹೆಚ್ಚು ಪ್ರತಿಭಟಿಸುತ್ತಿದ್ದವರಲ್ಲಿ ಬೋರಣ್ಣಗೌಡರು ಮೊದಲಿಗರು. ಹಾಗಾಗಿ ಅವರನ್ನು ಬೇರೆ ಬೇರೆ ಜೈಲಿಗೆ ವರ್ಗಾಯಿಸುತ್ತಿದ್ದರು. ಬೆಂಗಳೂರಿನ ತಿಪ್ಪಗೊಂಡನಹಳ್ಳಿ ಕೆರೆ ಮಣ್ಣು ಹೊರಲು ಇವರನ್ನು ನಿಯೋಜಿಸಲಾಗಿತ್ತು. ಆ ಸಂದರ್ಭದಲ್ಲಿ ಅರ್ಧಬೆಂದ ಮಡಕೆಗಳಲ್ಲಿ ಗಂಜಿ ಕಾಯಿಸಿ ಅರ್ಧ ಬೆಂದ ಕುಡಿಕೆಯಲ್ಲಿ ಕುಡಿಯಲು ಕೊಡುತ್ತಿದ್ದರು. ಆಗ ಅದರ ಹಸಿ ಮಣ್ಣು ದೇಹದೊಳಗೆ ಸೇರಿ ಆಮಶಂಕೆ ಆಗುತ್ತಿತ್ತು ಇದರ ಜೊತೆಗೆ ಜುಲ್ಮಾನೆ, ಛಾಟಿ ಏಟು ಇತ್ಯಾದಿ ಶಿಕ್ಷೆಯನ್ನು ಅನುಭವಿಸಿದ್ದಾರೆ.

ಇಂತಹ ಸಂದರ್ಭಗಳಲ್ಲಿ ಸರ್ಕಾರಿ ಹುದ್ದೆ ಕೊಡುವ ಆಮಿಷವನ್ನು ಅಧಿಕಾರಿಗಳು ಒಟ್ಟಿದರೂ ಬಗ್ಗದಿದ್ದಾಗ, ಅಪಾಲಜಿ ಬರೆದುಕೊಡುವಂತೆ ಪ್ರೇರೇಪಿಸಿದರು. ತಮ್ಮ ಪ್ರಾಣ ಹೋದರೂ ಅಪಾಲಜಿ ಬರೆದುಕೊಡುವುದಿಲ್ಲ ವೆಂದು ತಿಳಿಸಿ ಹೋರಾಟಗಾರರಲ್ಲಿ ಸ್ಫೂರ್ತಿ ತುಂಬಿದರು.

ಹಾಸನ ಜೈಲಿನಲ್ಲಿ ನರಸಿಂಹಮೂರ್ತಿ ಎಂಬ ಜೈಲು ಅಧಿಕಾರಿ ಇದ್ದರು.



ಬಹಳ ಶಿಸ್ತಿನ ಮನುಷ್ಯ ಅವರನ್ನು ಆಗಿನ ಕಾಲಕ್ಕೆ ಕಾನೂನು ನರಸಿಂಹಮೂರ್ತಿ ಎಂದು ಜನ ಕರೆಯುತ್ತಿದ್ದರು. ಅಂತಹ ಅಧಿಕಾರಿಯನ್ನು ಬೋರಣ್ಣನವರು ಗದರಿಸಿ ಖೈದಿಗಳನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಹೇಳುತ್ತಿದ್ದರು.

ಆಗಿನ ಜಿಲ್ಲಾಧಿಕಾರಿಯಾಗಿದ್ದ ಹಿರಣಯ್ಯ ಎಂಬುವರನ್ನು ಜೈಲಿಗೆ ಕರೆಸಿ ಅಕ್ಕಿ, ತುಪ್ಪ, ಎಣ್ಣೆ ಎಲ್ಲವನ್ನು ಸರಿ ಇಲ್ಲದ ಕಾರಣ ವಾಪಸ್ಸು ಕಳುಹಿಸಿ, ಉತ್ತಮ ಗುಣಮಟ್ಟದ ದವಸ ಧಾನ್ಯವನ್ನು ತರಿಸಿದರು. ಜಿಲ್ಲಾಧಿಕಾರಿಯಾಗಿದ್ದ ಹಿರಣಯ್ಯನವರನ್ನು ಹಿರಣಯ್ಯ ಎಂದೆ ಸಂಬೋಧಿಸಿ ಮಾತನಾಡುತ್ತಿದ್ದರು.ಇದು ಇತರ ಖೈದಿಗಳಿಗೆ ಧೈರ್ಯ ಮತ್ತು ಸ್ಫೂರ್ತಿಯಾಗುತ್ತಿತ್ತು. ಬೋರಣ್ಣಗೌಡರು ಜೈಲಿನಲ್ಲಿದ್ದಾರೆ ಎಂದರೆ ಅಧಿಕಾರಿಗಳಿಗೆ ಭಯ ಮತ್ತು ಸದಾ ಎಚ್ಚರಿಕೆಯಿಂದ ಇರುತ್ತಿದ್ದರು.

ಖಲೀಲ್ ಎಂಬುವರು ಜೈಲು ಸೂಪರಿಟೆಂಡೆಂಟ್ ಆಗಿದ್ದಾಗ ದಿನ ಒಂದಕ್ಕೆ ೩ ರೂಗಳನ್ನು ಖರ್ಚುವೆಚ್ಚಕ್ಕಾಗಿ ಕೊಡಬೇಕಾಗಿತ್ತು. ಅಷ್ಟನ್ನು ಬಳಸದಿದ್ದಕ್ಕಾಗಿ ಪ್ರತಿಭಟಿಸಿ ಅಷ್ಟು ಹಣ ಖರ್ಚು ಮಾಡುವಂತೆ ಮಾಡಿದರು. ಹೋರಾಟಗಾರರಾದ ಅಡಗೂರು ಮಡಿವಾಳಪ್ಪನವರಿಗೆ ೧೨ ಛಡಿ ಏಟು ಶಿಕ್ಷೆ ವಿಧಿಸಿದಾಗ ಅದನ್ನು ಖಂಡಿಸಿ ಚಳವಳಿ, ಭಾರತ ಬಿಟ್ಟು ತೊಲಗಿ ಚಳವಳಿ, ಧ್ವಜ ಸತ್ಯಾಗ್ರಹ ಇವುಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಬೋರಣ್ಣಗೌಡರು ಸಾವಿರಾರು ಜನರನ್ನು ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕುವಂತೆ ಮಾಡಿದರು.

ಶ್ರೀಬೋರಣ್ಣಗೌಡರು ಜೈಲಿನಿಂದ ಹೊರಗಿದ್ದಾಗ ಜನರನ್ನು ಸಂಘಟಿಸಿ ಅವರಲ್ಲಿ ದೇಶಪ್ರೇಮ ತುಂಬಿ ಸ್ವಾತಂತ್ರ್ಯ ಹೋರಾಟಗಾರರನ್ನಾಗಿ ಮಾಡುತ್ತಿದ್ದರು. ಸಂತೆಗಳಿಗೆ ಹೋಗಿ ಭಾಷಣ ಮಾಡುವುದು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡಿದರು. ಸೀಮೆಎಣ್ಣೆಗೆ ಬರಬಂದಾಗ ಹಿಪ್ಪೆಎಣ್ಣೆ, ಹೊಂಗೆಎಣ್ಣೆ ಇವುಗಳನ್ನೇ ಬಳಸುವಂತೆ ತಿಳಿಸಿ ವಿದೇಶಿ ಎಣ್ಣೆಯ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವಂತೆ ಪ್ರೇರೇಪಿಸಿದರು. ಹಾಗಾಗಿ ಬ್ರಿಟಿಷರು ಇವರನ್ನು ಜೈಲಿನಿಂದ ಹೊರಗೆ ಬಿಡುತ್ತಿರಲಿಲ್ಲ. ಒಂದಲ್ಲ ಒಂದು ಕಾರಣದಿಂದ ಜೈಲಿಗೆ ಕಳುಹಿಸುತ್ತಿದ್ದರು. ಯಾವುದೇ ಸ್ವಾತಂತ್ರ್ಯ ಹೋರಾಟಗಾರ ಜೈಲಿಗೆ ಹೋದಾಗ ಬೋರಣ್ಣಗೌಡರು ಜೈಲಿನೊಳಗಿದ್ದು ಸ್ವಾಗತಿಸಿ ತಟ್ಟುತ್ತಿದ್ದರು.

ಗಾಂಧೀಜಿಯವರ ಕರೆಯ ಮೇರೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ಬಿ.ಎನ್. ಬೋರಣ್ಣಗೌಡರು ತಮ್ಮ ವಿದ್ಯಾಭ್ಯಾಸ ತೊರೆದರು ತಮ್ಮ ಜೀವನದ ಅರ್ಧಭಾಗವನ್ನು ಸ್ವಾತಂತ್ರ್ಯ ಹೋರಾಟ ಮತ್ತು ಜೈಲು ವಾಸದಲ್ಲಿ ಕಳೆದರು. ಈ ಸಂದರ್ಭದಲ್ಲಿ ಸಾವಿರಾರು ಜನರಿಗೆ ಹೋರಾಟದ ಹಾದಿ ತೋರಿದರು. ಹೋರಾಟಗಾರರಿಗೆ ದಾರಿದೀಪವಾದರು. ದೇಶದ ಹಿತಕ್ಕಾಗಿ ಹಗಲಿರಳು ದುಡಿದು, ಸಂಸಾರಸುಖ ಮತ್ತು ಸ್ವಾರ್ಥಗಳನ್ನು ಕಡೆಗಣಿಸಿದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯ ಪಾತ್ರ ವಹಿಸಿ ಮುಂದಾಳುಗಳಾಗಿ ಹೋರಾಡಿದ್ದರು. ಎಲ್ಲಿಯೂ ಪ್ರಚಾರ ಪ್ರಶಂಸೆ ಬಯಸಲಿಲ್ಲ. ಅಪ್ಪಟ ಗಾಂಧೀವಾದಿಯಾದ ಗೌಡರು ಗಾಂಧಿಯವರನ್ನು ಹತ್ತಿರದಿಂದ ಕಂಡವರು ಕೊನೆಯವರೆಗೆ ಅವರ ತತ್ವದಲ್ಲೇ ನಡೆದರು. ೧೯೨೭ರಲ್ಲಿ ಗಾಂಧೀಜಿಯವರು ಹಾಸನಕ್ಕೆ ಬಂದಾಗ ಅವರ ಜೊತೆ ಓಡಾಡಿದರು. ೧೯೩೭ರಲ್ಲಿ ಗಾಂಧೀಜಿಯವರ ಆಪ್ತಕಾರ್ಯದರ್ಶಿ ಮಹದೇವ ದೇಸಾಯಿ ಅವರು ಬಂದಾಗ ಕೂಡ ಅವರನ್ನು ಆದರಿಸಿ ಕಳುಹಿಸಿಕೊಟ್ಟರು. ನಿಸ್ವಾರ್ಥಸೇವೆಯನ್ನು ತಮ್ಮ ಉಸಿರಾಗಿಸಿಕೊಂಡರು. ಸ್ವಾತಂತ್ರ್ಯ ನಂತರ ರಾಜಕೀಯದಲ್ಲಿ ಕೂಡ 'ನಿಸ್ವಾರ್ಥಕರ್ಮಯೋಗಿ' ಸೇವೆಸಲ್ಲಿಸಿ ವಿಶ್ರಾಂತ ಜೀವನದಲ್ಲಿ ಪರಿಶುದ್ಧರಾಗಿ ಬಾಳಿ ಇತರರಿಗೆ ಸ್ಫೂರ್ತಿಯಾಗಿ, ಆದರ್ಶರಾಗಿದ್ದ ಬೋರಣ್ಣಗೌಡರು ೨-೮-೧೯೭೪ ರಲ್ಲಿ ನಮ್ಮನ್ನಗಲಿದರು. ಅವರು ಇಂದು ನಮ್ಮೊಂದಿಗೆ ಜೀವಂತವಾಗಿಲ್ಲದಿದ್ದರೂ ಅವರ ಹೋರಾಟ ಮತ್ತು ಬದುಕಿನ ವಿವಿಧ ಮಜಲುಗಳು ನಮ್ಮೊಂದಿಗಿವೆ ಅವುಗಳ ಹಾದಿಯಲ್ಲಿ ನಾವು ನಡೆದರೆ, ನಮ್ಮಗಳ ಬದುಕು ಸಾರ್ಥಕವಾದೀತು.

## ರಾಜಮಂತ್ರ ಪ್ರವೀಣ ಶ್ರೀ ಹೆಚ್. ಬಿ. ಗುಂಡಪ್ಪಗೌಡ:

ಗೇಣಿಗೆರೆ ಸುಬೇದಾರ್ ವಂಶದವರಾದ ಶ್ರೀ ಹೆಚ್. ಬಿ. ಗುಂಡಪ್ಪಗೌಡರ ತಂದೆ ಹೆಚ್.ಬಿ. ಬೋರಣ್ಣ ಗೌಡರು. ತಾಯಿ ಚಿಕ್ಕಡಲೂರು ಸೇರೆಗಾರರ ಮಗಳು ಸುಬ್ಬಮ್ಮ. ೦೩.೦೫.೧೮೯೯ ರಲ್ಲಿ ಜನನ. ವಿದ್ಯಾಭ್ಯಾಸ ಹಾಸನ. ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಮದರಾಸಿನಲ್ಲಿ ಕಾನೂನು ಪದವಿ, ಒಳ್ಳೆಯ ಕ್ರೀಡಾಪಟು. ೧೯೨೫ ರಲ್ಲಿ ವಕೀಲಿ ವೃತ್ತಿ ಆರಂಭ. ಹಾಸನ ಜಿಲ್ಲೆಗೆ ಮೊಟ್ಟಮೊದಲು ಒಕ್ಕಲಿಗರ ಪದವೀಧರ ಮತ್ತು ಏಕೈಕ ಒಕ್ಕಲಿಗ ವಕೀಲರು. ರಾಜಕೀಯದತ್ತ ಗೌಡರ ಒಲವು. ಹಾಸನ ತಾಲ್ಲೂಕಿನಿಂದ ಜಿಲ್ಲಾ



ಬೋರ್ಡಿಗೆ ಆಯ್ಕೆಯಾದ ಗೌಡರು ೧೯೨೬ ರಿಂದ ೧೯೩೮ ರವರೆವಿಗೂ ಸತತ ಮೂರು ಬಾರಿ ಜಿಲ್ಲಾ ಬೋರ್ಡ್ ಅಧ್ಯಕ್ಷರು, ಮೈಸೂರು ಪ್ರಜಾಪ್ರತಿನಿಧಿಸಭೆ ಮತ್ತು ಲೆಜಿಸ್ಲೇಟಿವ್ ಸಭೆ ಎರಡರಲ್ಲೂ ಸದಸ್ಯರಾದರು. ಗಾಂಧೀಜಿಯವರ ಪ್ರಭಾವಕ್ಕೊಳಗಾಗಿ ಕಾಂಗ್ರೆಸ್ ಸೇರಿ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ೧೯೩೩ ರಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದರು.೧೯೩೮ ರಲ್ಲಿ ಶಿವಪುರದಲ್ಲಿ ಕಾಂಗ್ರೆಸ್ ಸತ್ಯಾಗ್ರಹದಲ್ಲಿ ಶ್ರೀ ಕೆ.ಸಿ.ರೆಡ್ಡಿ, ಹೆಚ್.ಸಿ. ದಾಸಪ್ಪ, ಗುರುವಾರೆಡ್ಡಿ, ಹೆಚ್. ಸಿದ್ದಯ್ಯ, ಸಾಹುಕಾರ್ ಚನ್ನಯ್ಯ, ಶ್ರೀಮತಿ ಯಶೋಧರ ದಾಸಪ್ಪ, ಹೆಚ್.ಕೆ. ವೀರಣ್ಣಗೌಡ, ಕೆಂಗಲ್ ಹನುಮಂತಯ್ಯ, ಎಸ್.ಸಿ. ಮಲ್ಲಯ್ಯ ಮುಂತಾದ ಮಹಾ ನಾಯಕರೊಡಗುಡಿ ಪಾಲ್ಗೊಂಡರು. ಆಗ ಬರಿ ಅಧಿಕಾರ ವರ್ಗದವರಿಂದ ಕೂಡಿದ ಮೈಸೂರು ಮಹಾರಾಜರ ಮಂತ್ರಿಮಂಡಲಕ್ಕೆ ಪ್ರಜಾ ಪ್ರತಿನಿಧಿಗಳನ್ನು ಮಂತ್ರಿಗಳನ್ನಾಗಿ ನೇಮಿಸಬೇಕೆಂದು ಒತ್ತಾಯಿಸುವುದೇ ಶಿವಪುರದ ಧ್ವಜ ಸತ್ಯಾಗ್ರಹದ ಉದ್ದೇಶವಾಗಿತ್ತು. ನಿತ್ಯ ಒಬ್ಬೊಬ್ಬ ನಾಯಕರು ಧ್ವಜ ಹಾರಿಸುತ್ತಿದ್ದರು. ಧ್ವಜ ಹಾರಿಸಿದವರನ್ನು ಸರ್ಕಾರ ಬಂಧಿಸುತ್ತಿತ್ತು. ಎಂಟನೇ ದಿನ ಗುಂಡಪ್ಪಗೌಡರು ಧ್ವಜ ಹಾರಿಸಿದರು. ಅವರನ್ನು ಬಂಧಿಸಲಿಲ್ಲ. ಮಹಾರಾಜರು ಶಿವಪುರ ಕಾಂಗ್ರೆಸ್ ಸತ್ಯಾಗ್ರಹದ ಬೇಡಿಕೆಗಳನ್ನು ಒಪ್ಪಿಕೊಂಡರು. ೧೯೪೦ ರಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಮತ್ತು ಆಳರಸರ ನಡುವೆ ಘರ್ಷನೆ ತಾರಕಕ್ಕೇರಿತು.ಗುಂಡಪ್ಪಗೌಡರು ಕಾಂಗ್ರೇಸಿಗೆ ರಾಜಿನಾಮೆ ಕೊಟ್ಟರು. ರಾಜ್ಯ ಕಾಂಗ್ರೆಸ್ ನಾಯಕರು ಶ್ರೀ ವಲ್ಲಬಾಯಿ ಪಟೇಲರ ಮೂಲಕ ಸಂದಾನಕ್ಕೆ ಪ್ರಯತ್ನ ಪಟ್ಟರು. ಆದರೆ ಗೌಡರು ಒಪ್ಪಲಿಲ್ಲ. ಆಗ ಸಭೆ ಸೇರಿದ್ದವರೆಲ್ಲಾ ಗಂಡಾಂತರದ ಗುಂಡಪ್ಪ ಗೌಡ ಎಂದು ಘೋಷಣೆ ಕೂಗಿದರು."ಗೌಡರು ರಾಷ್ಟ್ರೀಯ ಮಹಾಸಭೆ" ಎಂಬ ಹೊಸ ಪಕ್ಷ ಕಟ್ಟಿ ೧೯೪೦-೪೧ ರಲ್ಲಿ ನಡೆದ ಅಸೆಂಬ್ಲಿ ಚುನಾವಣೆಗೆ ಸ್ಪರ್ಧಿಸಿದಾಗ ಕಾಂಗ್ರೇಸಿಗರೆಲ್ಲಾ ಒಟ್ಟಾಗಿ ಸೇರಿ ಸೋಲಿಸಿ ಸಂತೋಷಪಟ್ಟರು. ಗೌಡರ ಆಪ್ತಮಿತ್ರ ಬಿ.ಕಪ್ಪಣ್ಣಗೌಡರು ತಮ್ಮ ಅಸೆಂಬ್ಲಿ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಆಸ್ಥಾನಕ್ಕೆ ಗೌಡರನ್ನು ನಿಲ್ಲಿಸಿ ಗೆಲ್ಲಿಸಿದರು. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಮೈಸೂರು ಮಹಾರಾಜರ ಸರಕಾರದಲ್ಲಿ ಗೌಡರು ೧೯೪೧ ರಿಂದ ೧೯೪೫ ರವರೆಗೆ ಆರೋಗ್ಯ ಮತ್ತು ಪೌರಾಡಳಿತ ಸಚಿವರನ್ನಾಗಿ ನೇಮಿಸಿದರು. ಮಹಾರಾಜರು ಇವರ ಕಾರ್ಯ ವೈಖರಿಗೆ ಮೆಚ್ಚಿ "ರಾಜ ಮಂತ್ರ ಪ್ರವೀಣ" ಎಂಬ ಬಿರುದನ್ನು ಕೊಟ್ಟು ಗೌರವಿಸಿದರು. ೧೯೪೫ ರಿಂದ

೧೯೫೦ ರವರೆವಿಗೆ ಸ್ಪೀಕರ್ ಆಗಿ ಕಾರ್ಯ ನಿರ್ವಹಿಸಿದ ಗೌಡರು ಹಾಗೂ ಮೈಸೂರು ಭೂಕಂದಾಯ ಪದ್ಧತಿ ಸುಧಾರಣಾ ಸಮಿತಿ ಅಧ್ಯಕ್ಷರಾಗಿದ್ದು, ೧೯೪೫ ರಲ್ಲಿ ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟರು.ಸ್ವಾತಂತ್ರ್ಯ ನಂತರ ಶ್ರೀ ಕೆ.ಸಿ. ರೆಡ್ಡಿಯವರ ಸರಕಾರದಲ್ಲಿ ಲೋಕ ಸೇವಾ ಆಯೋಗದ ಅಧ್ಯಕ್ಷರಾಗಿ ೧೯೪೭ ರಿಂದ ೧೯೫೭ ರವರೆಗೆ ಸೇವೆ ಸಲ್ಲಿಸಿದರು. ಶ್ರೀ ಕೆ.ಹೆಚ್. ರಾಮಯ್ಯನವರ ಆಶಯದಂತೆ ಹಾಸನ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಸಂಘದ ಅಭಿವೃದ್ಧಿಗೆ ತುಂಬಾ ಶ್ರಮಿಸಿದರು.

## ಎ.ಜಿ. ರಾಮಚಂದ್ರ ರಾವ್:

ರಾಮಚಂದ್ರರಾಯರು ಅಕ್ಕಿಹೆಬ್ಬಾಳಿನಲ್ಲಿ ೧೭.೧೦.೧೮೯೮ ರಂದು ಜನಿಸಿದರು. ಇವರ ತಂದೆ ಗೋಪಾಲರಾವ್, ತಾಯಿ ಪಾರ್ವತಮ್ಮ. ಮೇಲುಕೋಟೆ ವಂಶಸ್ಥರಾದ ಇವರ ವಿದ್ಯಾಭ್ಯಾಸ ಬೆಂಗಳೂರು–ಮೈಸೂರುಗಳಲ್ಲಿ ನಡೆಯಿತು. ಎಲ್.ಎಲ್.ಬಿ. ಪದವಿಗಳಿಸಿ ಹಾಸನದಲ್ಲಿ ವಕೀಲವೃತ್ತಿ ಆರಂಭಿಸಿದರು. ವಕೀಲವೃತ್ತಿಯಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿಸಿಕೊಂಡು ಸಾಮಾನ್ಯರ, ದೀನದಲಿತರ ಸೇವೆಯಲ್ಲಿ ನೆಮ್ಮದಿ ಕಂಡುಕೊಂಡರು. ಕಾಂಗ್ರೆಸ್ ಸಂಸ್ಥೆ ಸೇರಿ ಸ್ವಾತಂತ್ರ್ಯ ಹೋರಾಟಗಾರರಾಗಿ ಹಲವಾರು ಸಲ ಜೈಲು ವಾಸ ಅನುಭವಿಸಿದರು. ಹಾಸನ ನಗರಸಭೆ, ಜಿಲ್ಲಾ ಬೋರ್ಡ್, ವಿಧಾನಸಭೆ, ವಿಧಾನಪರಿಷತ್ತುಗಳಲ್ಲಿ ಸದಸ್ಯರಾಗಿ ಮೂರು ದಶಕಕಕ್ಕೂ ಹೆಚ್ಚಿನಕಾಲ ಸೇವೆ ಸಲ್ಲಿಸಿದರು.

ಸ್ವಾತಂತ್ರ್ಯ ಪೂರ್ವದ ಹೋರಾಟದ ಕಾಲದಲ್ಲಿ ಅತ್ತ ಹೈದರಾಬಾದಿನಲ್ಲಿದ್ದ ಅವರ ತಮ್ಮ ಡಾ॥ ಜಿ.ಎಸ್. ಮೇಲುಕೋಟೆ ಮತ್ತು ಅವರ ಪತ್ನಿ ಹಾಗೂ ಮಗನನ್ನು ಸರಕಾರ ಜೈಲಿಗೆ ಕಳುಹಿಸಿತು. ಇತ್ತ ಭೂಗತರಾಗಿದ್ದ ರಾಯರು ಬೆಂಗಳೂರಿನಲ್ಲಿ ತಮ್ಮ ತಂದೆ ನಿಧನರಾದ ಸುದ್ದಿ ತಿಳಿದು ಹಾಸನಕ್ಕೆ ಬಂದಾಗ ಪೋಲಿಸರು ಅವರನ್ನು ಬಂಧಿಸಿದರು. ಆಗ ರಾಯರು ಪ್ರತಿದಿನ ಜೈಲಿನಿಂದ ಬಂದು ತಮ್ಮ ತಂದೆಯವರ ಶ್ರಾದ್ಧ ಸಂಬಂಧದ ಕಾರ್ಯಗಳನ್ನು ನೆರವೇರಿಸಿ ರಾತ್ರಿ ಪುನಃ ಜೈಲಿಗೆ ಹಿಂದಿರುಗುತ್ತಿದ್ದರು.

ಸ್ವಾತಂತ್ರ್ಯ ನಂತರ ಕೆಂಗಲ್ ಹನುಮಂತಯ್ಯನವರ ಮಂತ್ರಿಮಂಡಲ ಸೇರಿ ಮಂತ್ರಿಗಳಾಗಿದ್ದರು. ಕರ್ನಾಟಕ ಸರ್ಕಾರದ ಸುಧಾರಣಾ ಸಮಿತಿಗಳ ಅಧ್ಯಕ್ಷರಾಗಿ ಮಹತ್ತರ ಸಲಹೆಗಳನ್ನು ನೀಡಿದರು.



ರಾಮಚಂದ್ರರಾಯರ ಸೇವೆಯ್ನು ಸ್ಮರಿಸಿ ಹೇಮಾವತಿ ನಾಲೆಯೊಂದಕ್ಕೆ ಅವರ ಹೆಸರನ್ನಿಡಲಾಗಿದೆ. ರಾಯರು ಏಪ್ರಿಲ್ ೧೯೬೯ ರಲ್ಲಿ ವಿಧಿವಶರಾದರು.

ಇಂತಹ ಮಹನೀಯರ ಹೋರಾಟ, ತ್ಯಾಗ, ಬಲಿದಾನಗಳ ಇತಿಹಾಸ ಇಂದಿನ ಯುವ ಪೀಳಿಗೆಗೆ ಮಾರ್ಗದರ್ಶನ ನೀಡಿ ಸ್ವಾಸ್ಥ್ಯ ಸಮಾಜವನ್ನು ನಿರ್ಮಿಸಲು ಪ್ರೇರಣೆಯಾಗಿದೆ.

## ಕೆ.ಎಂ.ರುದ್ರಪ್ಪ

ಇವರು ಬೇಲೂರು ಭಾಗದವರಾಗಿದ್ದು ಭಾರತದ ರಾಷ್ಟ್ರೀಯ ಚಳವಳಿಯಲ್ಲಿ ತಮ್ಮದೇ ಆದ ಪಾತ್ರವನ್ನು ನಿರ್ವಹಿಸಿ ರಾಷ್ಟ್ರಮಟ್ಟದ ಚಳವಳಿಯಲ್ಲಿ ಗುರುತಿಸಿಕೊಂಡಿದ್ದಾರೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರ ಸಮಕಾಲೀನರಾಗಿದ್ದು ಹಾಸನಕ್ಕೆ ಮಹಾತ್ಮ ಗಾಂಧೀಜಿಯವರು ಬೇಟಿ ನೀಡಿದಾಗ ಅವರ ಭಾಷಣದಿಂದ ಪ್ರಭಾವಿತರಾಗಿ ಚಳವಳಿಗೆ ಧುಮುಕಿದರು. ೧೯೩೦ ರಿಂದ ಗೊರೂರು ಭಾಗದ ಚಳವಳಿಯ ಸಂಘಟಕರಲ್ಲಿ ಪ್ರಮುಖ ಪಾತ್ರ ವಹಿಸಿದರು. ಅವರೇ ಚಳವಳಿಯನ್ನು ಕುರಿತು ಹೀಗೆ ಬರೆದಿದ್ದಾರೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕ ಪ್ರಮುಖ ಪಾತ್ರವನ್ನು ವಹಿಸಿತು. ಟಿಪ್ಪುವಿನ ಮರಣಾನಂತರ ಕರ್ನಾಟಕದ ವಿವಿಧ ಭಾಗಗಳಲ್ಲಿ ಅನೇಕ ಸಶಸ್ತ್ರ ಹೋರಾಟಗಳು ೧೮೫೭ ರವರೆಗೆ ನಡೆದವು. ಆದರೆ ಅವುಗಳಿಂದ ಸ್ವಾತಂತ್ರ್ಯ ಪಡೆಯಲು ಸಾಧ್ಯವಾಗಲಿಲ್ಲ ೧೮೫೭ರ ಸಿಪಾಯಿದಂಗೆ ಅಥವಾ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಂತರ ೧೮೮೫ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಯಿತು. ಕರ್ನಾಟಕದಲ್ಲಿಯೂ ಅಂತಹ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಯಿತು. ಕರ್ನಾಟಕದಲ್ಲಿಯೂ ಅಂತಹ ರಾಷ್ಟ್ರೀಯ ಹೋರಾಟದ ಚಳವಳಿಗಳು ಆರಂಭವಾದವು. ೧೯೦೫ರಲ್ಲಿ ಬಂಗಾಳ ವಿಭಜನೆಯ ವಿರುದ್ಧ ತೀವ್ರ ಸ್ವರೂಪದ ಚಳವಳಿ ಆರಂಭವಾದವು. ೧೯೦೫ರಲ್ಲಿ ಧಾರವಾಡದಲ್ಲಿ ಪ್ರತಿಭಟನಾ ಸಭೆಯೊಂದು ನಡೆಯಿತು. ಕಾಂಗ್ರೆಸ್ ಚಟುವಟಿಕೆಗಳು ಉಗ್ರ ಸ್ವರೂಪವನ್ನು ತಾಳಿದವು. ಬಾಲಗಂಗಾಧರತಿಲಕ್‌ರವರು ೧೯೦೫ರಲ್ಲಿ ಬಳ್ಳಾರಿಗೂ, ೧೯೦೫ರಲ್ಲಿ ಬೆಳಗಾವಿಗೂ ಭೇಟಿ ಕೊಟ್ಟು ಜನರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಮೂಡಿಸಿದರು. ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಸ್ವದೇಶಿ ವಸ್ತುಗಳನ್ನು ಬಳಸಬೇಕೆಂದು ಮನವಿ ಮಾಡಿಕೊಂಡರು. ಬಂಗಾಳ ವಿಭಜನೆಯ ನಂತರ

ಹಾಸನ ಜಿಲ್ಲೆಯಲ್ಲಿಯೂ ವಿದೇಶಿ ವಸ್ತುಗಳ ಬಹಿಷ್ಕಾರ ಚಳವಳಿ ಆರಂಭವಾಯಿತು. ಹಾಸನದ ವಕೀಲರು ಸಭೆಗಳನ್ನು ನಡೆಸಿ ಬ್ರಿಟಿಷರ ವಿರುದ್ಧ ನಿರ್ಣಯಗಳನ್ನು ಸ್ವೀಕರಿಸಿ, ಪೂರ್ಣ ಸ್ವದೇಶಿಯ ಪ್ರತಿಜ್ಞೆಯನ್ನು ಕೈಗೊಳ್ಳಲಾಯಿತು. ೧೯೦೮ರಲ್ಲಿ ಬಾಲಗಂಗಾಧರ ತಿಲಕ್‌ರವರಿಗೆ ಆರು ವರ್ಷಗಳ ಕಠಿಣ ಸೆರೆಮನೆ ಶಿಕ್ಷೆ ನ್ಯಾಯ ಸಮ್ಮತವಲ್ಲ ಎಂದು ನಿರ್ಣಯ ಅಂಗೀಕರಿಸಲಾಯಿತು. ೧೯೨೦ರಲ್ಲಿ ಬಾಲಗಂಗಾಧರ ತಿಲಕ್‌ರವರು ಮರಣ ಹೊಂದಿದಾಗ ಹಾಸನದ ಹೈಸ್ಕೂಲ್ ವಿದ್ಯಾರ್ಥಿಗಳೆಲ್ಲರೂ ಪಾಠ ಶಾಲೆಯಿಂದ ಹೊರ ಬಂದು ತಿಲಕ್, ಗಾಂಧೀಜಿ ಮತ್ತು ಭಾರತ ಮಾತೆಯ ಭಾವಚಿತದೊಂದಿಗೆ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ನೇತೃತ್ವದಲ್ಲಿ ಊರಿನಲ್ಲೆಲ್ಲಾ ಮೆರವಣಿಗೆ ಮಾಡಲಾಯಿತು. ವಿದೇಶಿ ವಸ್ತುಗಳನ್ನು ಸುಡಲಾಯಿತು. ಜಿಲ್ಲೆಯಾದ್ಯಂತ ೧೯೩೦ ರಿಂದ ೧೯೮೭ರವರೆಗೆ ಚಳುವಳಿ ಉಗ್ರ ಸ್ವರೂಪವನ್ನು ತಾಳಿತು. ಹಾಸನ ಸ್ವಾತಂತ್ರ್ಯ ಚಳವಳಿಗಾರರ ಕೇಂದ್ರವಾಯಿತು. ಸ್ವಾತಂತ್ರ್ಯ ಹೋರಾಟಗಾರರಾದ ಡಾ|| ಹರ್ಡೀಕರ್ ಆರ್.ಆರ್. ದಿವಾಕರ್, ಗಂಗಾಧರ್‌ರಾವ್ ದೇಶಪಾಂಡೆ, ಆಲೂರು ವೆಂಕಟರಾಯರು, ಕಾರ್ನಾಡ್ ಸದಾಶಿವರಾಯರು ಮುಂತಾದವರ ಭಾಷಣಗಳಿಂದ ಪ್ರಭಾವಿತರಾಗಿದ್ದರು. ಹಾಸನ ಜಿಲ್ಲೆಯ ತಾಲ್ಲೂಕುಗಳಾದ ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ, ಸಕಲೇಶಪುರ, ಬೇಲೂರು, ಅರಕಲಗೂಡು ಮುಂತಾದ ಭಾಗಗಳಲ್ಲಿ ಚಳುವಳಿಗಳನ್ನು ನಡೆಸಲಾಯಿತು. ೧೯೪೨ ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಕರ ನಿರಾಕರಣ ಚಳವಳಿ, ಸಂತೆ ಸುಂಕ ವಿರೋಧ, ಹೆಂಡದ ಪಿಪಾಯಿಗಳ ಧ್ವಂಸ ಮುಂತಾದ ಕೃತ್ಯಗಳಲ್ಲಿ ಭಾಗವಹಿಸಿ ಸೆರಮನೆವಾಸ ಅನುಭವಿಸಿದರು.೧೯೪೭ ರಲ್ಲಿ ಅರಮನೆ ಸತ್ಯಾಗ್ರಹದಲ್ಲಿ ಭಾಗವಹಿಸಿ ಈ ಭಾಗದ ಪ್ರಮುಖ ನಾಯಕತ್ವ ವಹಿಸಿದರು. ಜೊತೆಗೆ ಹೆಚ್ ಎಸ್ ದೊರೆಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಹಾರನಹಳ್ಳಿ ರಾಮಸ್ವಾಮಿ ಮುಂತಾದವರೊಂದಿಗೆ ದೆಹಲಿಗೆ ನಿಯೋಗ ಹೋಗಿ ಗೃಹ ಮಂತ್ರಿ ಸರ್ದಾರ್ ವಲ್ಲಭಭಾಯಿ ಪಟೇಲರನ್ನು ಭೇಟಿ ಮಾಡಿ ಮೈಸೂರಿನಲ್ಲಿ ಜವಬ್ದಾರಿ ಸರ್ಕಾರದ ರಚನೆಗೆ ಹಕ್ಕು ಮಂಡಿಸಿದರು. ನಂತರ ಮೈಸೂರಿನಲ್ಲಿ ಜವಬ್ದಾರಿ ಸರ್ಕಾರ ಎಲ್ಲರ ಹೋರಾಟದ ಪ್ರತಿಫಲವಾಗಿ ಅಸ್ತಿತ್ವಕ್ಕೆ ಬಂದಿತು.



**ಶ್ರೀ ಡಿ.ಆರ್. ಕರೀಗೌಡರು:**

ಹಾಸನದ ಬೂವನಹಳ್ಳಿಯ ದೊಂದೇಗೌಡ ಮತ್ತು ಪುಟ್ಟಮ್ಮನವರ ಮಗನಾಗಿ ೧೯೦೯ ರಲ್ಲಿ ಜನಿಸಿದ ಶ್ರೀ ಡಿ.ಆರ್. ಕರೀಗೌಡರು ೧೯೨೭ ರಲ್ಲಿ ಮಹಾತ್ಮ ಗಾಂಧೀಜಿಯವರು ಹಾಸನಕ್ಕೆ ಬಂದಾಗ, ಸ್ವಯಂ ಸೇವಕರಾಗಿ ಅವರ ಸೇವೆ ಮಾಡಿದ ಶ್ರೀಯುತರು ಸರ್ಕಾರಿ ವೃತ್ತಿ ತ್ಯಾಗಮಾಡಿ, ಕಾಂಗ್ರೆಸ್ ಸೇರಿ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಜೈಲು ಸೇರಿದರು. ಮೈಸೂರು ರಾಜ್ಯದ "ಪ್ರಜಾ ಪ್ರತಿನಿಧಿ ಸಭೆ"ಯ ಶಾಸಕರಾಗಿ ಹಾಸನ ಜನತೆಯನ್ನು ಪ್ರತಿನಿಧಿಸಿದ್ದ ಗೌಡರು ನಂತರ ರಾಜ್ಯ ವಿಧಾನ ಸಭೆ ಸದಸ್ಯರಾಗಿದ್ದರು. ಹಾಸನ ಜಿಲ್ಲಾ ಸಹಕಾರಿ ಬ್ಯಾಂಕ್ ಅಧ್ಯಕ್ಷರಾಗಿ, ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿಗಳಾಗಿ ಸೇವೆ ಸಲಿಸಿದ ಗೌಡರು ಶ್ರೀಮತಿ ನಾರಾಯಣಿ ಅಮ್ಮನವರ ಗ್ರಾಮಾಂತರ ಮಕ್ಕಳ ವಿದ್ಯಾದಾನದ ಹಂಬಲದಿಂದ ಪ್ರೇರಿಪಿತರಾಗಿ ೧೯೬೩ ರಲ್ಲಿ ಬೂವನಹಳ್ಳಿ ಶ್ರೀ ಚನ್ನಕೇಶವ ಸ್ವಾಮಿ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿ ತಮ್ಮ ಜೀವಿತಾವಧಿಯ ಪೂರ್ಣ ಅಹರ್ನಿತ ದುಡಿದರು. ಇಂದು ಹಾಸನ ನಗರದಲ್ಲೂ ಶಾಖೆಗಳಿದ್ದು ಬೃಹತ್ ಸಂಸ್ಥೆಯಾಗಿ ಬೆಳೆದು ಸಹಸ್ರಾರು ಮಕ್ಕಳ ವಿದ್ಯಾಭಿವೃದ್ಧಿಗೆ ಕಾರಣವಾಗಿದೆ.

ಡಿ.ಆರ್. ಕರೀಗೌಡರ ತಂದೆ ದೊಂದೇಗೌಡರು ಡಿ.ಆರ್ ಎಂದರೆ ದೊಂದೇಗೌಡ ರೆಡ್ಡಿ ಕರೀಗೌಡ ಎಂದು. ಇವರ ವಂಶಸ್ಥರು ಹಲವು ತಲೆಮಾರುಗಳ ಹಿಂದೆ ತೆಲುಗು ನಾಡಿನಿಂದ ವಲಸೆ ಬಂದು ಬೂವನಹಳ್ಳಿಯಲ್ಲಿ ನೆಲೆಸಿ, ಇವರ ವಂಶಸ್ಥರೊಬ್ಬರ ಹೊಯ್ಸಳ ಸಾಮ್ರಾಜ್ಯದ ನಿಕಟ ವರ್ತಿಗಳಾಗಿದ್ದು ಪ್ರಭು ಬಿಟ್ಟಿದೇವನು, ವೈಷ್ಣವ ಧರ್ಮವನ್ನು ಸ್ವೀಕಾರ ಮಾಡಿದಂದು ವೈಷ್ಣವ ಪಂತವನ್ನು ಸ್ವೀಕರಿಸಿ, ಕೇಶವನ ಭಕ್ತರೆಂದೂ ಇವರ ಮನೆತನದವರನ್ನು ಈಗಲೂ ರೆಡ್ಡಿ ಮನೆತನದವರೆಂದು ಕರೆಯುವುದು ವಾಡಿಕೆ.

ಶ್ರೀಯುತರು ಗ್ರಾಮಾಂತರ ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತುಂಬಾ ಸಹಾಯ ಮಾಡುತ್ತಿದ್ದರು. ತೀರಾ ಬಡ ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲಿಯೇ ಊಟ ಹಾಕಿ ವಿದ್ಯಾಭ್ಯಾಸಕ್ಕೆ ತುಂಬಾ ಪ್ರೋತ್ಸಾಹ ಕೊಟ್ಟರು. ಸಾರ್ವಜನಿಕ ಸೇವೆಗೆ ಟೊಂಕ ಕಟ್ಟಿ ದುಡಿಯುತ್ತಿದ್ದ ಗೌಡರು ೧೯೨ ರಲ್ಲಿ ಇಹಲೋಕ ತ್ಯಜಿಸಿದರು.

## ಹಾರನಹಳ್ಳಿ ರಾಮಸ್ವಾಮಿ

ರಾಷ್ಟ್ರೀಯ ಹೋರಾಟದ ಲಕ್ಷೋಪಲಕ್ಷ ಜನರ ಪ್ರವಾಹದಲ್ಲಿ ಕನ್ನಡ ನಾಡಿನಿಂದಲೂ ಸಹಸ್ರಾರು ಸಂಖ್ಯೆಯ ಜನ ಭಾಗವಹಿಸಿದ್ದರು. ಹೀಗಾಗಿ ರಾಷ್ಟ್ರೀಯ ಚಳವಳಿ ಮತ್ತು ಏಕೀಕರಣ ಚಳವಳಿ ಒಂದೇ ನಾಣ್ಯದ ೨ ಮುಖಗಳಿದ್ದಂತೆ. ಹೀಗೆ ಎರಡರಲ್ಲೂ ಸ್ವಯಂ ಸ್ಫೂರ್ತಿಯಿಂದ ಅನೇಕ ಮಂದಿ ಕನ್ನಡಿಗರು ತ್ಯಾಗ ಬಲಿದಾನಗಳನ್ನು ನಾಡು ನುಡಿಗೆ ಅರ್ಪಿಸಿ, ಭಾರತ ಮಾತೆಯ ಬಂಧ ವಿಮೋಚನೆಗೆ ಮತ್ತು ಅಖಂಡ ಕರ್ನಾಟಕ ನಿರ್ಮಾಣಕ್ಕೆ ಕಾರಣರಾಗಿದ್ದಾರೆ. ಇಂತಹ ಮಹಾನ್ ಚೇತನಗಳಲ್ಲಿ ಅಪ್ಪಟ ಗಾಂಧಿವಾದಿ, ಸ್ವಾತಂತ್ರ್ಯ ಹೋರಾಟಗಾರರಾದ ಹಾರನಹಳ್ಳಿ ರಾಮಸ್ವಾಮಿಯವರು ಒಬ್ಬರು. ಶಿಕ್ಷಣ ಹಾಗೂ ಕಾನೂನು ಕ್ಷೇತ್ರದಲ್ಲಿ ಇವರ ಸೇವೆ ಸ್ಮರಣೀಯವಾದುದು.

ರಾಮಸ್ವಾಮಿಯವರು ಹುಟ್ಟಿದ್ದು ಹಾರನಹಳ್ಳಿಯಾದರೂ ಬೆಳೆದದ್ದು, ನೆರೆಯ ಸುಮಾರು ೨೦ ಮನೆಗಳ ಸಣ್ಣ ಗ್ರಾಮವಾದ ಕಬ್ಬೂರಹಳ್ಳಿ.ತಂದೆ ಅನಂತರಾಮಯ್ಯ, ತಾಯಿ ಭವಾನಮ್ಮ, ಕಲ್ಯಾಡಿ ಶ್ಯಾನುಭೋಗ ರಂಗಪ್ಪನವರ ಮಗಳು. ಐದು ಜನ ಅಣ್ಣ ತಮ್ಮಂದಿರಲ್ಲಿ ರಾಮಸ್ವಾಮಿಯವರು ಮಧ್ಯದವರು. ಪ್ರಾಥಮಿಕ ಶಾಲೆಗೆ ಸೇರಿದ್ದು, ತಾಯಿಯ ತವರುಮನೆ ಕಲ್ಯಾಡಿಯಲ್ಲಿ. ಅನಂತರ ಮಾಧ್ಯಮಿಕ ಶಾಲೆಗೆ ಹಾರನಹಳ್ಳಿಗೆ ಹೋದರು.

ರಾಮಸ್ವಾಮಿಯವರಿಗೆ ರಾಷ್ಟ್ರಪ್ರೇಮದ ಕಿಚ್ಚು ಮನೆಯಿಂದಲೇ ಆರಂಭವಾಯಿತು. ತಾತ ರಂಗಪ್ಪನವರ ಪ್ರಭಾವ ಮೊಮ್ಮಗನ ಮೇಲೆಯಿತ್ತು. ರಂಗಪ್ಪನವರು ಗಾಂಧೀಜಿಯವರ ಪ್ರಭಾವಕ್ಕೊಳಗಾಗಿದ್ದರು. ತಾತ ರಂಗಪ್ಪನವರು ಮೊಮ್ಮಗನ ಮುಂದೆ ಆಗಾಗ್ಗೆ ಕವಿ ಮಹಲಿಂಗನ ಕಾಲಜ್ಞಾನದ ಪದಗಳನ್ನು ಹೇಳಿಕೊಡುತ್ತಿದ್ದರು. ಅದೇನೆಂದರೆ "ಪರಂಗಿಯವರು ಚಾಪೆ ಸುತ್ತಿಕೊಂಡು ಹೋಗುವರಣ್ಣಾ ...." ಎಂಬುದು. ಈ ಪದ ಮೊಮ್ಮೊಗನ ಮೇಲೆ ಬಹಳ ಪರಿಣಾಮ ಬೀರಿತು. ಪ್ರೌಢಶಾಲ ಶಿಕ್ಷಣ ತಿಪಟೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆಯಿತು. ಆಗ ಸ್ವಾತಂತ್ರ್ಯ ಚಳವಳಿಯ ಪರ್ವಕಾಲ. ಈ ಸಂದರ್ಭದಲ್ಲಿಯೇ ಮಹಾತ್ಮ ಗಾಂಧೀಜಿಯವರ ಆಪ್ತರಾಗಿದ್ದ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಒಂದು ದೊಡ್ಡ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಆಗ ಅವರು ಜನತೆಯನ್ನುದ್ದೇಶಿಸಿ ಮಾತನಾಡಿದರು. ಇಡೀ ಭಾರತದ ಜನತೆ ಒಂದು ಸಲ ಉಗುಳಿ ಬಿಟ್ಟರೆ ಬ್ರಿಟಿಷರು ಅದರಲ್ಲಿ ತೇಲುಹೋಗುತ್ತಾರೆ ಎಂದು ಹೇಳಿದ ಮಾತು ರಾಮಸ್ವಾಮಿಯವರಲ್ಲಿ ಸಿಂಹಪಾಲು ಶಕ್ತಿಯನ್ನು ಹುಟ್ಟುಹಾಕಿತ್ತು.

ಡಿ.ವಿ. ರಾಮಸ್ವಾಮಿ, ಮೈಸೂರು ಸಂಸ್ಥಾನದ ಪ್ರಮುಖ ನಾಯಕರಾಗಿದ್ದು, ಕಬ್ಬೂರಹಳ್ಳಿಯ ಪಕಕ್ಕ ಒಡ್ಡರಹಳ್ಳಿಯ ಪ್ರಮುಖ ವ್ಯಕ್ತಿ. ಜೊತೆಗೆ ವಿದ್ಯಾವಂತ ಮತ್ತು ಸ್ವಾತಂತ್ರ್ಯ ಚಳವಳಿಯ ಹರಿಕಾರರಾಗಿದ್ದರು. ಇವರು ಸಮಯವಿದ್ದಾಗಲೆಲ್ಲಾ ನೆರೆಯ ರಾಮಸ್ವಾಮಿಯವರ ಮನೆಗೆ ಭೇಟಿನೀಡಿ, ಅವರ ಜಗುಲಿಯ ಮೇಲೆ ಕುಳಿತು ಹುಡುಗರನ್ನೆಲ್ಲಾ ಕೂರಿಸಿಕೊಂಡು ದೇಶದಲ್ಲಿ ನಡೆಯುತ್ತಿದ್ದ ಚಳವಳಿಗಳು, ಗಾಂಧಿ ವಿಚಾರ, ಇವೇ ಮೊದಲಾದವುಗಳನ್ನು ಹೇಳುತ್ತಿದ್ದರು. ರಾಮಸ್ವಾಮಿಗಳ ಕೈಗೆ ಅಮೇರಿಕಾದ ಖ್ಯಾತ ಲೇಖಕ ವಿಲ್‌ಡುರಾಂಟ್ ಬರೆದ ಪುಸ್ತಕವೊಂದನ್ನು ನೀಡು ಓದುವಂತೆ ತಿಳಿಸಿದರು.ಈ ಪುಸ್ತಕದಲ್ಲಿ ಭಾರತದ ಸ್ವಾತಂತ್ರ್ಯ ಚಳವಳಿಯ ನೈಜ ಚಿತ್ರಣವಿತ್ತು. ಈ ಅಂಶಗಳು ಹಾರನಹಳ್ಳಿಯವರ ಮೇಲೆ ಅಗಾಧ ಪರಿಣಾಮ ಬೀರಿ ದೇಶಕ್ಕಾಗಿ ಪ್ರಾಣತ್ಯಾಗ ಸಿದ್ಧರಾಗಬೇಕೆಂಬ ಸಂಕಲ್ಪ ಮಾಡಿದರು.

೧೯೩೮ ರಲ್ಲಿ ಮೈಸೂರು ಕಾಂಗ್ರೆಸ್ ಅಸ್ತಿತ್ವಕ್ಕೆ ಬಂದು ಅದರ ಪ್ರಥಮ ಅಧಿವೇಶನವನ್ನು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ಆಯೋಜಿಸಲಾಗಿತ್ತು. ಟಿ. ಸಿದ್ದಲಿಂಗಯ್ಯ ಅವರ ಮೊದಲ ಅಧ್ಯಕ್ಷರಾಗಿದ್ದರು.ಈ ಸಂದರ್ಭದಲ್ಲಿಯೇ ಹಾರನಹಳ್ಳಿಯವರ ನೇತೃತ್ವದಲ್ಲಿ ತಿಪಟೂರಿನ ಸಭೆ ಹಾಗೂ ಮೆರವಣಿಗೆಗಳನ್ನು ನಡೆಸಲಾಗಿತ್ತು. ಅಂದಿನಿಂದಲೇ ಖಾದಿ ಹಾಗೂ ಸ್ವದೇಶಿ ಚಳುವಳಿ ಅರಂಭವಾದವು. ಬೆಳಗಾವಿಯಲ್ಲಿ ಕಾನೂನು ವಿದ್ಯಾರ್ಥಿಯಾಗಿದ್ದಾಗ, ಹಾರನಹಳ್ಳಿಯವರು ನಾಗರಿಕ ಶಿಬಿರ ಸಂಘಟಿಸಿ, ನಾಡಿನ ನಾನಾ ನಾಯಕರನ್ನು ಕರೆಸಿ, ಭಾಷಣಗಳನ್ನು ಏರ್ಪಡಿಸಿ, ಇಡೀ ಬೆಳಗಾವಿ ಜಿಲ್ಲೆಯಲ್ಲಿ ಜನಜಾಗೃತಿ ಕಾರ್ಯವನ್ನು ಮಾಡಿದರು.

ಹಾಸನ ತಾಲ್ಲೂಕು ಸಾಲಗಾಮೆ ಹೋಬಳಿ ಹಾಗೂ ಅರಸೀಕೆರೆ ತಾಲ್ಲೂಕಿನ ಹಾರನಹಳ್ಳಿ ಹೋಬಳಿಯ ವಿಶಾಲ ಅರಣ್ಯ ಪ್ರದೇಶದ ೪೦ ಹಳ್ಳಿಗಳು ಇವರ ಕಾರ್ಯ ಕ್ಷೇತ್ರವಾಯಿತು. ಈ ಹಳ್ಳಿಗಳನ್ನು ಸ್ವತಂತ್ರ್ಯ ಭಾರತವೆಂದು ಘೋಷಿಸಿಬಿಟ್ಟರು. ಇವುಗಳಿಂದ ಸರ್ಕಾರಕ್ಕೆ ಕಂದಾಯ

ಹೋಗುವಂತಿರಲಿಲ್ಲ. ಸರ್ಕಾರ ಇವರಿಗೆ "ಕಂಡಲ್ಲಿ ಗುಂಡಿಕ್ಕಿ" ಎಂಬ ಆದೇಶವನ್ನು ನೀಡಿತು. ನಂತರ ಪೋಲಿಸರ ಕೈಗೆ ಸಿಕ್ಕಿ ಮೂರು ತಿಂಗಳ ಸೆರೆವಾಸ ಅನುಭವಿಸಿದರು.

ಭಾರತ ದೇಶಕ್ಕೆ ೧೯೪೭ ರ ಆಗಸ್ಟ್ ೧೫ ರಂದು ಸ್ವಾತಂತ್ರ್ಯ ಬಂದಿತು. ಆದರೆ ಮೈಸೂರು ಸಂಸ್ಥಾನಕ್ಕೆ ಸ್ವಾತಂತ್ರ್ಯ ಬರಲಿಲ್ಲ. ಹೀಗಾಗಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ಅನಿವಾರ್ಯವಾಯಿತು. ಮೈಸೂರು ಸಂಸ್ಥಾನದಲ್ಲಿ ಯುವನಾಯಕರೆಲ್ಲಾ ಕೂಡಿಕೊಂಡು ಅರಸೀಕೆರೆಯಲ್ಲಿ "ಕರ್ನಾಟಕ ಯುವಕ ಪರಿಷತ್" ರಚಿಸಿಕೊಂಡರು. ಈ ಸಮಿತಿಯಲ್ಲಿ ಹಾರನಹಳ್ಳಿಯವರು ಒಬ್ಬರಾಗಿದ್ದರು. ಕರ್ನಾಟಕ ರಾಜ್ಯ ರಚನೆಗಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದು ಮತ್ತು ಕರ್ನಾಟಕ ರಾಜ್ಯ ರಚನೆಯ ಅಹವಾಲುಗಳನ್ನು ಹೊತ್ತು ದೆಹಲಿಗೆ ಯುವಕರ ನಿಯೋಗವೊಂದನ್ನು ಕಳುಹಿಸುವ ನಿರ್ಣಯ ಮಾಡಲಾಯಿತು. ಈ ನಿಯೋಗದಲ್ಲಿ ಹಾರನಹಳ್ಳಿ ರಾಮಸ್ವಾಮಿಗಳು ಸಹ ಇದ್ದರು. ದೆಹಲಿಯಲ್ಲಿ ನೆಹರು, ಡಾ॥ ಬಾಬುರಾಜೇಂದ್ರ ಪ್ರಸಾದ್, ಸರ್ದಾರ್ ಪಟೇಲರನ್ನು ಭೇಟಿ ಮಾಡಿ ಕನಾಟಕ ರಾಜ್ಯ ರಚನೆಗೆ ನೆರವಾಗಬೇಕೆಂದು ಮನವಿ ಮಾಡಿಕೊಂಡರು.

ದೆಹಲಿಯಿಂದ ಬಂದೊಡನೆ ಅರಸೀಕೆರೆಯಲ್ಲಿ ಸರ್ವಪಕ್ಷ ಸಭೆ ಕರೆಯಲಾಯಿತು. ಕರ್ನಾಟಕ ರಾಜ್ಯ ರಚನೆಗೆ ಹಲವಾರು ಶಕ್ತಿಗಳು ವಿರೋಧ ವ್ಯಕ್ತಪಡಿಸಿದರೂ ರಾಮಸ್ವಾಮಿಗಳ ಗುಂಪು ತಮ್ಮ ಪ್ರಯತ್ನ ನಿಲ್ಲಿಸಲ್ಲಿಲ್ಲ. ೧೯೫೧ರಲ್ಲಿ ಹಾರನಹಳ್ಳಿಯವರು 'ಸಮೃದ್ಧ ಕರ್ನಾಟಕ' ಪುಸ್ತಕವನ್ನು ಪ್ರಕಟಿಸಿ, ಅದರಲ್ಲಿ ರಾಜ್ಯ ರಚನೆಯಿಂದಾಗಿ ಲಾಭವನ್ನು ಕುರಿತು ವಿವರಿಸಿದರು.

ಪೊಟ್ಟಿ ಶ್ರೀರಾಮುಲು ಅವರ ಮರಣದಿಂದ ಪ್ರತ್ಯೇಕ ಆಂಧ್ರಪ್ರದೇಶದ ರಚನೆಗೆ ಕೇಂದ್ರ ಸರ್ಕಾರ ತಾತ್ವಿಕ ಒಪ್ಪಿಗೆಯನ್ನು ನೀಡಿತು. ಈ ಹಿನ್ನೆಲೆಯಲ್ಲಿಯೆ ೧೯೫೩ರ ಜನವರಿಯಲ್ಲಿ ಹೈದರಾಬಾದಿನ ನಾನಾಲ್‌ನಗರದಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧೀವೇಶನದಲ್ಲಿ ಹಾರನಹಳ್ಳಿಯವರು ತಮ್ಮ ಮಾತಿನಿಂದ ರಾಷ್ಟ್ರನಾಯಕರಿಗೆ ಚುರುಕು ಮುಟ್ಟಿಸಿ, ಹೋರಾಟ ನಿರ್ಣಾಯಕ ಹಂತ ತಲುಪುವಂತೆ ಮಾಡಿದರು. ಹನುಮಂತಯ್ಯನವರ ಬಹಿರಂಗ ಬೆಂಬಲವೂ ದೊರೆಯುವಂತೆ ಮಾಡಲು ಹಾರನಹಳ್ಳಿಯವರ ಮಾತುಗಳೇ ಕಾರಣವಾಗಿದ್ದವು.



ಹನುಮಂತಯ್ಯನವರೆ, ರಾಜ್ಯ ರಚನೆ ಆಗಿಯೇ ಆಗುತ್ತದೆ. ನೀವು ನಾಯಕತ್ವ ವಹಿಸಬೇಕು, ಇತಿಹಾಸದಲ್ಲಿ ನಿಮ್ಮ ಹೆಸರು ಶಾಶ್ವತವಾಗುತ್ತದೆ ಎಂಬ ಮಾತುಗಳನ್ನಾಡಿ ಹುರಿದುಂಬಿಸಿದರು.

ಮೈಸೂರಿನ ಲಕ್ಷ್ಮಿನರಸು ಎಂಬುವರ ಮನೆಯಲ್ಲಿ ನಡೆದ ಟೀ ಪಾರ್ಟಿಯಲ್ಲಿ ಪಂಡಿತ್ ನೆಹರು ರವರನ್ನು ಒಳಗೊಂಡಂತೆ ಕಾಂಗ್ರೆಸ್‌ನ ಎಲ್ಲಾ ಸದಸ್ಯರು, ನಾಯಕರು ಬಂದಿದ್ದರು. ಅಲ್ಲಿ ಹಾರನಹಳ್ಳಿಯವರು ಕಂಡ ನೆಹರುರವರು ಹನುಮಂತಯ್ಯನವರ ಹೆಗಲ ಮೇಲೆ ಕೈಹಾಕಿ "ಹಾರನಹಳ್ಳಿಯವರನ್ನು ತೋರಿಸಿ, ಈತ ಜವಾಬ್ದಾರಿಯಿಲ್ಲದೇ ಮಾತನಾಡುತ್ತಾನೆಂದು ತಿಳಿದಿದ್ದ ಆದರೆ, ಹನುಮಂತಯ್ಯ ನಿನ್ನ ಮಾತು ನನ್ನ ನಿಲುವನ್ನೇ ಬದಲಿಸುವಂತೆ ಮಾಡಿತು" ಎಂದು ಹೇಳಿದರು.

ಹೈದರಾಬಾದ್ ಅಧಿವೇಶನದ ನಂತರ ನೆಹರೂರವರು ರಾಜ್ಯ ಪುನರ್ ವಿಂಗಡನಾ ಸಮಿತಿ ನೇಮಿಸಿದರು. ಈ ಆಯೋಗ ರಾಷ್ಟ್ರದಾದ್ಯಂತ ಪ್ರವಾಸ ಮಾಡಿ, ಲಕ್ಷಾಂತರ ಜನರ ಅಭಿಪ್ರಾಯ ಸಂಗ್ರಹಿಸಿ, ಕೇಂದ್ರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಕನ್ನಡ ನಾಡಿನ ಜನರ ಬಯಕೆಯಂತೆ ೧೯೫೬ರ ನವೆಂಬರ್ ೧ ರಂದು ವಿಶಾಲ ಮೈಸೂರು ರಾಜ್ಯ ಉದಯವಾಯಿತು. ಕೋಟ್ಯಾನು ಕೋಟಿ ಕನ್ನಡಿಗರ ಕನಸು ಅಂದು ನನಸಾಯಿತು.

ಹೀಗೆ ಕರ್ನಾಟಕ ಏಕೀಕರಣ ಚಳವಳಿಯ ಪ್ರತೀ ಹಂತದಲ್ಲಿಯೂ ಹಾರನಹಳ್ಳಿಯವರ ಶ್ರಮ ಕಾಳಜಿ, ಹೋರಾಟ ಸ್ಮರಣೀಯವಾಗಿದೆ. ಇವರ ಛಲ ಅಖಂಡ ಕರ್ನಾಟಕ ರಾಜ್ಯ ರಚನೆಗೆ ಕಾರಣವಾಗಿದ್ದು, ಏಕೀಕೃತಿ ಕರ್ನಾಟಕ ರಾಜ್ಯ ನಿರೂಪಕರಲ್ಲಿ ಒಬ್ಬರಾಗಿದ್ದಾರೆ ಎಂದು ಹೇಳಬಹುದು.

## ಛಲಬಿಡದ ಹಠವಾದಿ–ಅಭಿವೃದ್ಧಿಯ ಮಾಂತ್ರಿಕ– ಶ್ರೀ ಎಲ್.ಟಿ. ಕಾರ್ಲೆ

ರಾಷ್ಟ್ರ ಹಾಗೂ ರಾಜ್ಯ ಇತಿಹಾಸ ಹಾಗೂ ರಾಜಾಕೀಯಕ್ಕೆ ತನ್ನದೇ ಆದ ಶ್ರೇಷ್ಠ ಕೊಡುಗೆಯನ್ನು ನೀಡುತ್ತಾ ಬಂದಿರುವ ಹಾಸನ ಜಿಲ್ಲೆಯಲ್ಲಿ ಅನೇಕ ರಾಜಕೀಯ ಮುತ್ಸದಿಗಳ ಕರ್ಮಭೂಮಿಯಾಗಿದೆ. ರಾಷ್ಟ್ರಕ್ಕೆ ಪ್ರಧಾನಮಂತ್ರಿಯನ್ನು, ಶ್ರೇಷ್ಠ ಸಂಸದೀಯ ಪಟುಗಳನ್ನು ರಾಜ್ಯಕ್ಕೆ ದಕ್ಷನಾಯಕರುಗಳನ್ನು ನೀಡುತ್ತಾ ಬಂದಿದೆ. ಅಂತಹ ದಕ್ಷ ಹಾಗೂ ಪ್ರಾಮಾಣಿಕರಲ್ಲಿ

ಒಬ್ಬರು ಶ್ರೀ ಎಲ್.ಟಿ ಕಾರ್ಲೆಯವರು. ಇವರ ಮೂಲ ಹೆಸರು ತಿಮ್ಮೇಗೌಡ. ಹಾಸನ ತಾಲ್ಲೂಕು ಕಟ್ಟಾಯದ ಹೋಬಳಿಯ ಕುಗ್ರಾಮ ಕಾರ್ಲೆಯಲ್ಲಿ ಕೃಷಿಕ ಲಕ್ಷ್ಮೇಗೌಡ ಮತ್ತು ದೇವಮ್ಮನವರ ಜೇಷ್ಠ ಪುತ್ರರಾಗಿ ದಿನಾಂಕ: ೧೪.೧೨.೧೯೧೮ ರಂದು ಜನಿಸಿದರು. ಶ್ರೀ ತಿಮ್ಮೇಗೌಡರು ಎಲ್.ಟಿ. ಕಾರ್ಲೆ ಎಂಬ ನಾಮಾಂಕಿತದಿಂದ ಪ್ರಬುದ್ಧ ರಾಜಕಾರಣಿಯಾಗಿ ಪ್ರಕಾಶಮಾನಕ್ಕೆ ಬಂದಾಗ ತಮ್ಮ ಹುಟ್ಟೂರಿನ ಹೆಸರನ್ನು ಪ್ರಧಾನವಾಗಿರಿಸಿಕೊಂಡು ರಾಷ್ಟ್ರ ಮತ್ತು ರಾಜ್ಯ ಮಟ್ಟದ ಪ್ರಭಾವಿ ಕಾಂಗ್ರೆಸ್ ನಾಯಕರಾಗಿ ಜನಮನ್ನಣೆ ಪಡೆದರು. ಇವರು ೧೯೩೦ ರಿಂದ ಸಕ್ರಿಯವಾಗಿ ಜಿಲ್ಲೆಯ ಹಾಗೂ ರಾಜ್ಯದ ನಾಯಕರೊಂದಿಗೆ ಸೇರಿ ಅನೇಕ ಚಳವಳಿಗಳಲ್ಲಿ ಭಾಗವಹಿಸಿದರು.

ಎಲ್.ಟಿ. ಕಾರ್ಲೆಯವರು ಬೆಂಗಳೂರಿನಲ್ಲಿ ಬಿ.ಎಸ್.ಸಿ ವಿದ್ಯಾರ್ಥಿಯಾಗಿದ್ದಾಗಲೇ, ಸ್ವಾತಂತ್ರ್ಯ ಚಳವಳಿಗೆ ಧುಮುಕಿ ಪ್ರಚಂಡ ಹೋರಾಟ ನಡೆಸಿ, ಪೋಲಿಸಿನವರಿಗೆ ಸಿಂಹಸ್ವಪ್ನವೆನಿಸಿ, ಜೈಲು ಶಿಕ್ಷೆಗೊಳಗಾದರು. ಆ ಅವಧಿಯಲ್ಲಿ ಬಂದಿಖಾನೆಯಲ್ಲಿ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅನೇಕ ಧೀಮಂತ ನಾಯಕರ ನಿಕಟ ಸಂಪರ್ಕ ಬೆಳೆಸಿಕೊಂಡವರು ಇವರು.

ಶ್ರೀ ಕಾರ್ಲೆಯವರ ರಕ್ತದ ಕಣಕಣದಲ್ಲೂ ಭಾರತೀಯತೆ ತುಂಬಿತ್ತು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಶ್ರೀಯುತರು ಭಾರತಕ್ಕೆ ಸ್ವಾತಂತ್ರ್ಯ ಬಂದ ದಿನ ಆಗಸ್ಟ್ ೧೫ ರ ರಾತ್ರಿ ೧೨ ಗಂಟೆ ಕಳೆದು ಸ್ವಾತಂತ್ರ್ಯ ಘೋಷಣೆಯಾದಾಗ ಭಾರತ ಮಾತೆಯ ಮತ್ತು ಮಹಾತ್ಮ ಗಾಂಧಿಜಿಯವರ ಚಿತ್ರಕ್ಕೆ ಭಕ್ತಿಯಿಂದ ಪೂಜೆ ಸಲ್ಲಿಸಿ ಭಾರತದ ರಾಷ್ಟ್ರಧ್ವಜವನ್ನು ಅವರ ಮನೆಯ ಮೇಲೆ ಹಾರಿಸಿ ಭಾರತ ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದ ಮತ್ತು ಹೋರಾಡಿದ ನಾಯಕರುಗಳ ಹೆಸರನ್ನು ಹೇಳಿ ಜಯ ಘೋಷ ಹಾಕಿ, ನೆರೆದಿದ್ದವರಿಗೆಲ್ಲಾ ಸಿಹಿ ಹಂಚಿ ಚಿಕ್ಕ ಮಕ್ಕಳಂತೆ ಸಂಭ್ರಮಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ಬಂದರೂ, ಗೋವಾ, ಹೈದರಾಬಾದ್, ಮೈಸೂರು ರಾಜ್ಯಗಳು, ಭಾರತದ ಗಣತಂತ್ರಕ್ಕೊಳಪಡದೆ ಸ್ವತಂತ್ರ್ಯ ಆಳ್ವಿಕೆಯನ್ನು ಮುಂದುವರೆಸಿದ್ದವು. ಮೈಸೂರು ರಾಜರ ಆಳ್ವಿಕೆಯನ್ನು ಕೊನೆಗೊಳಿಸಿ ಸ್ವರಾಜ್ಯ ಸ್ಥಾಪನೆಗಾಗಿ ಹಮ್ಮಿಕೊಂಡ "ಮೈಸೂರು ಚಲೋ" ಚಳವಳಿಗಾಗಿ (೧೯೪೭ ರಲ್ಲಿ) ಜನರನ್ನು ಸಂಘಟಿಸಿ ಹಾಸನ ಜಿಲ್ಲೆಯ ನೇತೃತ್ವವನ್ನು ಶ್ರೀ ಕಾರ್ಲೆಯವರೇ ವಹಿಸಿ ಕಾಂಗ್ರೆಸ್ ಮುಂದಾಳುಗಳಲ್ಲೇ ಅಗ್ರರೆನಿಸಿದರು.



ಶ್ರೀ ಕಾರ್ಲೆಯವರು ಆರ್ಥಿಕವಾಗಿ ಜಾಗತಿಕ ಮಟ್ಟದ ಕೆಲವೇ ಮಂದಿಯಲ್ಲೊಬ್ಬರಾಗಿ ಬೆಳೆದಿರುವುದು ಅವರ ಸಾಮರ್ಥ್ಯದ ದ್ಯೋತಕ. "ಬ್ಲೆಸ್ಸಿಂಗ್ ಇನ್ ಡಿಸ್‌ಗೈಸ್" ಎಂದರೆ "ಒಮ್ಮೊಮ್ಮೆ ಕೆಟ್ಟದಾಗುವುದೂ ಒಳ್ಳೆಯದಕ್ಕೆ" ಎನ್ನುವ ನಾಣ್ನುಡಿ ಕಾರ್ಲೆಯವರು ದಿಟ್ಟ ನಿರ್ಧಾರ ಕೈಗೊಂಡು ಆರ್ಥಿಕವಾಗಿ ಕೈಗೆ ನಿಲುಕದಷ್ಟು ಎತ್ತರಕ್ಕೇರಿ ದಿನಾಂಕ ೨೭.೦೭.೧೯೯೮ ರಂದು ವಿಧಿವಶರಾದರು.

**ಶ್ರೀ ಕೆ.ಸಿ ಕರೀಗೌಡರು :**

ಶ್ರೀಯುತ ಕೆ.ಸಿ ಕರೀಗೌಡರು ಹಾಸನ ತಾಲ್ಲೂಕಿನ ಕಲ್ಲುಗುಡುಗನ ಹಳ್ಳಿಯಲ್ಲಿ ಶ್ರೀಕೆಂಡೇಗೌಡ–ಗಿಡ್ಡಮ್ಮ ದಂಪತಿಗಳ ಸುಪುತ್ರರಾಗಿ ದಿನಾಂಕ ೧೦.೦೫.೧೯೧೫ ರಂದು ಜನಿಸಿದರು. ಇವರು ಹುಟ್ಟಿದ ಊರಿನಲ್ಲಿ ಮತ್ತು ಮೊಸಳೆ ಹೊಸಹಳ್ಳಿಯಲ್ಲಿ ವ್ಯಾಸಂಗ ಮಾಡಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹಾಸನಕ್ಕೆ ಬಂದು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದ ಕರಿಗೌಡರು ಸ್ವಲ್ಪದಿವಸ ಶಿಕ್ಷಕರಾಗಿ ಕೆಲಸ ಮಾಡಿ ನಂತರ ರಾಜಕೀಯಕ್ಕೆ ಧುಮುಕಿ ೧೯೩೯ ರಲ್ಲಿ ಕಾಂಗ್ರೇಸ್ ಪಕ್ಷದ ಜೊತೆ ಗುರುತಿಸಿಕೊಂಡವರು. ಅನಂತರ ಗ್ರಾಮ ಪಂಚಾಯಿತಿ ಛೇರ್ಮನ್ ಆಗಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ (೧೯೩೯–೪೦) ೧೯೪೫–೧೯೪೯ ರವರೆಗೆ ಮೈಸುರು ಸರ್ಕಾರದ ಅಸೆಂಬ್ಲಿಯಲ್ಲಿ ಶಾಸಕರಾಗಿ ದುಡಿದರು. ೧೯೪೭ ರಲ್ಲಿ ಕರೀಗೌಡರಿಗೆ ಜೈಲು ಶಿಕ್ಷೆಯಾಯಿತು. ೧೯೪೭ ರಂದು ನಡೆದ ಸತ್ಯಾಗ್ರಹ ಚಳವಳಿಯಲ್ಲಿ ಭಾಗವಹಿಸಿದ್ದರು. ೧೯೪೨ ರಲ್ಲ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ್ದರು. ಹಾಸನ ತಾಲ್ಲೂಕು ಅಡ್ವೈಸ್ಸರಿ ಕಮಿಟಿಯಲ್ಲಿ ಮೆಂಬರ್ ಆಗಿ ಕಾರ್ಯ ನಿರ್ವಹಿಸಿದರು.

**ತಾಲ್ಲೂಕುವಾರು ಸ್ವಾತಂತ್ರ ಚಳುವಳಿ**

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕ ಪ್ರಮುಖ ಪಾತ್ರವನ್ನು ವಹಿಸಿತು. ಟಿಪ್ಪುವಿನ ಮರಣಾನಂತರ ಕರ್ನಾಟಕದ ವಿವಿಧ ಭಾಗಗಳಲ್ಲಿ

ಅನೇಕ ಸಶಸ್ತ್ರ ಹೋರಾಟಗಳು ೧೮೫೭ ರವರೆಗೆ ನಡೆದವು. ಕರ್ನಾಟಕದಲ್ಲಿಯೂ ಅಂತಹ ರಾಷ್ಟ್ರೀಯ ಹೋರಾಟದ ಚಳವಳಿಗಳು ಆರಂಭವಾದವು. ೧೯೦೫ರಲ್ಲಿ ಬಂಗಾಳ ವಿಭಜನೆಯ ವಿರುದ್ಧ ತೀವ್ರ ಸ್ವರೂಪದ ಚಳವಳಿ ಆರಂಭವಾದವು. ೧೯೦೫ರಲ್ಲಿ ಧಾರವಾಡದಲ್ಲಿ ಪ್ರತಿಭಟನಾ ಸಭೆಯೊಂದು ನಡೆಯಿತು. ಕಾಂಗ್ರೆಸ್ ಚಟುವಟಿಕೆಗಳು ಉಗ್ರ ಸ್ವರೂಪವನ್ನು ತಾಳಿದವು. ಬಾಲಗಂಗಾಧರತಿಲಕ್‌ರವರು ೧೯೦೫ರಲ್ಲಿ ಬಳ್ಳಾರಿಗೂ, ೧೯೦೫ರಲ್ಲಿ ಬೆಳಗಾವಿಗೂ ಭೇಟಿ ಕೊಟ್ಟು ಜನರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಮೂಡಿಸಿದರು. ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಸ್ವದೇಶಿ ವಸ್ತುಗಳನ್ನು ಬಳಸಬೇಕೆಂದು ಮನವಿ ಮಾಡಿಕೊಂಡರು. ಬಂಗಾಳ ವಿಭಜನೆಯ ನಂತರ ಹಾಸನ ಜಿಲ್ಲೆಯಲ್ಲಿಯೂ ವಿದೇಶಿ ವಸ್ತುಗಳ ಬಹಿಷ್ಕಾರ ಚಳವಳಿ ಆರಂಭವಾಯಿತು. ಹಾಸನದ ವಕೀಲರು ಸಭೆಗಳನ್ನು ನಡೆಸಿ ಬ್ರಿಟಿಷರ ವಿರುದ್ಧ ನಿರ್ಣಯಗಳನ್ನು ಸ್ವೀಕರಿಸಿ, ಪೂರ್ಣ ಸ್ವದೇಶಿಯ ಪ್ರತಿಜ್ಞೆಯನ್ನು ಕೈಗೊಳ್ಳಲಾಯಿತು. ೧೯೦೮ರಲ್ಲಿ ಬಾಲಗಂಗಾಧರ ತಿಲಕ್‌ರವರಿಗೆ ಆರು ವರ್ಷಗಳ ಕಠಿಣ ಸೆರೆಮನೆ ಶಿಕ್ಷೆ ನ್ಯಾಯ ಸಮ್ಮತವಲ್ಲ ಎಂದು ನಿರ್ಣಯ ಅಂಗೀಕರಿಸಲಾಯಿತು. ೧೯೨೦ರಲ್ಲಿ ಬಾಲಗಂಗಾಧರ ತಿಲಕ್‌ರವರು ಮರಣ ಹೊಂದಿದಾಗ ಹಾಸನದ ಹೈಸ್ಕೂಲ್ ವಿದ್ಯಾರ್ಥಿಗಳೆಲ್ಲರೂ ಪಾಠ ಶಾಲೆಯಿಂದ ಹೊರ ಬಂದು ತಿಲಕ್, ಗಾಂಧೀಜಿ ಮತ್ತು ಭಾರತ ಮಾತೆಯ ಭಾವಚಿತ್ರದೊಂದಿಗೆ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ನೇತೃತ್ವದಲ್ಲಿ ಊರಿನಲ್ಲೆಲ್ಲಾ ಮೆರವಣಿಗೆ ಮಾಡಲಾಯಿತು. ವಿದೇಶಿ ವಸ್ತುಗಳನ್ನು ಸುಡಲಾಯಿತು. ಜಿಲ್ಲೆಯಾದ್ಯಂತ ೧೯೩೦ ರಿಂದ ೧೯೪೭ರವರೆಗೆ ಚಳವಳಿ ಉಗ್ರ ಸ್ವರೂಪವನ್ನು ತಾಳಿತು. ಹಾಸನ ಸ್ವಾತಂತ್ರ್ಯ ಚಳವಳಿಗಾರರ ಕೇಂದ್ರವಾಯಿತು. ಸ್ವಾತಂತ್ರ್ಯ ಹೋರಾಟಗಾರರಾದ ಡಾ॥ ಹರ್ಡೀಕರ್ ಆರ್.ಆರ್. ದಿವಾಕರ್, ಗಂಗಾಧರ್‌ರಾವ್ ದೇಶಪಾಂಡೆ, ಆಲೂರು ವೆಂಕಟರಾಯರು, ಕಾರ್ನಾಡ್ ಸದಾಶಿವರಾಯರು ಮುಂತಾದವರ ಭಾಷಣಗಳಿಂದ ಪ್ರಭಾವಿತರಾಗಿದ್ದರು. ಹಾಸನ ಜಿಲ್ಲೆಯ ತಾಲ್ಲೂಕುಗಳಾದ ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ, ಸಕಲೇಶಪುರ, ಬೇಲೂರು, ಅರಕಲಗೂಡು ಮುಂತಾದ ಭಾಗಗಳಲ್ಲಿ ಚಳವಳಿಗಳನ್ನು ನಡೆಸಲಾಯಿತು.



**ಹಾಸನ ತಾಲ್ಲೂಕು**

ಹಾಸನ ತಾಲ್ಲೂಕಿನ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಜಿ. ಎಸ್. ಸಂಪತ್ ಅಯ್ಯಂಗಾರ್ ಮುಂತಾದವರು ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಹಿರಿಯ ಸ್ವಾತಂತ್ರ್ಯ ಹೋರಟಗಾರರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ನಾಯಕತ್ವದಲ್ಲಿ ವಿದೇಶಿ ವಸ್ತುಗಳನ್ನು ಸಂಗ್ರಹಿಸಿ ಹಾಸನದ ಬಂದಿದ್ದಾಗ ಅವರನ್ನು ಸತ್ಕರಿಸಲಾಯಿತು. ಗಾಂಧೀಜಿಯವರಿಂದ ಪ್ರಭಾವಿತರಾಗಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಗಾಂಧಿಯ ಹದಿನೆಂಟು ರಚನಾತ್ಮಕ ಕಾರ್ಯಗಳಲ್ಲಿ ಒಂದಾದ ಖಾದಿ ಕಾರ್ಯವನ್ನು ಹಮ್ಮಿ ಕೊಂಡರು. ೧೯೩೯ರಲ್ಲಿ ಎ.ಐ.ವಿ.ಐ.ಎ. ಶಾಖೆಯೊಂದನ್ನು ತೆರೆದು ಗಾಂಧೀಜಿಯವರ ಹದಿನೆಂಟು ಅಂಶದ ಕಾರ್ಯಕ್ರಮವನ್ನು ನಡೆಸಿದರು. ೧೯೪೨ರ ಚಲೇಜಾವ್ ಚಳವಳಿಯಲ್ಲಿ ಭಾಗವಹಿಸಿ ಬಂಧಿತರಾದಾಗ ೧೫ ತಿಂಗಳು ಕಾರಾಗೃಹ ವಾಸವನ್ನು ಅನುಭವಿಸಿದರು. ೧೯೪೭ರಲ್ಲಿ ಪ್ಯಾಲೇಸ್ ಚಲೋ ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸ ಅನುಭವಿಸಿದರು. ಅವರು ಸ್ವಾತಂತ್ರ್ಯ ಹೋರಾಟಗಾರ ರಾಗಿದ್ದಲ್ಲದೆ, ಸಾಹಿತಿಗಳು ಆಗಿದ್ದೂ ಅನೇಕ ಗ್ರಂಥಗಳನ್ನು ರಚಿಸಿದರು.

೧೯೪೭ರ 'ಅನಂತರ ರಾಷ್ಟ್ರೀಯ ಸಾಹಿತ್ಯ ಸಮಿತಿ' ಎಂಬ ಹೆಸರಲ್ಲಿ ರಾಷ್ಟ್ರೀಯ ಸಾಹಿತ್ಯ ಗ್ರಂಥಗಳನ್ನು ಪ್ರಕಟಿಸಿದರು. ೧೯೩೦ರಲ್ಲಿ 'ಭಾರತ ಸ್ವಾತಂತ್ರ್ಯ' ಎಂಬ ಹೆಸರಲ್ಲಿ ರಾಷ್ಟ್ರೀಯ ಸಾಹಿತ್ಯ ಜಾಗೃತಿಯ ಪುಸ್ತಕ ಗಾಂಧೀಜಿ, ಕಸ್ತೂರಿಬಾ, ಮೌಲಾನಾ ಅಜಾದ್, ಗ್ರಾಮ ಕೈಗಾರಿಕೆಗಳು ಪೂರ್ವ ಸ್ವದೇಶಿ ಮುಂತಾದ ಗ್ರಂಥಗಳನ್ನು ರಚಿಸಿದರು.

ಹಾಸನದ ಇನ್ನಿತರ ಸ್ವಾತಂತ್ರ್ಯ ಹೋರಾಟಗಾರರೆಂದರೆ, ಡಾ॥ ಹೆಚ್. ಕೆ. ಸತ್ಯನಾರಾಯಣ, ಹೆಚ್. ವೀರಬಸಪ್ಪ ಅಗ್ರಹಾರ್ ಕ್ರಾಸ್ ರೋಡ್ ಹಾಸನ, ಹೆಚ್. ಆರ್. ಸಂಜೀವಯ್ಯ ಕೃಷಿಕರು ನಿಟ್ಟೂರು, ಬಸವೇಗೌಡ ಕೂಲಿಕಾರರು, ಎನ್. ರಂಗನಾಥ್, ಮೂರ್ತಿ ಸ್ಟೂಡಿಯೋ ಹಾಸನ, ವಕೀಲರಾದ ಎಲ್. ಎಸ್. ಗೋಪಾಲಕೃಷ್ಣ ಶೆಟ್ಟಿ ಕೂಲಿಕಾರರು, ಚಿಕ್ಕಮಂಡಿಗನಹಳ್ಳಿ ಹಾಸನ, ಕಾಳಾಚಾರಿ ಕಮ್ಮಾರರು, ನಿಟ್ಟೂರು, ಹಾಸನ ತಾಲ್ಲೂಕು.

ಹಾಸನ ತಾಲ್ಲೂಕಿಗೆ ಸೇರಿದ ಇವರೆಲ್ಲರೂ ಖಾದಿಪ್ರಚಾರ, ಮದ್ಯಪಾನ ನಿರೋಧ, ಅಸ್ಪೃಶ್ಯತಾ ನಿವಾರಣೆ, ಚಲೇಜಾವ್ ಚಳವಳಿಯಲ್ಲಿ ಭಾಗವಹಿಸಿದ್ದರು. ಇವರೆಲ್ಲರೂ ರಾಜೇಂದ್ರ ಪ್ರಸಾದ್, ಮಹಾದೇವ ದೇಸಾಯಿ, ಡಾ. ಹರ್ಡೀಕರ್ ಆರ್. ಆರ್. ದಿವಾಕರ್ ಮುಂತಾದವರ ಭಾಷಣಗಳಿಂದ ಪ್ರಭಾವಿತರಾಗಿದ್ದರು. ಕಾಂಗ್ರೆಸ್‌ನ ಚಟುವಟಿಕೆಗಳಿಂದ ಜಿಲ್ಲೆಯಲ್ಲಿ ನಡೆಯುವ ಎಲ್ಲಾ ಚಳವಳಿಗಳಲ್ಲಿಯೂ ಭಾಗವಹಿಸಿದ್ದರು. ಬೆಂಗಳೂರು ಮತ್ತು ಹಾಸನದಲ್ಲಿ ಜೈಲು ಶಿಕ್ಷೆಯನ್ನು ಅನುಭವಿಸಿದ್ದರು. ಮೈಸೂರು ಚಲೋ ಚಳವಳಿಯಲ್ಲಿ ಭಾಗವಹಿಸಿದ್ದರು. ಹಾಸನದಲ್ಲಿ ಸ್ವಾತಂತ್ರ್ಯ ನಂತರ ತ್ರಿವರ್ಣ ಧ್ವಜಗಳನ್ನು ಹಾರಿಸಿದರು.

## ಅರಸೀಕೆರೆ ಸ್ವಾತಂತ್ರ್ಯ ಹೋರಾಟಗಾರರು

ಈ ತಾಲ್ಲೂಕಿನ ಹಾರನಹಳ್ಳಿ ರಾಮಸ್ವಾಮಿಯವರು ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ೧೯೩೦ ರಿಂದ ೧೯೪೭ ರವರೆಗೆ ಪ್ರತಿ ಚಳವಳಿಯಲ್ಲೂ ಭಾಗವಹಿಸಿದರು. ಮದ್ಯದ ಅಂಗಡಿಯ ಪಿಕೆಟಿಂಗ್ ನಡೆಸಿದರು. ಖಾದಿ ಪ್ರಚಾರ ಮಾಡಿದರು. ಶಿವಪುರ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿ ಅರಸೀಕೆರೆ ಇನ್ನಿತರ ಕಡೆಗಳಲ್ಲಿ ಚಳವಳಿಯನ್ನು ತೀವ್ರಗೊಳಿಸಿದರು. ಕರ್ನಾಟಕದ ಪ್ರಾಂತೀಯ ಕಾಂಗ್ರೆಸ್ ಸೇವಾದಳದ ದಂಡನಾಯಕರಾಗಿ ನೇಮಕಗೊಂಡಿದ್ದರು. ದೆಹಲಿಯಲ್ಲಿ ನಡೆದ ಕಾಂಗ್ರೆಸ್ ಸೇವಾದಳದ ತರಬೇತಿಯ ಒಂದು ತಿಂಗಳ ಶಿಬಿರದಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿ ಕಾಂಗ್ರೆಸ್ ಸ್ಥಾಪಿಸಿ ಪ್ರಥಮ ಸಮ್ಮೇಳನವನ್ನು ಅರಳೇಪೇಟೆ ಕಾಂಗ್ರೆಸ್ ಭವನ ನಡೆಸಿದರು. ಸಮ್ಮೇಳನಗಳು ಬೆಳಗಾವಿ, ಧಾರವಾಡ, ಶಿವಮೊಗ್ಗಗಳಲ್ಲಿ ನಡೆದವು. ಆ ಸಮ್ಮೇಳನಗಳ ಪ್ರಧಾನ ಕಾರ್ಯದರ್ಶಿಯಾಗಿ ಪ್ರಮುಖ ಪಾತ್ರವನ್ನು ಹಾರನಹಳ್ಳಿಯ ರಾಮಸ್ವಾಮಿಯವರೇ ವಹಿಸಿದ್ದರು. ೧೯೪೭ರಲ್ಲಿ ಸೇವಾದಳದ ದಂಡನಾಯಕರಾಗಿ ಡಾ. ಹರ್ಡೀಕರ್‌ರವರೊಡನೆ ದೆಹಲಿಗೆ ಹೋಗಿ ಗಾಂಧೀಜಿಯವರನ್ನು ಭೇಟಿಯಾಗಿದ್ದರು. ೧೯೪೭ ರಲ್ಲಿ ಸೇವಾದಳದ ದಂಡನಾಯಕರಾಗಿ ೧೯೪೭ರಲ್ಲಿ ಮೈಸೂರಿ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರದ



ಚಳವಳಿ ಆರಂಭವಾದಾಗ ಹಾಸನವನ್ನು ಕೇಂದ್ರವಾಗಿಟ್ಟು ಕೊಂಡು ತೀವ್ರವಾದ ಚಳವಳಿ ನಡೆಸಿದರು.

ಅರಸೀಕೆರೆಯ ಇತರೆ ಸ್ವಾತಂತ್ರ್ಯ ಯೋಧರೆಂದರೆ ದಿವಂಗತ ಬಿ.ಆರ್. ಭಕ್ಕಪ್ಪನವರು ೧೯೩೯ರಿಂದ ೧೯೪೨ರವರೆಗೆ ಹೋರಾಟವನ್ನು ನಡೆಸಿ ಜೈಲು ವಾಸ ಅನುಭವಿಸಿದ್ದರು.ದಿವಂಗತ ಬಿ. ನಂಜಪ್ಪ, ಬಾಗೀವಾಳು, ೧೯೪೨ರಲ್ಲಿ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿ ೮ ತಿಂಗಳ ಶಿಕ್ಷೆ ಅನುಭವಿಸಿದರು. ದಿವಂಗತ ಎ. ವಿ.ವೆಂಕಟರಾಮಯ್ಯ ದಿವಂಗತ ಮುದ್ದು ರಂಗನಾಯಕರು, ದಿವಂಗತ ಹೆಚ್. ರಾಮಯ್ಯ, ದಿವಂಗತ ಎಸ್. ಸಿದ್ದಣ್ಣಯ್ಯ, ವಿಶ್ವನಾಥಶೆಟ್ಟರು, ಎ.ಕೆ. ಚನ್ನಕೇಶವ ಶರ್ಮರು, ಅನಿವಾಳದ ನಂಜಯ್ಯ, ಜೆ.ಎನ್. ಗುಂಡಪ್ಪ, ಜಾವಗಲ್ಲಿನ ನಾಗಭೂಷಣ, ಅರಸೀಕೆರೆಯ ಕಾಶಿ ವಿಶ್ವನಾಥ ಶೆಟ್ಟರು, ಹಾರನಹಳ್ಳಿ ಸಣ್ಣನಿಂಗಪ್ಪ, ಬಾಗೀವಾಳು ನಂಜೇಗೌಡ, ಸಿ. ಹೆಚ್. ವಿರೂಪಣ್ಣ, ಎ. ವಿ. ಮಹೇಶ್ವರಯ್ಯ, ಕೆ.ಲಕ್ಷ್ಮಣ ಶೆಟ್ಟರು, ಹಾರನಹಳ್ಳಿ ನಂಜುಂಡಶೆಟ್ಟರು, ಉಂಡಿಗನಾಳು ಸಿ.ಓ. ಪುಟ್ಟಸಿದ್ದಯ್ಯ ಮುಂತಾದವರು. ೧೯೨೦ ರಿಂದ ೧೯೪೭ರವರೆಗೆ ಪ್ರತಿ ಚಳವಳಿಯಲ್ಲೂ ಭಾಗವಹಿಸಿ ಸೆರೆಮನೆ ವಾಸ ಅನುಭವಿಸಿದ್ದರು.

## ಬೇಲೂರು ತಾಲ್ಲೂಕು

ಕೆ. ಪುಪ್ಪೇಗೌಡ ಕೃಷಿಕರು ಮಲ್ಲಾಪುರ, ಎ. ಎಸ್. ಮಡಿವಾಳಪ್ಪ ಕೃಷಿಕರು ಅಡಗುರು ಪಟೇಲ್. ಬಿ.ಓ. ನಂಜೇಗೌಡ ಕೃಷಿಕರು, ಬಸ್ತಿಹಳ್ಳಿ ಹಳೆಬೀಡು ಮದ್ಯಪಾನ ನಿರೋಧ, ಚಲೇಜಾವ್ ಚಳುವಳಿಗಳಲ್ಲಿ ಭಾಗವಹಿಸಿದ್ದರು, ಬೇಲೂರು ಬೋರಣ್ಣಗೌಡರು, ಅರಣ್ಯ ಸತ್ಯಾಗ್ರಹ ಕರನಿರಾಕರಣೆ ಚಳವಳಿಗಳಲ್ಲಿ ಭಾಗವಹಿಸಿದ್ದರು. ಎಸ್. ಬಸವೇಗೌಡ, ಪಂಪ್‌ಹೌಸ್ ರಸ್ತೆ, ಬೇಲೂರು ೧೯೪೨ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿ ಪಿಕೆಟಿಂಗ್, ಅಸ್ಪೃಶ್ಯತಾ ನಿರ್ಮೂಲನೆ ಕರ ನಿರಾಕರಣೆ ಮುಂತಾದ ಚಳವಳಿಗಳಲ್ಲಿ ಬೇಲೂರು, ಹಳೆಬೀಡು, ಜಾವಗಲ್, ಅಡಗೂರು, ಮತ್ತಿಘಟ್ಟ ಸಾಣೇನಹಳ್ಳಿ ಮುಂತಾದ ಕಡೆಗಳಿಲ್ಲ ಭಾಗವಹಿಸಿದ್ದರು. ಇವರ ಈ ಉಗ್ರ ಚಳವಳಿಯಿಂದಾಗಿ ಅವರನ್ನು ಬಂಧಿಸಿ ಮೊದಲು

ಸಕಲೇಶಪುರ ಕಾರಾಗೃಹದಲ್ಲಿಟ್ಟು ನಂತರ ಹಾಸನಕ್ಕೆ ಕರೆತಂದು ಬಿಡುಗಡೆ ಮಾಡಲಾಯಿತು.

### ಹೊಳೆನರಸೀಪುರ ತಾಲ್ಲೂಕು

ಹೆಚ್. ಸಿ. ಸಿಂಗ್ರೀಗೌಡ, ಹೆಚ್. ಎಸ್. ವೈರಮುಡಿಗೌಡ, ರಾಯಪ್ಪ ಕೃಷಿಕರು ಮತ್ತು ದರ್ಜಿ, ಕೋಡಂಗಿ ಕೊಪ್ಪಲು ಇವರುಗಳು ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಡಾ. ಸೂರ್ಯನಾರಾಯಣ್ ರಾವ್, ಹೆಬ್ಬಾಲೆ ಸೂರ್ಯನಾರಾಯಣ್ ರಾವ್. ಚಂದ್ರಗಿರಿ ಸುಬ್ಬರಾವ್. ಹೆಚ್. ಬಿ. ಸತ್ಯನಾರಾಯಣ ಶೆಟ್ಟಿ, ಜಿ. ಪಿ. ಕೃಷ್ಣರಾವ್ ಮುಂತಾದ ಕಾಂಗ್ರೆಸ್ ಕಾರ್ಯಕರ್ತರಿದ್ದರು.೧೯೪೭ರಲ್ಲಿ ಜವಾಬ್ದಾರಿ ಸರ್ಕಾರದ ಘೋಷಣೆಗಳನ್ನು ಪ್ರಚಾರ ಮಾಡಿದರು. ಹೊಳೆನರಸೀಪುರ, ಹಾಸನ ಮತ್ತು ಚಿಕ್ಕಮಗಳೂರು ಜೈಲಿನಲ್ಲಿದ್ದು ನಂತರ ಬೆಂಗಳೂರು ಜಾಲಹಳ್ಳಿಯ ಇಟಾಲಿಯನ್ ಕ್ಯಾಂಪ್ ಜೈಲಿಗೆ ಕಳುಹಿಸಿದರು. ನಂತರ ಜವಾಬ್ದಾರಿ ಸರ್ಕಾರ ಅವರನ್ನು ಬಿಡುಗಡೆ ಮಾಡಿತು, ಹೊಳೆನರಸೀಪುರಕ್ಕೆ ಬಂದಾಗ ಅವರನ್ನು ವಿಜೃಂಭಣೆಯಿಂದ ಸ್ವಾಗತಿಸಿದರು ಇವರುಗಳೆಲ್ಲರೂ ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ದಾಸಪ್ಪ, ಸಿದ್ದಯ್ಯ ಮುಂತಾದ ನಾಯಕರ ಭಾಷಣಗಳಿಂದ ಪ್ರಭಾವಿತರಾಗಿ ಜನರಲ್ಲಿ ಜಾಗೃತಿಯನ್ನುಂಟು ಮಾಡಿದರು.

### ಅರಕಲಗೂಡು ತಾಲ್ಲೂಕು

ಅರಕಲಗೂಡು ವೆಂಕಟರಾಮಯ್ಯ, ಇಂಜಿನಿಯರ್ ಕಂಟ್ರಾಕ್ಟರ್ ಎ.ಎಸ್. ವೆಂಕಟಸುಬ್ಬಯ್ಯ ಶರ್ಮ ಇವರುಗಳು ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಎ.ಎಸ್. ವೆಂಕಟಸುಬ್ಬಯ್ಯ ಶರ್ಮರವರು ಅರಕಲಗೂಡಿನವರಾಗಿದ್ದು, ಮುಂಬಾಯಿಯಲ್ಲಿ ನೌಕರಿ ಮಾಡುತ್ತಿದ್ದರು. ೧೯೩೨–೩೩ರಲ್ಲಿ ಮುಂಬಾಯಿಯಲ್ಲಿದ್ದಾಗ ವಿದೇಶಿ ಬಟ್ಟೆಗಳ ಅಂಗಡಿ ಮುಂದೆ ಪಿಕೆಟಿಂಗ್ ನಡೆಸಿದರು.ನಂತರ ಹಾಸನಕ್ಕೆ ಬಂದು ಚಳವಳಿಯನ್ನು ಮುಂದುವರೆಸಿದರು. ೧೯೩೮ರಲ್ಲಿ ಈಚಲಮರ ಕಡಿಯುವ ಸತ್ಯಾಗ್ರಹವನ್ನು ನಡೆಸಿದರು. ಸತ್ಯಾಗ್ರಹಿ ಎಂಬ ದಿನಪತ್ರಿಕೆಯನ್ನು ಹೊರಡಿಸಿದರು. ವೆಂಕಟರಾಮಯ್ಯ ಇಂಜಿನಿಯರ್, ೧೯೨೭ರಲ್ಲಿ ಬೆಂಗಳೂರಿಗೆ ಗಾಂಧೀಜಿ



ಬಂದಿದ್ದಾಗ ಅವರನ್ನು ಭೇಟಿಯಾಗಿದ್ದರು. ೧೯೨೭ರಲ್ಲಿ ಸ್ವಯಂ ಸೇವಕ ಸೇವಕ ತಂಡದ ನಾಯಕರಾಗಿ ಉತ್ತರ ಕನ್ನಡ ಜಿಲ್ಲೆಗೆ ಹೋಗಿದ್ದರು. ನಂತರ ರಾಜಾಜಿಯವರ ಕರೆಯಂತೆ ನೂರು ಜನರ ತಂಡದೊಡನೆ ತಮಿಳುನಾಡಿಗೆ ತೆರಳಿದ್ದರು. ಅವರು ಆರು ತಿಂಗಳ ಶಿಕ್ಷೆಯನ್ನು ಅನುಭವಿಸಿದ್ದರು. ಬಿಡುಗಡೆಯಾದ ನಂತರ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅರಕಲಗೂಡಿನಲ್ಲಿ ಖಾದಿ ಗ್ರಾಮೋದ್ಯೋಗದ ಕೆಲಸಕ್ಕಾಗಿ ನೆಲೆಸಿದರು ಜೀವನಕ್ಕಾಗಿ ಕಂಟ್ರಾಕ್ಟರ್ ವೃತ್ತಿಯನ್ನು ಹಿಡಿದು ಅ. ಮೈ. ಕಂಟ್ರಾಕ್ಟರ್ಸ್ ಸಂಘವನ್ನು ೧೯೪೮ರಲ್ಲಿ ಸ್ಥಾಪಿಸಿ ಅದರ ಅಧ್ಯಕ್ಷರಾದರು.

### ಸಕಲೇಶಪುರ ತಾಲ್ಲೂಕು

ಡಾ. ಎಸ್. ಚಲುವರಾಯ್ ೧೯೩೦ರಿಂದ ೧೯೪೭ರವರೆಗೆ ಹೋರಾಟವನ್ನು ನಡೆಸಿದರು. ಬೆಂಗಳೂರಿನಲ್ಲಿ ಗಾಂಧೀಜಿಯವರು ಹರಿಜನ ನಿಧಿಗೆ ಧನ ಸಂಗ್ರಹಿಸಲು ಸಂಚಾರ ಕೈಗೊಂಡಾಗ ಅವರ ಕಾರ್ಯದಲ್ಲಿ ಭಾಗವಹಿಸಿದ್ದರು. ಗೀತಾ ಪ್ರಚಾರ, ಆಯುರ್ವೇದ ಪ್ರಚಾರ, ಸಮಾಜ ಸುಧಾರಣೆ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು, ಸಕಲೇಶಪುರಕ್ಕೆ ತೆರಳಿ ೧೯೩೬ರಲ್ಲಿ ಖಾದಿ ಭಂಡಾರವನ್ನು ತೆರೆದರು. ಹರ್ಡೀಕರ್ ಬಂದಿದ್ದಾಗ ಅವರ ಭಾಷಣ ಕಾರ್ಯಕ್ರಮಗಳಿಗೆ ಸಹಕಾರ ನೀಡಿದ್ದರು. ಶಿವಪುರದಲ್ಲಿ ನಡೆದ ಕಾಂಗ್ರೆಸ್‌ನಲ್ಲಿ ಭಾಗವಹಿಸಿ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

### ಚನ್ನರಾಯಪಟ್ಟಣ ತಾಲ್ಲೂಕು

ಅಕ್ಕ ಸಂಜೀವಶೆಟ್ಟಿ ವ್ಯಾಪಾರಿ, ಚನ್ನರಾಯಪಟ್ಟಣ, ಹೆಚ್.ಎಸ್. ಹೊಂಗೇಗೌಡ ಹಿರೀಸಾವೆ, ಹೆಚ್. ಜಿ. ಶಿವಣ್ಣ ಹಿರೀಸಾವೆ ಇವರುಗಳು ಶಿವಪುರ ಕಾಂಗ್ರೆಸ್ ನಂತರ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. ಸಂಜೀವಶೆಟ್ಟಿಯವರು ಚನ್ನರಾಯಪಟ್ಟಣದಲ್ಲಿ ೧೯೩೯ರಲ್ಲಿ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. ಬೆಳಗಿನಹಳ್ಳಿ ಬೋರಯ್ಯ, ಕಾರ್ಯದರ್ಶಿಯಾದರು. ಹೆಚ್. ಎನ್. ನರಸಯ್ಯ, ರಾಜಪ್ಪ ಕಾಂತರಾಪುರದ ಸೋಮಯ್ಯ, ಸಿ.ಎನ್. ಕೃಷ್ಣಪ್ಪ, ಕೃಷ್ಣಮೂರ್ತಿ, ಕೆಂಗೇಗೌಡರು ಅನೇಕೆರೆ, ನಲ್ಲೂರು ಸಂಜೀವಯ್ಯ, ಹುಚ್ಚೇಗೌಡ, ಗಂಜಿಗೆರೆ, ಹಲಸಿನಹಳ್ಳಿ ಬೊಮ್ಮೇಗೌಡ, ಕುಂಬಾರಹಳ್ಳಿ

ಜವರೇಗೌಡ ಮರಗೂರು ನಂಜೇಗೌಡ ತಾಲ್ಲೂಕು ಕಾಂಗ್ರೆಸ್ಸಿನ ಸದಸ್ಯರಾಗಿದ್ದರು. ೧೯೪೭ರಲ್ಲಿ ಚಳುವಳಿ ಆರಂಭವಾದಾಗ ಶಾಲೆಗಳಿಗೆ ಬಹಿಷ್ಕಾರ, ಕರ ನಿರಾಕರಣೆ, ಸರ್ಕಾರಿ ಕಾರ್ಯಗಳಿಗೆ ಅಡ್ಡಿ, ಪಿಕೆಟಿಂಗ್, ಈಚಲು ಮರ ಕಡಿಯುವ ಟೆಲಿಪೋನ್ ತಂತಿಗಳನ್ನು ಕತ್ತರಿಸುವ, ರೈಲು ಹಳಿಗಳನ್ನು ಕಿತ್ತು ಹಾಕುವ ಮರ ಕಡಿಯುವ, ಟೆಲಿಫೋನ್ ತಂತಿಗಳನ್ನು ಕತ್ತರಿಸುವ, ರೈಲು ಹಳಿಗಳನ್ನು ಕಿತ್ತು ಹಾಕುವ ಇನ್ನು ಅನೇಕ ಕಾರ್ಯಕ್ರಮಗಳನ್ನು ಆಚರಿಸಲಾಯಿತು. ಸಂತೆಯನ್ನು ನಿಷೇಧಿಲಾಯಿತು. ಭೂಗತ ಚಟುವಟಿಕೆಗಳನ್ನು ನಡೆಸಿದರು. ಹೊಂಗೇಗೌಡ ಹೆಚ್. ಎಸ್. ೧೯೪೨ರ ಚಳವಳಿಯಲ್ಲಿ ಭಾಗವಹಿಸಿದ್ದರು. ೧೯೪೭ರಲ್ಲಿ ಮೈಸೂರು ಜಾಥಾ ಹೋಗುವಾಗ ಅವರನ್ನು ಬಂಧಿಸಿ ಮಂಡ್ಯ ಜೈಲಿಗೆ ಕಳುಹಿಸಿದರು. ೧೯೪೭ ರಿಂದ ೧೯೪೭ರವರೆಗೆ ಸ್ವಾತಂತ್ರ್ಯ ಚಳವಳಿಗಾಗಿ ಹೋರಾಟ ನಡೆಸಿದರು. ಹೆಚ್. ಜಿ. ಶಿವಣ್ಣ ೧೯೪೭ರಲ್ಲಿ ಚಲೇಜಾವ್ ಚಳವಳಿಯಲ್ಲಿ ಭಾಗವಹಿಸಿದ್ದರು. ಆದ್ದರಿಂದ ಇವರು ಮೂರು ತಿಂಗಳ ಶಿಕ್ಷೆಯನ್ನು ಅನುಭವಿಸಿದ್ದರು. ೧೯೪೭ರಲ್ಲಿ ಮೈಸೂರು ಜಾಥಾ ಚಳವಳಿಯಲ್ಲೂ ಭಾಗವಹಿಸಿದ್ದರು.

ಹಾಸನ ಜಿಲ್ಲೆಯ ಗೊರೂರು ಪ್ರದೇಶ ಚಾರಿತ್ರಿಕವಾಗಿ ಐತಿಹಾಸಿಕ ಹಿನ್ನೆಲೆಯೊಂದಿಗೆ ಕಲೆಯ ತೌರೂರಾಗಿ ಧಾರ್ಮಿಕ ಸೌಹಾರ್ದತೆಯ ನೆಲೆವೀಡಾಗಿ, ವಾಸ್ತುಶಿಲ್ಪದಲ್ಲಿ ವಿಶ್ವವಿಖ್ಯಾತಿಯನ್ನು ಪಡೆದುಕೊಂಡಿದ್ದಲ್ಲದೆ ಆಧುನಿಕ ಕಾಲದಲ್ಲಿಯೂ ಸ್ವಾತಂತ್ರ್ಯಚಳವಳಿ ಹಾಗೂ ಹೋರಾಟದ ವಿಭಿನ್ನತೆಯಿಂದಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಕರ್ನಾಟಕದ ರಾಷ್ಟ್ರೀಯ ಚಳವಳಿಯ ಇತಿಹಾಸದಲ್ಲಿ ಗೊರೂರು ಪ್ರದೇಶದ ಸ್ವಾತಂತ್ರ್ಯ ಹೋರಾಟಗಳು, ಹೋರಾಟಗಾರರ ಚಳವಳಿಯ ದೃಷ್ಟಿಕೋನ ಹಾಗೂ ಹೋರಾಟದ ವಿಧಾನಗಳು ಮಿಕ್ಕೆಲ್ಲಾ ಭಾಗಗಳ ಹೋರಾಟಕ್ಕಿಂತ ಭಿನ್ನವಾಗಿದ್ದು ಗಾಂಧೀಜಿಯವರ ರಚನಾತ್ಮಕ ಕಾರ್ಯಗಳು, ಮದ್ಯಪಾನ ವಿರೋಧಿ ಚಳವಳಿ ಹರಿಜನೋದ್ಧಾರ, ಖಾದಿ ಗ್ರಾಮೋಧ್ಯೋಗ, ಗೃಹ ಗುಡಿ ಕೈಗಾರಿಕೆಗಳ ಸ್ಥಾಪನೆ ಮುಂತಾದ ಕಾರ್ಯಕ್ರಮಗಳ ಜೊತೆಗೆ ಇಡೀ ರಾಜ್ಯದಲ್ಲಿ ಪ್ರಪ್ರಥಮವಾಗಿ ಸಂತೆ ಸುಂಕ ನಿರಾಕರಣ ಚಳವಳಿಯನ್ನು ಆಯೋಜಿಸಿ ಯಶಸ್ಸು ಕಂಡಿರುವುದು ಹೆಮ್ಮೆಯ ವಿಚಾರ. ಭಾರತ ಸ್ವಾತಂತ್ರ್ಯದ ಎಪ್ಪತ್ತೈದನೆಯ ವರ್ಷಾಚರಣೆಯ ಈ ಶುಭ ಸಮಯದಲ್ಲಿ



ಈಗ ನಾವು ಸವಿಯುತ್ತಿರುವ ಸ್ವಾತಂತ್ರ್ಯವನ್ನು ಗಳಿಸುವುದಕ್ಕಾಗಿ ಭಾರತೀಯರು ನಡೆಸಿದ ಹೋರಾಟ, ತ್ಯಾಗ, ಬಲಿದಾನ, ನೋವುನಲಿವುಗಳ ಇತಿಹಾಸವನ್ನು ಸ್ಮರಿಸುವುದಕ್ಕೆ ಇದು ಸೂಕ್ತ ಸಂದರ್ಭ. ಸ್ವತಂತ್ರ್ಯ ಭಾರತದಲ್ಲಿ ಬದುಕುತ್ತಿರುವ ನಾವು ಅದರ ರಚನೆಗೆ ವ್ಯಯವಾದ ಅಗಾಧ ಶ್ರಮ ಮತ್ತು ಬಲಿದಾನಗಳನ್ನು ತಿಳಿದುಕೊಳ್ಳಬೇಕು. ಹಾಗೂ ಅಂತಹ ಮಹಾನ್ ಚೇತನಗಳ ಜೀವನ ತ್ಯಾಗ ಬಲಿದಾನ ಹೋರಾಟ ದೇಶ ಭಾಷೆ ಸಂಸ್ಕೃತಿ ಆಚಾರ ವಿಚಾರಗಳು ಪ್ರಸ್ತುತ ಯುವ ಸಮುದಾಯಕ್ಕೆ ಹಾಗೂ ಮುಂದಿನ ಪೀಳಿಗೆಯವರೆಗೆ ಮಾರ್ಗದರ್ಶನ ಮಾಡಿ ಸಭ್ಯ ನಾಗರಿಕರನ್ನಾಗಿ ಮಾಡಲಿ ಎಂಬುವುದೇ ಈ ಒಂದು ಲೇಖನದ ಆಶಯ.

❑

## ಆಕರ ಗ್ರಂಥಗಳು


೧. Dr.M. B. Gayathri - Development of Mysore state – prasaranga, Mysore 1997.

೨. ಡಾ. ಬಿ. ಡಿ. ಕುಮಾರ್ – ಹಾಸನ ಸೀಮೆಯ ಐತಿಹ್ಯಗಳು, ಉನ್ನತಿ ಪ್ರಕಾಶನ ಮೈಸೂರು – ೨೦೧೦.

೩. ಚೌಡಳ್ಳಿ ಪುಟ್ಟರಾಜು (ಸಂ) ಬೆಳಕಿನೆಡೆಗೆ ಹಾಸನ ಜಿಲ್ಲಾ ಒಕ್ಕಲಿಗರ ನಡಿಗೆ, ಜಿಲ್ಲಾ ಒಕ್ಕಲಿಗರ ಸಂಘ, ಹಾಸನ –೨೦೧೧.

೪. ಸಿ. ಈ. ವೆಂಕಟಯ್ಯ – ಗೊರೂರು ರಾಮಸ್ವಾಮಿ ಅಯ್ಯಂಗಾರ್ – ಸಾಹಿತ್ಯ ಅಕಾಡೆಮಿ, ಬೆಂಗಳೂರು –೨೦೦೧.

೫. ಡಾ. ಹೆಚ್. ಎಸ್. ಗೋಪಾಲ್ ರಾವ್ – ಕರ್ನಾಟಕ ಏಕೀಕರಣ ಇತಿಹಾಸ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು – ೧೯೯೬

೬. Dr. Suryanatha Kamath - Quit India Movement in Karnataka, Lipi Prakashana, Bangalore - 1988.

೭. ಡಾ. ಕೆ. ಎಲ್. ಎನ್. ಮೂರ್ತಿ – ಮೈಸೂರು ಸಂಸ್ಥಾನದ ಪರಂಪರೆ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು – ೨೦೧೧

೮. ಡಾ. ಎ. ಎನ್. ಸುರೇಶ್ – ಮೈಸೂರು ಸಂಸ್ಥಾನದಲ್ಲಿ ರಚನಾತ್ಮಕ ಕಾರ್ಯ ಕ್ರಮಗಳು (೧೯೨೦ ರಿಂದ ೧೯೪೮), ರಚನಾ ಪ್ರಕಾಶನ, ಮೈಸೂರು – ೨೦೧೧.

೯. ಕೆ. ಎಫ್. ಪಾಟೀಲ್ – ಕರ್ನಾಟಕ ಏಕೀಕರಣದ ಹಾದಿಯಲ್ಲಿ, ವಿವೇಕ ಪ್ರಕಾಶನ ಹುಬ್ಬಳ್ಳಿ – ೧೯೮೬.

೧೦. ಡಾ. ಸೂರ್ಯನಾಥ ಕಾಮತ್ – ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಎಂ.ಸಿ.ಸಿ ಪಬ್ಲಿಕೇಷನ್ – ೧೯೭೩.

೧೧. ಡಾ. ಹಂಪನಳ್ಳಿ ತಿಮ್ಮೇಗೌಡ – ಹಿರಿಮೆಯ ಹಾಸನ, ಸಂವೇದನಾ ಪ್ರಕಾಶನ, ಹಾಸನ – ೨೦೦೬.

೧೨. ಉದಯ ರವಿ (ಸಂ) – ಹಾಸನ ಜಿಲ್ಲೆಯ ಸರಸ್ವತ ದಿಗ್ಗಜರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಹಾಸನ – ೨೦೧೦.

೧೩. ಡಾ. ಎಂ.ಎಸ್. ಶೇಖರ್ (ಸಂ) – ಹೋಯ್ಸಳ ದರ್ಪಣ, ಹೋಯ್ಸಳೋತ್ಸವ ಸಮಿತಿ, ಹಾಸನ – ೨೦೦೪.

೧೪. ಡಾ. ಎಂ.ಎಸ್. ಶೇಖರ್ (ಸಂ) – ಹೋಯ್ಸಳ ದೀಪ್ತಿ, ಸುವರ್ಣ ಕರ್ನಾಟಕ ಸಂಭ್ರಮ ಸಮಿತಿ, ಹಾಸನ – ೨೦೦೬.

೧೫. ಅಭಿಶಂಕರ್ ಕೆ. ಮೈಸೂರ್ ಸ್ಟೇಟ್ ಗೆಜೆಟ್ ಹಾಸನ ಜಿಲ್ಲೆ, ಗೌರ್ನಮೆಂಟ್ ಪ್ರೆಸ್ ಬೆಂಗಳೂರು.

೧೬. ಜೆರ್ನಲ್ ಆಫ್ ಹಿಸ್ಟಾರಿಕಲ್ ಸ್ಟಡೀಸ್ ಎಂಜಿಎಂ ಸಂಪುಟ ೩೯.

೧೭. ಕೆ. ರಾಮಣ್ಣ (ಸಂ) ಸೋಲಿಲ್ಲದ ಸರದಾರರು, ಭಾರತಿ ಪ್ರಕಾಶನ ಮೈಸೂರು ೨೦೦೮ ಪು.ಸಂ. ೨೧೯ ಮತ್ತು ಅಭಿಶಂಕರ್ ಕೆ. ಮೈಸೂರ್ ಸ್ಟೇಟ್ ಗೆಜೆಟ್ ಹಾಸನ ಜಿಲ್ಲೆ, ಗೌರ್ನಮೆಂಟ್ ಪ್ರೆಸ್ ಬೆಂಗಳೂರು.

೧೮. ಸ್ಪೆಷಲ್ ಬ್ರಾಂಚ್ ಅಬಸ್ಟ್ರಾಕ್ಟ್ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ ವಿಧಾನಸೌಧ ಬೆಂಗಳೂರು. ೧೯೩೯.

೧೯. ಜಿ.ಎಸ್. ಹಾಲಪ್ಪ ಫ್ರಿಡಂ ಮುಮೆಂಟ್ ಇನ್ ಕರ್ನಾಟಕ, ಗರ್ನಮೆಮಟ್ ಪ್ರೆಸ್ ಮೈಸೂರು ೧೯೬೪.

೨೦. ಸೂರ್ಯನಾಥ ಎಸ್. ಕಾಮತ್, ಸ್ವತಂತ್ರ ಸಂಗ್ರಾಮದ ಸ್ಮೃತಿಗಳು ಎಂ.ಸಿ.ಸಿ ಪಬ್ಲಿಕೇಷನ್ ಬೆಂಗಳೂರು ಸಂಪುಟ ೨.

೨೧. ಟಿ.ಡಿ. ತಮ್ಮಣ್ಣಗೌಡ ನಿಸ್ವಾರ್ಥ ಕರ್ಮಯೋಗಿ ಬಿ.ಎನ್. ಬೋರಣ್ಣಗೌಡ, ಸೌರಭ ಪ್ರಕಾಶನ ಬೇಲೂರು.

೨೨. ಸೂರ್ಯನಾಥ ಎಸ್. ಕಾಮತ್, ಸ್ವತಂತ್ರ ಸಂಗ್ರಾಮದ ಸ್ಮೃತಿಗಳು ಎಂ.ಸಿ.ಸಿ ಪಬ್ಲಿಕೇಷನ್ ಬೆಂಗಳೂರು ಸಂಪುಟ ೨.

೨೩. ಪ್ರೈವೇಟ್ ಪೇಪರ್ಸ್ ಕಲೆಕ್ಷನ್, ೫೨ / ಪಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ವಿಧಾನಸೌಧ ಬೆಂಗಳೂರು.

೨೪. ಗೊರೂರು ಅನಂತ ರಾಜು – ಹಬ್ಬಗಳು ಜನಪದರ ನಂಬಿಕೆಗಳು – ಹಾಸನ ೨೦೧೩.

೨೫. ಗೊರೂರು ಗೌರವ ಗ್ರಂಥ – ಹಾ ಮಾ ನಾಯಕ್ ಮೈಸೂರು ವಿಶ್ವವಿದ್ಯಾನಿಲಯ.

೨೬. ಡಾ. ಯೋಗೇಶ್ ಎನ್ ಇ – ಹಾಸನ ಜಿಲ್ಲೆಯ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗಳು – ೧೯೪೭ – ೨೦೦೦

(ಅಪ್ರಕಟಿತ ಪಿ ಹೆಚ್ ಡಿ ಮಹಾಪ್ರಬಂಧ) ಮೈಸೂರು ವಿಶ್ವವಿದ್ಯಾನಿಲಯ ೨೦೧೯.

೨೭. Special branch abstract 1930 – 1950 Karnataka State Archives Bangalore.

೨೮. Mysore Congres Report 1938 – 1947.


೨೯. The quartrly Journal of Mythic Society – Reminiscence of freedom movement H C Venugopal Vol – L XXXIV.

೩೦. Mysore Representive Asembly Reports.

೩೧. Mysore Legeslivate Asembly Reports.

೩೨. Dr. Ram Rathan – Sathyagraha movement in Karnataka 1919 – 1948 Universilty of Mysore.


* * * *




ಗೊರೂರು ಭೂಪಟ




**ಗೊರೂರು ಡ್ಯಾಮ್**



**ಗೊರೂರು ಭಾಗದ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು**



**ಗೊರೂರು ಸಂಪತ್ ಅಯ್ಯಂಗಾರ್**




**ಗೊರೂರು ರಾಮಸ್ವಾಮಿ ಅಯ್ಯಂಗಾರ್**





**ರಾಜಮಂತ್ರ ಪ್ರವೀಣ ಹೆಚ್ ಬಿ ಗುಂಡಪ್ಪ ಗೌಡ**



**ಬಿ ಎನ್ ಬೋರಣ್ಣ ಗೌಡ**



**ಎಲ್ ಟಿ ಕಾರ್ಲೆ**



**ಡಿ ಆರ್ ಕರಿಗೌಡ**

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬಸಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |